ಮಾನವಿಕ ಕರ್ಣಾಟಕ

ಸಂಪುಟ ೧೨ ಸಂಚಿಕೆ ೪

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೮೨

ಲೇಖಕರಿಗೆ ಸೂಚನೆಗಳು

೧ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಸ್ವತಂತ್ರ ಅಥವಾ ಅನುವಾದಿತ ಲೇಖನಗಳನ್ನು 'ಮಾನವಿಕ ಕರ್ಣಾಟಕ' ದಲ್ಲಿ ಪ್ರಕಟಿಸಲಾಗುವುದು. ಲೇಖನ ಅನುವಾದವಾಗಿದ್ದರೆ ಮೂಲ ಲೇಖಕರ ಮತ್ತು ಲೇಖನದ ಹೆಸರುಗಳನ್ನೂ ಲೇಖನದ ಆಕರವನ್ನೂ ಸೂಚಿಸಬೇಕಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಸಮ್ಮತಿಯನ್ನೂ ಲೇಖನದೊಂದಿಗೆ ಕಳುಹಿಸಬೇಕು.

೨ ಲೇಖನವನ್ನು ಕಾಗದದ ಒಂದೇ ಬದಿಯಲ್ಲಿ ಸ್ಪಷ್ಟವಾಗಿ ಬರೆದಿರಬೇಕು; ಅಥವಾ ಟೈಪು ಮಾಡಿರಬೇಕು. ಲೇಖಕರು ತಮ್ಮ ಲೇಖನದೊಂದಿಗೆ ತಮ್ಮ ಸಂಕ್ಷಿಪ್ತ ಪರಿಚಯವನ್ನು ಕಳುಹಿಸಿಕೊಡಬೇಕು.

೩ ಲೇಖನಕ್ಕೆ ಅವಶ್ಯಕವಾದ ಚಿತ್ರಗಳಿದ್ದರೆ ಅದನ್ನು ಚಿತ್ರಕಾರರಿಂದ ಇಂಡಿಯನ್ ಇಂಕಿನಲ್ಲಿ ಬರೆಸಿ ಕಳುಹಿಸಿಕೊಡಬೇಕು. ಇದು ಸಾಧ್ಯವಾಗದಿದ್ದರೆ ಯಾವುದಾದರೂ ಪ್ರಕಟಿತ ಪುಸ್ತಕದಲ್ಲಿರುವ ಚಿತ್ರಗಳನ್ನು ಸೂಚಿಸಬಹುದು; ಅವುಗಳಲ್ಲಿ ಬದಲಾವಣೆಗಳೇನಾದರೂ ಅವಶ್ಯವಿದ್ದರೆ ಅವನ್ನೂ ಸೂಚಿಸಬೇಕು.

೪ ಸ್ವೀಕೃತವಾಗದ ಲೇಖನವನ್ನು ಹಿಂದಕ್ಕೆ ಪಡೆಯಬಯಸುವವರು ಈ ಬಗ್ಗೆ ತಿಳಿಸಬೇಕಲ್ಲದೆ ಇದಕ್ಕೆ ಸಾಕಷ್ಟು ಅಂಚೆ ಚೀಟಿ ಕಳುಹಿಸಿಕೊಡಬೇಕು.

೫ ಅಚ್ಚಾದ ಲೇಖನದ ೨೫ ಪ್ರತಿಗಳನ್ನು ಅದರ ಲೇಖಕರಿಗೆ ಒದಗಿಸ ಲಾಗುವುದು. ಹೆಚ್ಚು ಪ್ರತಿಗಳು ಬೇಕಾಗಿದ್ದರೆ ಮೊದಲೇ ತಿಳಿಸಬೇಕು. ಅದಕ್ಕೆ ತಗಲುವ ವೆಚ್ಚವನ್ನು ಲೇಖಕರೇ ವಹಿಸಿಕೊಳ್ಳಬೇಕು.

೬ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಿಗೆ ಸಂಬಂಧಿಸಿದಂತೆ ವಾಚಕರಿಂದ ಬರುವ ವಿಚಾರ ಪ್ರಚೋದಕವಾದ ಪತ್ರಗಳಿಗೆ ಸ್ವಾಗತವುಂಟು. ಇವುಗಳನ್ನು ಪ್ರಕಟಿಸುವ, ಬಿಡುವ ಅಥವಾ ಸೂಕ್ತ ಬದಲಾವಣೆಯೊಂದಿಗೆ ಪ್ರಕಟಿಸುವ ಸ್ವಾತಂತ್ರ್ಯ ಸಂಪಾದಕರಿಗೆ ಸೇರಿದೆ.

೭ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಕನ್ನಡ ಅಥವಾ ಇಂಗ್ಲಿಷ್ ಪುಸ್ತಕ ಗಳನ್ನು ವಿಮರ್ಶೆಗಾಗಿ ಕಳುಹಿಸಬಯಸುವವರು ಅವುಗಳ ಎರಡೆರಡು ಪ್ರತಿ ಕಳುಹಿಸಿ ಕೊಡಬೇಕು.

೮ ಲೇಖನಗಳನ್ನೂ ವಿಮರ್ಶೆಗಾಗಿ ಪುಸ್ತಕಗಳನ್ನೂ ಕಳುಹಿಸುವವರು ಸಂಪಾದಕರು, ಮಾನವಿಕ ಕರ್ಣಾಟಕ, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು–೫೭೦ ೦೦೬ ಎಂಬ ವಿಳಾಸಕ್ಕೆ ಕಳುಹಿಸಬೇಕು.

ಮಾನ್ಯರೆ,

ಈ ಸಂಚಿಕೆಯೊಂದಿಗೆ ಮಾನವಿಕ ಕರ್ಣಾಟಕದ 12ನೆಯ ಸಂಪುಟ ಮುಗಿಯುತ್ತದೆ. 13ನೆಯ ಸಂಪುಟಕ್ಕೆ ತಮ್ಮ ಚಂದಾಹಣವನ್ನು ದಯವಿಟ್ಟು ತಕ್ಷಣವೇ ಕಳಿಸಿಕೊಡಿರಿ. ಹಾಗೆ ಕಳುಹಿಸುವಾಗ ಈ ಹಾಳೆಯ ಮಗ್ಗಲಿಗಿರುವ ಹಾಳೆಯಲ್ಲಿ ವಿವರಗಳನ್ನು ತುಂಬಿ ಕಳುಹಿಸಿಕೊಡಿರಿ.

ಇಂತೀ ನಮಸ್ಕಾರಗಳು
ಕೆ.ಟಿ. ವೀರಪ್ಪ
ನಿರ್ದೇಶಕರು

ಮಾನ್ಯರೆ,

ದಯವಿಟ್ಟು ನನ್ನನ್ನು/ ಈ ಸಂಸ್ಥೆಯನ್ನು 'ಮಾನವಿಕ ಕರ್ಣಾಟಕದ' ಹದಿಮೂರನೆಯ ಸಂಪುಟಕ್ಕೆ ಚಂದಾದಾರನನ್ನಾಗಿ ದಾಖಲು ಮಾಡಿಕೊಳ್ಳಬೇಕೆಂದು ಪ್ರಾರ್ಥಿಸುತ್ತೇನೆ. ವಾರ್ಷಿಕ ಚಂದಾಹಣ ನಾಲ್ಕು/ಆರು/ಎಂಟು ರೂಪಾಯಿಗಳನ್ನು ಮನಿಯಾರ್ಡರ್/ಚೆಕ್/ಡ್ರಾಫ್ಟ್ ಮೂಲಕ ಇಂದು ಕಳುಹಿಸಿದ್ದೇನೆ. ವಿವರಗಳನ್ನು ಕೆಳಗೆ ನಮೂದಿಸಿದ್ದೇನೆ.

ಇಂತೀ
(ರುಜು)

1. ಹೆಸರು —

[ಸ್ಪಷ್ಟವಾಗಿ ತಿಳಿಯುವಂತೆ ಬರೆಯಿರಿ]

2. ವಿಳಾಸ —

[ವಿದ್ಯಾರ್ಥಿಯಾಗಿದ್ದರೆ ಶಾಲೆ ಅಥವಾ ಕಾಲೇಜಿನ ಹಾಗೂ ಮನೆಯ ವಿಳಾಸಗಳೆರಡನ್ನೂ ನಮೂದಿಸಿರಿ]

3. ಶಿಫಾರಸು —

[ವಿದ್ಯಾರ್ಥಿಗಳು ತಮ್ಮ ಶಾಲಾ ಕಾಲೇಜುಗಳ ಮುಖ್ಯಸ್ಥರಿಂದ ತಾವು ಅಲ್ಲಿ ವ್ಯಾಸಂಗ ಮಾಡುತ್ತಿರುವ ಬಗೆಗೆ ಇಲ್ಲಿ ಶಿಫಾರಸು ಬರೆಸಬೇಕು]

4. ಪತ್ರಿಕೆಯನ್ನು ರಿಜಿಸ್ಟ್ರೇಷನ್ ಮೂಲಕ ಕಳುಹಿಸಬೇಕೆ? —

5. ಕಳೆದ ವರ್ಷ ನನ್ನ ಚಂದಾ ಸಂಖ್ಯೆ —

'ಮಾನವಿಕ ಕರ್ಣಾಟಕ'ದಲ್ಲಿ ಆಸಕ್ತಿ ತೋರಿಸಬಹುದಾದ ನನ್ನ ಕೆಲವು ಮಿತ್ರರ ವಿಳಾಸಗಳು :

1.

[ತಿರುಗಿಸಿ

2.

3.

4.

5

ಮಾನವಿಕ ಕರ್ಣಾಟಕದ ಚಂದಾ ವಿವರ:

ಅಜೀವ ಸದಸ್ಯತ್ವ	:	ರೂ.	100-00
ಪ್ರತಿ ಸಂಪುಟಕ್ಕೆ ವಿದ್ಯಾರ್ಥಿಗಳಿಗೆ	:	ರೂ.	4-00
ಇತರರಿಗೆ	:	ರೂ.	6-00
ಸಂಸ್ಥೆಗಳಿಗೆ	:	ರೂ.	8-00

ವಿಳಾಸ :

ಡೈರೆಕ್ಟರ್, ಪ್ರಸಾರಾಂಗ
ಮೈಸೂರು-570006

ಮಾನವಿಕ ಕರ್ಣಾಟಕ

ಸಂಪುಟ ೧೨ ಸಂಚಿಕೆ ೪

೪೮

ಆಗಸ್ಟ್ ಸಂಚಿಕೆ

ಮೈಸೂರು

ಮೈಸೂರು ವಿಶ್ವವಿದ್ಯಾನಿಲಯ

೧೯೮೨

MANAVIKA KARNATAKA, Kannada quarterly, of the University of Mysore. Volume 12, Number 4, August 1982. Edited by Dr. B. R. Gopal and Dr. C. M. Muniramappa.

ಪ್ರಧಾನ ಸಂಪಾದಕರು

ಡಾ. ಹಾ. ಮಾ. ನಾಯಕ

ಸಂಪಾದಕರು

ಡಾ. ಬಾ. ರಾ. ಗೋಪಾಲ್

ಡಾ. ಸಿ. ಎಂ. ಮುನಿರಾಮಪ್ಪ

ಪ್ರಕಾಶಕರು

ಕೆ. ಟಿ. ವೀರಪ್ಪ

ನಿರ್ದೇಶಕರು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಮುದ್ರಕರು

ಶ್ರೀಲಕ್ಷ್ಮೀ ಮುದ್ರಣಾಲಯ, ರವೆ ಬೀದಿ, 2 ನೇ ಕ್ರಾಸ್, ಮೈಸೂರು - 1

ವಿಷಯ ಸೂಚಿ

		ಶ್ರೀಯುತರಾದ	ಪುಟ
೧	ನಾಮಾವಳಿಯಲ್ಲಿ 'ಗಂಧವಾರಣ' ಶಬ್ದ : ಒಂದು ಟಿಪ್ಪಣಿ	ಟಿ. ವಿ. ವೆಂಕಟಾಚಲ ಶಾಸ್ತ್ರೀ	೧–೯
೨	ತೊದವರ ಮರಣ ಸಂಪ್ರದಾಯಗಳು	ಅಂಬಳಿಕೆ ಹಿರಿಯಣ್ಣ	೧೧–೧೮
೩	ಪ್ರಾಚೀನ ಪಾಶ್ಚಾತ್ಯ ತಾತ್ತ್ವಿಕ ಚಿಂತನೆ–ಒಂದು ಸ್ಥೂಲ ವಿವೇಚನೆ	ವಿ. ಎನ್. ಶೇಷಗಿರಿರಾವ್	೧೯–೩೧
೪	ಕಲಂಕಾರಿ ಕಲಾವಿದ ಕೋಡೂರು ರಾಮಮೂರ್ತಿ	ಪಿ. ಆರ್. ತಿಪ್ಪೇಸ್ವಾಮಿ	೩೯–೪೪
೫	ಶಾಸನಾನುವಾದ–ಕೆಲವು ಸಮಸ್ಯೆಗಳು	ಎಚ್.ಎಂ. ನಾಗರಾಜರಾವ್	೪೫–೫೬
೬	ಧರ್ಮಗಳಲ್ಲಿ ಯೋಗ	ಕೆ. ಕೇಶವಮೂರ್ತಿ	೫೭–೬೬
	ಪುಸ್ತಕ ಲೋಕ–ಭಗವತ್ಸಮ್ಮುಖದ ಅನುಷ್ಠಾನ	ಅನು : ಸಿ. ಸೇತೂಬಾಯಿ ವಿಮರ್ಶೆ : ಡಿ. ಎಲ್. ಪಾಟೀಲ	೬೭–೬೯

ಈ ಸಂಚಿಕೆಯ ಲೇಖಕರು

೧	ಟಿ. ವಿ. ವೆಂಕಟಾಚಲ ಶಾಸ್ತ್ರೀ	ರೀಡರ್, ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು–೫೭೦೦೦೬
೨	ಅಂಬಳಿಕೆ ಹಿರಿಯಣ್ಣ	ಅಧ್ಯಾಪಕ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು-೫೭೦೦೦೬
೩	ವಿ. ಎನ್. ಶೇಷಗಿರಿರಾವ್	ಅಧ್ಯಾಪಕ, ತತ್ತ್ವಶಾಸ್ತ್ರ ವಿಭಾಗ, ಮಾನಸ ಗಂಗೋತ್ರಿ, ಮೈಸೂರು-೫೭೦೦೦೬
೪	ಪಿ. ಆರ್. ತಿಪ್ಪೇಸ್ವಾಮಿ	ಕ್ಯೂರೇಟರ್, ಜಾನಪದ ವಸ್ತು ಸಂಗ್ರಹಾಲಯ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು-೫೭೦೦೦೬
೫	ಎಚ್. ಎಂ. ನಾಗರಾಜರಾವ್	ಶಾಸನ ಸಹಾಯಕ, ಎಪಿಗ್ರಾಫಿಯ ಕರ್ನಾಟಿಕ ವಿಭಾಗ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು-೫೭೦೦೦೬
೬	ಕೆ. ಕೇಶವಮೂರ್ತಿ	ಭೌತಶಾಸ್ತ್ರ ಅಧ್ಯಾಪಕ, ಜೂನಿಯರ್ ಕಾಲೇಜು, ಶ್ರೀರಂಗಪಟ್ಟಣ-೫೭೧೪೩೮
೭	ಡಿ. ಎಲ್. ಪಾಟೀಲ	ಪ್ರಾಧ್ಯಾಪಕ, ತತ್ತ್ವಶಾಸ್ತ್ರ ವಿಭಾಗ, ಮಹಾರಾಜ ಕಾಲೇಜು, ಮೈಸೂರು-೫೭೦೦೦೫

ಟಿ. ವಿ. ವೆಂಕಟಾಚಲ ಶಾಸ್ತ್ರೀ

ನಾಮಾವಳಿಯಲ್ಲಿ 'ಗಂಧವಾರಣ' ಶಬ್ದ : ಒಂದು ಟಿಪ್ಪಣಿ

ಶ್ರವಣಬೆಳುಗೊಳದ ಚಿಕ್ಕಬೆಟ್ಟದಲ್ಲಿ ವಿಷ್ಣುವರ್ಧನನ ರಾಣಿ ಶಾಂತಲೆ ಶಾಂತಿ ಜಿನನಿಗಾಗಿ ೧೧೨೩ರಲ್ಲಿ ನಿರ್ಮಾಣಮಾಡಿಸಿದ ಬಸದಿಗೆ 'ಗಂಧವಾರಣ ಬಸದಿ' ಎಂಬುದಾಗಿ ಹೆಸರಿದೆ. ನಿರ್ಮಾಣ ಕುರಿತ ಶಾಸನದಲ್ಲಿ (ಎ. ಕ., ii-೧೬೧/೧೩೧) ಈ ಹೆಸರು ಸೂಚಿತವಾಗಿಲ್ಲವಾದರೂ ಇದೇ ಬಸದಿಯ ಇನ್ನೊಂದು ದೀರ್ಘ ಶಾಸನದಲ್ಲಿ (ಎ. ಕ., ii-೧೬೨/೧೩೨), ಅದರ ೪ನೆಯ ಸಾಲಿನಲ್ಲಿ 'ಸವತಿಗಂಧಬಸ್ತಿ ಬಸದಿ' ಎಂದೂ ೫೦ನೆಯ ಸಾಲಿನಲ್ಲಿ 'ಸವತಿ ಗಂಧವಾರಣ ಬಸದಿ' ಎಂದೂ ಆ ಹೆಸರು ಸೂಚಿತವಾಗಿರುವುದು ಕಾಣುತ್ತದೆ. ಇದೇ ಶಾಸನದಲ್ಲಿಯೇ, ಇನ್ನೂ ಸ್ವಲ್ಪ ಮೊದಲಲ್ಲಿ, ಸಾಲು ೪ರಲ್ಲಿ, ಆಕೆಯನ್ನು 'ಉದ್ವೃತ್ತಸವತಿಗಂಧವಾರಣೆ' ಎಂಬುದಾಗಿ ಹೇಳಿದೆ. ವಿಷ್ಣುವರ್ಧನನ ಬೇಲೂರು ಶಾಸನದಲ್ಲಿ (ಎ. ಕ, v-ii, ೫೮) ಆಕೆಯನ್ನು ಕುರಿತ ನಾಮಾವಳಿಯಲ್ಲಿ ಇದೇ ಮಾತು 'ಸವತಿ ಗಂಧಹಸ್ತಿ' ಎಂಬುದಾಗಿದೆ. ಇದನ್ನು ಗಮನಿಸಿದಾಗ ಆಕೆಯ ಈ ಬಿರುದು ಕಾರಣವಾಗಿ ಆಕೆ ನಿರ್ಮಾಣ ಮಾಡಿಸಿದ ಬಸದಿಗೆ ಅದಕ್ಕೆ ಅನುಗುಣವಾದ ಹೆಸರು ಬಂದಿರುವುದು ಸಹಜವೇ ಆಗಿದೆ ಎನ್ನಬಹುದು.

ಎ.ಕ., ಶಾಸನ ಸಂಪುಟದ ಇಂಗ್ಲಿಷ್ ಅನುವಾದದಲ್ಲಿ "a rutting elephant to ill-mannered co-wives" ಎಂದು 'ಉದ್ವೃತ್ತ ಸವತಿ ಗಂಧವಾರಣೆ' ಶಬ್ದವನ್ನು ಅರ್ಥಮಾಡಿದೆ. "ಮೀರಿ ವರ್ತಿಸುವ ಸವತಿಯರನ್ನು ಹದ್ದಿನಲ್ಲಿಡುವವಳು" ಎಂಬುದಾಗಿ, ರೂಢಿಯಲ್ಲಿ ಸಹ ಈ ಮಾತಿನ ಅರ್ಥವನ್ನು ತಿಳಿಯಲಾಗಿದೆ. "ಸವತಿ ಸವತಿಗೆ ಪುರುಡಿಸಳ್" ಎಂಬ ನ್ಯಾಯದಂತೆ (ಶಬ್ದಮಣಿದರ್ಪಣ, ಸೂ. ೧೪೧) ಮೇಲುನೋಟಕ್ಕೆ ಈ ಅರ್ಥ ಸರಿಯಾಗಿರುವಂತೆಯೇ ತೋರುತ್ತದೆ. ಆದರೆ ವಿಚಾರಕ್ಕೆ ಇಲ್ಲಿ ಕೊಂಚ ಅವಕಾಶವಿದೆಯೆಂದು ನನ್ನ ಭಾವನೆ.

ಕನ್ನಡ ಸಾಹಿತ್ಯದಲ್ಲಿ 'ಗಂಧವಾರಣ' ಎಂಬ ಮಾತು ಸೇರಿದ ಇನ್ನೂ ಕೆಲವು ಬಿರುದುಗಳಿವೆ. ಇವುಗಳಲ್ಲಿ 'ಅಪ್ಪನ ಗಂಧವಾರಣಂ' ಎಂಬುದಕ್ಕೆ ಸ್ವಲ್ಪ ಪ್ರಚಾರ

ಹೆಚ್ಚು. ಪಂಪ ಕವಿಯು (೯೪೧) 'ವಿಕ್ರಮಾರ್ಜುನ ವಿಜಯ'ದಲ್ಲಿ ಅರ್ಜುನ ಹುಟ್ಟಿದಾಗ ಆತನಿಗೆ ಹಲವು ಹೆಸರುಗಳನ್ನಿತ್ತು 'ಅಮ್ಮನ ಗಂಧವಾರಣಂ' ಎಂಬುದಾಗಿಯೂ ಒಂದು ಹೆಸರನ್ನು ಇಡಲಾಯಿತೆಂದು (೧–೧೪೮ ವ) ಬಣ್ಣಿಸಿದೆ. ಈ ಹೆಸರು ಚರಿತ್ರೆಯ ವ್ಯಕ್ತಿ ಅರಿಕೇಸರಿಗೆ ಇದ್ದ ಅಥವಾ ಆತನಿಗೆ ಕವಿಯೇ ಕೊಟ್ಟ ಮೆಚ್ಚಿನ ಹೆಸರು ; ಚರಿತ್ರೆಯ ವ್ಯಾಪ್ತಿಯದು ಎಂದು ಸುಲಭವಾಗಿ ಊಹಿಸಬಹುದಾದ್ದು. ಇದೇ ನಾಮ, ಅದೇ ಕಾವ್ಯದಲ್ಲಿ ಇನ್ನೂ ಮೂರು ಕಡೆಗಳಲ್ಲಿ (೨–೯೮, ೮–೧೦೫, ೧೨–೨೨೧) ಕಾಣಿಸಿಕೊಂಡಿದೆ. ೨–೯೮ರ ಉಲ್ಲೇಖದಲ್ಲಿ ವಿಶೇಷವೇನಿಲ್ಲ. "ಎಂಟು ತೊತ್ತುಬಿಡಂಬಿದತ್ತು ವೈರಿಬಲವನಮ್ಮನ ಗಂಧವಾರಣಂ" ಎಂಬ ೮–೧೦೫ರ ಹಾಗೂ "ಸುರವಜರಪ್ರಸೂನ ರಜದಿಂ...." ಎಂದು ಆರಂಭವಾಗುವ ೧೨–೨೨೧ರ ಎರಡು ಉಲ್ಲೇಖಗಳಲ್ಲಿಯೂ ಆನೆ ಮತ್ತು ಉಲ್ಲೇಖಿತವ್ಯಕ್ತಿಯ ಚರ್ಯೆಯ ಸಮೀಕರಣವಿದೆ. ಮುಖ್ಯವಾಗಿ ಮದದಾನೆಯ ಸಾಹಸವನ್ನೂ ಅರ್ಜುನನ ಸಾಹಸವನ್ನೂ ಇಲ್ಲಿ ಸಮೀಕರಿಸಿದೆ. 'ಪಂಪಭಾರತದ ದೀಪಿಕೆ'ಯಲ್ಲಿ ಇವುಗಳಿಗೆ ಕ್ರಮವಾಗಿ 'ತಂದೆಯ ಮದ್ದಾನೆ' 'ಅಪ್ಪನ ಸೊಕ್ಕಾನೆ (ಅರ್ಜುನ)' ಎಂಬುದಾಗಿ ಅರ್ಥ ಹೇಳಿರುವುದನ್ನಿಲ್ಲಿ ನೆನೆಯಬಹುದು.

ಸ್ವಲ್ಪ ಮುನ್ನಡೆದರೆ, ರನ್ನ ಕವಿಯ (೯೮೨) 'ಸಾಹಸಭೀಮ ವಿಜಯ'ದಲ್ಲಿಯೂ ಈ ಬಿರುದಿನ ಕೆಲವು ಪ್ರಯೋಗಗಳನ್ನು ಕಾಣಬಹುದಾಗಿದೆ. ೧–೧೦, ೧–೧೧ರ ಎರಡು ಉಲ್ಲೇಖಗಳಲ್ಲಿ ೧–೧೦ರಲ್ಲಿ ಗಣೇಶಸ್ತುತಿ–ಸತ್ಯಾಶ್ರಯನ ಕೊಂಡಾಟ ಇವುಗಳನ್ನು ಒಗ್ಗೂಡಿಸಿರುವ ಶ್ಲೇಷಾಲಂಕಾರದ ಕಲ್ಪನೆಯಿದೆ. ೧–೧೧ರಲ್ಲಿ ಸತ್ಯಾಶ್ರಯನನ್ನು ನೇರವಾಗಿ ಕೀರ್ತಿಸಿದ್ದರೂ, ಅಲ್ಲಿ ಆನೆಯ ಗುಣ ಲಕ್ಷಣಾದಿಗಳ ಸಮೀಕರಣವಿದೆ. ೧–೧೭ರಲ್ಲಿ ಸಹ ಇನ್ನೊಮ್ಮೆ ಈ ಉಲ್ಲೇಖವಿದ್ದು, ಇನ್ನೂ ಸ್ಫುಟವಾಗಿ ಆನೆಯ ಗುಣ ಲಕ್ಷಣ ಸಾಹಸಗಳನ್ನು ವ್ಯಕ್ತಿಯ ಗುಣಲಕ್ಷಣ ಸಾಹಸಗಳೊಂದಿಗೆ ಸಮೀಕರಿಸಿದೆ. ಅಮ್ಮನ ಗಂಧವಾರಣನು 'ಅನ್ಯನರೇಂದ್ರಗಂಧವಾರಣಮದವಾರಣ'ನೆಂದೂ 'ವಿಜಯ ಕಾರಣ'ನೆಂದೂ ಇಲ್ಲಿ ಕೀರ್ತಿಸಿದೆ. ಭೀಮಸೇನನು ನಿಮಿತ್ತವಷ್ಟೆ, ಸತ್ಯಾಶ್ರಯನೇ 'ಅಮ್ಮನ ಗಂಧವಾರಣ' ಎನ್ನುವುದು ೨–೧ ವ. ದ ಮತ್ತೊಂದು ಉಲ್ಲೇಖದಿಂದ ವಿಶದವಾಗುತ್ತದೆ. ಈ ಕೊನೆಯ ಉಲ್ಲೇಖಕ್ಕೆ ತೀ. ನಂ. ಶ್ರೀ ಅವರು ತಮ್ಮ 'ಗದಾಯುದ್ಧ ಸಂಗ್ರಹ'ದ ಟಿಪ್ಪಣಿಗಳಲ್ಲಿ "ತಂದೆಯ ಮದದಾನೆ, ತನ್ನ ತಂದೆಯ ಕಾರ್ಯದಲ್ಲಿ ಮದಿಸಿದ ಆನೆಯಂತೆ ಮುಂದೆ ನುಗ್ಗುವವನು ; ಇದು ಸತ್ಯಾಶ್ರಯನ ಒಂದು ಬಿರುದು ; ಹಳಗನ್ನಡದಲ್ಲಿ ಅಮ್ಮ ಎಂದರೆ ತಂದೆ ಎಂದು ಅರ್ಥ" ಎಂಬುದಾಗಿ ಬರೆದಿದ್ದಾರೆ. ಪಿ. ಸುಬ್ರಾಯಭಟ್ಟರು 'ಗದಾಯುದ್ಧ ದರ್ಪಣ'ದಲ್ಲಿ ಮೇಲಿನ ಕೆಲವು ಉಲ್ಲೇಖಗಳಿಗೆ ಕ್ರಮವಾಗಿ "ತಂದೆಯ ಮುದ್ದಿನ ಮದ್ದಾನೆಯಾದ ಸತ್ಯಾಶ್ರಯದೇವನು (ಗಜಮುಖನು)" (೧–೧೦), "ಸತ್ಯಾಶ್ರಯ ದೇವನು" (೧–೧೧, ೧೭), "ತಂದೆಯ ಮದ್ದಾನೆ" (೨–೧ವ.) ಎಂಬುದಾಗಿ ಅರ್ಥ ಬರೆದಿದ್ದಾರೆ.

'ಅಮ್ಮನ ಗಂಧವಾರಣಂ' ಶಬ್ದಕ್ಕೆ ಸದೃಶವಾದುದು 'ಬಪ್ಪನ ಗಂಧವಾರಣಂ' ಶಬ್ದ. ಹೊಯ್ಸಳ ನರಸಿಂಹ (I) ನ ಕಾಲದ ಬೇಲೂರು ಶಾಸನದಲ್ಲಿ, ಸಾಲು ೫೦–೫೪ರ ನಡುವೆ, ಆ ದೊರೆಯನ್ನು ಒಂದಕ್ಕಿಂತ ಹೆಚ್ಚು ಸಲ ಹೀಗೆ ಕರೆದಿದೆ. ಇಲ್ಲಿ ಆನೆಯ ಗುಣಲಕ್ಷಣಗಳನ್ನೂ ಸಾಹಸಪ್ರವೃತ್ತಿಯನ್ನೂ ಆತನಿಗೆ ಸಂಘಟಿಸಿರುವುದು ಕಾಣುತ್ತದೆ. 'ಶಾಸನ ಪದ್ಯಮಂಜರಿ'ಯ ಟಿಪ್ಪಣಿಗಳಲ್ಲಿ "ತಂದೆಯ ಮತ್ತಗಜ ; ಬಿರುದು" ಎಂಬುದಾಗಿ ಮೊದಲ ಸಂದರ್ಭಕ್ಕೆ ಅರ್ಥ ಬರೆದಿದೆ.

೧೧೪೯ರ ಚೆನ್ನಗಿರಿಯ ಒಂದು ಶಾಸನದಲ್ಲಿ (ಎ.ಕ., xi–೩೯), ಸಾಲು ೨೮–೩೬ರ ನಡುವೆ, 'ಅಣ್ಣನ ಗಂಧವಾರಣಂ' ಎಂಬ ಮಾತು ಮೂರು ಸಲ ಬಂದಿದೆ. ಇಲ್ಲಿ ಸೋಮನೆಂಬುವನ ಮಗ ಎಡವರಿಯೆಂಬುವನು ಆ ರೀತಿ ಕರೆಯಲ್ಪಟ್ಟಿದ್ದಾನೆ. ಹಿಂದೆ ನೋಡಿದಂತೆಯೇ ಇಲ್ಲಿಯೂ ಆನೆಯ ಗುಣ ಲಕ್ಷಣಗಳನ್ನೂ ಶೌರ್ಯಸಾಹಸಗಳನ್ನೂ ಉದ್ದೇಶಿತ ವ್ಯಕ್ತಿಗೆ ಸಂಘಟಿಸಿದೆ. ಇಲ್ಲಿ 'ಅಣ್ಣ' ಎಂಬ ಮಾತು ಪ್ರಾಯಃ ಪಿತ್ರರ್ಥದಲ್ಲಿಯೇ ಬಳಕೆಯಾಗಿರಬಹುದು. 'ಶಾಸನ ಪದ್ಯಮಂಜರಿ'ಯ ಟಿಪ್ಪಣಿಗಳಲ್ಲಿ "ಗಂಧವಾರಣಂ=ಮತ್ತಗಜ ; ಎಡವರಿಗೆ ಅಣ್ಣನ ಗಂಧವಾರಣ ಎಂದು ಬಿರುದು" ಎಂದು ಬರೆದಿದೆ. ಜನ್ನ ಕವಿಯ (೧೧೯೧) ತರಿಕೆರೆ ಶಾಸನದಲ್ಲಿ (ಎ. ಕ., vi–೪೫) ಕೀರ್ತಿತನಾಗಿರುವ ಅಮೃತೇಶ್ವರ ದಂಡನಾಥನ ತಮ್ಮ ಮಸಣಯ್ಯ, ಕವಿಯ ಅಭಿಪ್ರಾಯದಲ್ಲಿ 'ಅಣ್ಣನ ಪಟ್ಟವರ್ಧನಂ' ಆಗಿದ್ದಾನೆ. "ಪೂಜಾಗಜವೆಂದು ಪಟ್ಟವರ್ಧನಂ" (ಶಮದ.ದ ಪ್ರಯೋಗಸಾರ, ೧೫೭) ಎಂಬುದರಿಂದ ಸ್ಥೂಲವಾಗಿ ಗಂಧವಾರಣವೆಂದೇ ಅರ್ಥ ಇಲ್ಲಿಯೂ. ಇಲ್ಲಿ ಸಂದರ್ಭದ ಸ್ಪಷ್ಟತೆಯಿಂದ, "ಹಿರಿಯಣ್ಣನ ಮದದಾನೆ" ಎಂದು ಅಭಿಪ್ರಾಯವಾಗುವುದು.

ವ್ಯಕ್ತಿನಾಮದೊಂದಿಗೆ ಸಹ 'ಗಂಧವಾರಣ' ಕಾಣಿಸಿಕೊಳ್ಳುವುದುಂಟು. ಮುಮ್ಮಡಿ ಚೋಳ ರಾಜರಾಜನ ದಂಡನಾಯಕ ಪಂಚವ ಮಹಾರಾಯನನ್ನು "ಮುಮ್ಮಡಿ ಚೋಳನ ಗಂಧವಾರಣಂ" ಎಂಬುದಾಗಿ ಶ್ರೀರಂಗಪಟ್ಟಣದ ೧೪೦–೭೮ನೆಯ ಶಾಸನದಲ್ಲಿ ಕರೆದಿದೆ. ಇಲ್ಲಿಯೂ ಆನೆ ಮತ್ತು ಉದ್ದೇಶಿತ ವೀರನ ಗುಣಲಕ್ಷಣಗಳ ಹಾಗೂ ಸಾಹಸದ ಸಮೀಕರಣ ಸ್ಪಷ್ಟವಾಗಿಯೇ ಇದೆ.

ಈ ಮೇಲಿನ ಕೆಲವು ಸಂದರ್ಭಗಳನ್ನು ಗಮನಿಸಿದರೆ, 'ಸವತಿ ಗಂಧವಾರಣೆ–ಉದ್ಧೃತ್ತ ಸವತಿ ಗಂಧವಾರಣೆ ಬಿರುದಿನ ಅರ್ಥದ ವಿಷಯದಲ್ಲಿ ಪುನರಾಲೋಕನದ ಆಗತ್ಯವಿದೆಯೆಂದು ನಮಗೆ ಹೊಳೆಯದಿರದು. 'ಗಂಧವಾರಣ' ಮದದಾನೆ ; 'ಗಂಧವಾರಣೆ' ಮದಿಸಿದ ಹೆಣ್ಣಾನೆ. ನಿಘಂಟುಗಳು 'ಗಂಧವಾರಣ' ಶಬ್ದಕ್ಕೆ "ಒಂದು ಬಗೆಯ ಶ್ರೇಷ್ಠ ಜಾತಿಯ ಆನೆ" ಎಂಬ ಅರ್ಥವನ್ನೂ ಜೊತೆಗೆ ಸೇರಿಸುತ್ತವೆ.

ಸಾಮಾನ್ಯವಾಗಿ ಷಷ್ಠ್ಯಂತವಾಗಿಯೇ ನಿಲ್ಲುವ ಅಮ್ಮ, ಬಪ್ಪ, ಅಣ್ಣ ಎಂಬ ಶಬ್ದಗಳ ಮುಂದೆ 'ಗಂಧವಾರಣ' ಅಥವಾ ಸದೃಶಶಬ್ದ ಸೇರಿದಾಗ ತಂದೆಯ ಮದದಾನೆ, ಅಣ್ಣನ ಮದದಾನೆ ಹೀಗೆ ಅರ್ಥ ಹೇಳುವುದೇನೋ ಸರಿ. ಆದರೆ ಈ ನಾಮಾವಳಿ

ಶಬ್ದಗಳು ಕಾಣಿಸಿಕೊಳ್ಳುವ ಸಂದರ್ಭಗಳನ್ನು ವಿವರವಾಗಿ ಪರಿಶೀಲಿಸಿದಾಗ, ಇಲ್ಲಿ 'ಗಂಧವಾರಣ'ದ (ಪಟ್ಟದಾನೆಯ/ಶ್ರೇಷ್ಠ ಜಾತಿಯ ಆನೆಯ) ಅಗಾಧ ಅಂಗಸೌಷ್ಠವ, ಅತಿಶಯ ಗಾಂಭೀರ್ಯ, ಭಯೋತ್ಪಾದಕ ಗುಣ, ಅಮಿತವಾದ ಶಕ್ತಿ ಸಾಮರ್ಥ್ಯಗಳು ಮುಂತಾದವೆಲ್ಲ ಕವಿಯ ಅಪೇಕ್ಷೆಯಂತೆ ಉದ್ದೇಶಿತವ್ಯಕ್ತಿಯಲ್ಲಿಯೂ ಸಮ್ಮಿಳಿತಗೊಂಡಿರುತ್ತವೆ ಎನ್ನುವುದು ನಮ್ಮ ಗಮನಕ್ಕೆ ತಪ್ಪದೆ ಬರುತ್ತದೆ. ಇಷ್ಟು ಮಾತ್ರವಲ್ಲದೆ, ಬಲಿಷ್ಠವೂ ಶ್ರೇಷ್ಠವೂ ಆದ ಆನೆ ಸೈನ್ಯಶಕ್ತಿಯ ಪ್ರಮುಖಾಂಗ, ಅತ್ಯಭಿಮಾನದ ಆಸ್ತಿ, ಅಕ್ಕರೆ ಆದರದ ಪೂಜ್ಯತೆಗಳಿಗೆ ಪಾತ್ರವಾಗುವ ವಿಧೇಯವೂ ವಿಶ್ವಸನೀಯವೂ ಆದ ಮಹಾಪ್ರಾಣಿ ಎಂಬುದರಿಂದಾಗಿ ಆ ಗುಣಗಳೂ ಕಾರ್ಯಗಳೂ ಉದ್ದೇಶಿತವ್ಯಕ್ತಿಯಲ್ಲಿ ಸಂದರ್ಭೋಚಿತವಾಗಿ ಸಮ್ಮಿಳಿತವಾಗಿರುತ್ತವೆ ಎಂದೂ ತಿಳಿಯುವುದಕ್ಕೆ ಸಾಧ್ಯವಿದೆ. ಒಮ್ಮೊಮ್ಮೆ ಕುಮಾರೋದಯ ಸಂದರ್ಭದ "ಎನ್ನಯ್ಯಂಗಕ್ಕುಮೆನ್ನಂ ನಡಪಿದತಿರಥಂಗಕ್ಕುಮೆನ್ನಾನೆಗಕ್ಕುಂ । ಮುನ್ನಾವೊಂ ಗಂಡನಿಂತಣ್ಣನಂ...." (ಕಾವ್ಯಾವಲೋಕನ, ಪ. ೩೩), "ಮುಂದೆ ಮನ್ನಂದನನೆಸೆವ ಗಜಕ್ರೀಡೆಯಿಂದಾಡುತಿರ್ದಂ" (ಕರ್ಣಾಟಕ ಕಾದಂಬರಿ, ಪೂ. ಭಾ. ೬೫೯), "ಇಭಾರ ಮುದ್ದಿಭಾ । ರರಸನಿಭಾರ ಬಲ್ಲಹನಿಭಾರ ಕರೀಂದ್ರನಿಭಾರ ಸಿಂಹಮೆಂ । ದಿರದಮರ್ದಪ್ಪಿದಳ್ ಪದಪಿನಿಂ ಮೊಲೆವಾಲ್ ತೊರೆದೆಚ್ಚ ಪಾಯ್ವಿನಂ" (ಜಗನ್ನಾಥ ವಿಜಯ, ೩-೩೯) ಮುಂತಾದ ಹಲವು ಸಾಹಿತ್ಯಪ್ರಯೋಗಗಳನ್ನು ನೋಡಿದರೆ, ಮುದ್ದಿನ ಮಕ್ಕಳ ವಿಷಯದಲ್ಲಿ ಸಹ ಆನೆ ಸಿಂಹಗಳ ಸಾದೃಶ್ಯವನ್ನು ತರುವುದು ಸಾಮಾನ್ಯವೆಂದು ತೋರುತ್ತದೆ.

'ಅಮ್ಮನ ಗಂಧವಾರಣಂ' ಎಂಬಂತೆ 'ಅಯ್ಯನ ಸಿಂಗಂ' ಎಂಬಂತಹ ಉಲ್ಲೇಖಗಳೂ ಇದ್ದು, ಆನೆಗೆ ಹೇಳಿದ ಗುಣ ಲಕ್ಷಣ ಸಾಹಸಗಳ ಹಾಗೆ ಸಿಂಹಕ್ಕೆ ಸ್ವಾಭಾವಿಕವಾದ ಗುಣ ಲಕ್ಷಣ ಸಾಹಸಗಳನ್ನು ಉದ್ದೇಶಿತ ವ್ಯಕ್ತಿಗೆ ಆರೋಪಿಸಿರುವುದುಂಟು. ಇದೇ ಸಂದರ್ಭದಲ್ಲಿ 11–12ನೆಯ ಶತಮಾನದ ಕೆಲವು ಶಾಸನಗಳಲ್ಲಿ ಬರುವ 'ನೊಳಂಬನ ಗರುಡಂ,' 'ಸಿಂಗನ ಗರುಡಂ' ಮುಂತಾದ ಉಲ್ಲೇಖಗಳನ್ನೂ ನೆನೆಯಬೇಕು. ಗರುಡನ ಶೌರ್ಯ, ಗಾಂಭೀರ್ಯ, ಆಪ್ತತೆ, ವಿಧೇಯತೆ, ವಿಶ್ವಾಸಪಾತ್ರತೆ ಈ ಕೆಲವು ಶ್ಲಾಘ್ಯಗುಣಗಳು ಆನೆಗೂ ಗರುಡನಿಗೂ ಸಮಾನವೇ. ಪ್ರಾಯಃ ಈ ಉಲ್ಲೇಖಗಳು ನೊಳಂಬನ,ಸಿಂಗನ ಆಪ್ತ ಹಾಗೂ ಸ್ವಾಮಿಭಕ್ತ ವ್ಯಕ್ತಿಯೊಬ್ಬನನ್ನು ಸೂಚಿಸಲು ಬಂದಿರಬಹುದು.

ಈ ವಿವಿಧ ಉಲ್ಲೇಖಗಳ ಹಿನ್ನೆಲೆಯಲ್ಲಿ 'ಸವತಿ ಗಂಧವಾರಣೆ' 'ಉದ್ವೃತ್ತ ಸವತಿ ಗಂಧವಾರಣೆ' ಶಬ್ದದ ಆಶಯವನ್ನು ತೃಪ್ತಿಕರವಾಗಿ ವಿವರಿಸುವುದು ಸಾಧ್ಯವೆಂದು ತೋರುತ್ತದೆ. 'ಸವತಿ ಗಂಧವಾರಣೆ' ಎಂಬ ಸಮಾಸಶಬ್ದವನ್ನು 'ಸವತಿಯರ್ಗೆ ಗಂಧವಾರಣೆ', 'ಸವತಿಯರ ಗಂಧವಾರಣೆ', 'ಸವತಿಯರೊಳ್ ಗಂಧವಾರಣೆ' ಎಂಬುದಾಗಿ ಮೂರು ತೆರನಾಗಿ ವಿಗ್ರಹವಾಕ್ಯ ಮಾಡಬಹುದಾಗಿದ್ದು, ಇವುಗಳಲ್ಲಿ ಮೇಲಿನ ಉಲ್ಲೇಖಗಳಿಗೆ ಷಷ್ಠ್ಯಂತ ಪೂರ್ವಪದವಾದ ವಿಗ್ರಹವಾಕ್ಯ ಹತ್ತಿರವಾದುದು ಎನ್ನುವುದು

ವಿವಿಕ್ತವೇ ಇದೆ. ಆಗ್ಗೆ ವಿಷ್ಣುವರ್ಧನನ ಹಲವರು ಪತ್ನಿಯರಲ್ಲಿ ಶಾಂತಲೆ ಆ ಪತ್ನಿಯರ ಅಚ್ಚುಮೆಚ್ಚಿನವಳು, ವಿಶ್ವಾಸಪಾತ್ರಳು ಎಂದು ಅರ್ಥ ಮಾಡುವುದು ಸಾಧ್ಯ. ಹೇಗೆ ಯುವರಾಜನೋ ಮಹಾಪ್ರಭುವೋ ಅರಸನಿಗೋ ಮಹಾಪ್ರಭುವಿಗೋ ಅಚ್ಚುಮೆಚ್ಚಿನವನು, ವಿಶ್ವಾಸಪಾತ್ರನು, ಅಭಿಮಾನಾಸ್ಪದನು, ಬೆಂಬಲಿಗನು, ಬಲಿಷ್ಠ ರಕ್ಷಕನು ಎಂದಾಗಿ 'ಅಮ್ಮನ ಗಂಧವಾರಣಂ' ಮುಂತಾಗಿ ಕರೆಯಲ್ಪಡುವನೋ, ಹಾಗೆಯೇ ಹಲವರು ರಾಣಿಯರ ಸಮುದಾಯದಲ್ಲಿ ಅವರ ಅಚ್ಚುಮೆಚ್ಚಿನವಳು, ವಿಶ್ವಾಸಪಾತ್ರಳು, ಅಭಿಮಾನಾಸ್ಪದಳು, ಬೆಂಬಲಿಗಳು, ಬಲಿಷ್ಠ ರಕ್ಷಕಳು ಎಂದಾಗಿ ಶಾಂತಲೆ 'ಸವತಿಯರ ಗಂಧವಾರಣೆ' (ಸವತಿಗಂಧವಾರಣೆ) ಎಂದು ಕರೆಯಲ್ಪಡುವಳು ಎಂದು ಹೇಳಬೇಕಾಗುವುದು. ಇಲ್ಲಿವೆ ಇನ್ನೊಂದು ಪರ್ಯಾಯ, ಸಪ್ತಮ್ಯಂತ ಪೂರ್ವಪದವಾದ ವಿಗ್ರಹ ವಾಕ್ಯವನ್ನು ಸ್ವೀಕರಿಸುವುದು. ಅದು "ಸವತಿಯರಲ್ಲಿ ಗಂಧವಾರಣೆ" ಎಂಬರ್ಥ ಕೊಡುವುದು. ಆಗ ಈ ಅರ್ಥದ ನಾಮಾವಳಿ "ಕವಿಗಳೊಳ್ ಪುಂಗವಂ, ಕವಿಪುಂಗವಂ" "ಪುರುಷರೊಳ್ ಪುಂಗವಂ/0 ವ್ಯಾಘ್ರಂ/0 ಶಾರ್ದೂಲಂ/0 ಋಷಭಂ/0 ಸಿಂಹಂ ಪುರುಷ ಪುಂಗವಂ/0 ವ್ಯಾಘ್ರಂ/0 ಶಾರ್ದೂಲಂ/0 ಪುರುಷರ್ಷಭಂ/0 ಸಿಂಹಂ" ಎಂದು ಬರುವ ಉಲ್ಲೇಖಗಳಿಗೆ ಸದೃಶವಾಗಿ ನಿಲ್ಲುತ್ತದೆ. ಅರ್ಥಸಾಮಂಜಸ್ಯವೂ ಇರುತ್ತದೆ. 'ಬಿರುದಾವಳಿ'ಯ ಸಮಾಸವಾದುದರಿಂದ 'ಸವತಿ ಗಂಧವಾರಣೆ'ಗೆ ಅರಿಸಮಾಸದ ದೋಷವಿಲ್ಲ. ಇನ್ನು ಕೊನೆಯ ಪರ್ಯಾಯ, ಚತುರ್ಥ್ಯಂತ ಪೂರ್ವಪದವಾದ ವಿಗ್ರಹವಾಕ್ಯ. ಇದು ಈಗ ರೂಢಿಯಲ್ಲಿರುವ ಅರ್ಥವನ್ನು ಕೊಡುವ ಸಾಧ್ಯತೆಯುಳ್ಳದು ; ಗ್ರಾಹ್ಯವಾದ ಅರ್ಥವಲ್ಲವೆಂದು ಈ ಲೇಖನದ ಆದಿಯಲ್ಲಿಯೇ ಇದನ್ನು ಎರಡನೆಯ ವಾಕ್ಯಪುಂಜದಲ್ಲಿ ಪರೋಕ್ಷವಾಗಿ ಈಗಾಗಲೇ ಸೂಚಿಸಿದೆ. ಆದ್ದರಿಂದ ಈ ಬಗೆಗೆ ಇಲ್ಲಿ ವಿಸ್ತರಿಸುವುದಿಲ್ಲ.

'ಉದ್ವೃತ್ತ' ವಿಶೇಷಣವನ್ನು ಸವತಿಯರಿಗೆ ಅನ್ವಯಿಸುವಂತೆ ಅರ್ಥೈಸಬೇಕೋ, 'ಸವತಿ ಗಂಧವಾರಣೆ'ಯಾದ ಶಾಂತಲೆಗೆ ಅನ್ವಯಿಸುವಂತೆ ಅರ್ಥೈಸಬೇಕೋ ಎಂಬ ಸಮಸ್ಯೆಗೆ ಸ್ವಲ್ಪ ಅವಕಾಶವೇನೋ ಇದೆ. 'ಸವತಿ ಗಂಧವಾರಣೆ' ಎಂಬ ಸಮಸ್ತಪದ ಮೊದಲು ಸಂಯೋಜನೆಗೊಂಡು, ಅದಕ್ಕೆ ಅನಂತರವಷ್ಟೆ 'ಉದ್ವೃತ್ತ' ವಿಶೇಷಣವಾಗಿ ಸೇರಿದೆಯೆಂಬುದು ನನ್ನ ಗ್ರಹಿಕೆ. 'ಅಮ್ಮನ ಗಂಧವಾರಣಂ' ಮೊದಲಾದ ಬಿರುದುಗಳೊಂದಿಗೆ ಹೊಂದಿಕೊಳ್ಳುವುದು 'ಸವತಿ ಗಂಧವಾರಣೆ' ಎಂಬಷ್ಟು ರೂಪ ಮಾತ್ರವೇ. ಆಕೆಯನ್ನು ಬೇಲೂರು ಶಾಸನವಲ್ಲಿ 'ಸವತಿಗಂಧಹಸ್ತಿ' ಎಂದೂ ಆಕೆ ಕಟ್ಟಿಸಿದ ಬಸದಿಯನ್ನು ಶ್ರವಣಬೆಳ್ಗೊಳ ಶಾಸನದಲ್ಲಿ 'ಸವತಿಗಂಧಹಸ್ತಿ ಬಸದಿ' ಎಂದೂ 'ಸವತಿಗಂಧವಾರಣ ಬಸದಿ' ಎಂದೂ ಕರೆದಿರುವುದು ನೋಡಿದರೆ, ಇದು ಸ್ಫುಟಗೊಳ್ಳುತ್ತದೆ. ಆದರೆ ಸುಸಂಸ್ಕೃತವ್ಯಕ್ತಿ ಶಾಂತಲೆಯನ್ನು 'ಉದ್ವೃತ್ತ' ಎಂಬ ವಿಶೇಷಣದೊಂದಿಗೆ ಕರೆದಿದೆಯೆಂದರೆ ನಂಬುವುದು ಹೇಗೆ ? ಇದಕ್ಕೆ ಹೀಗೆ ಪರಿಹಾರ ಸಾಧ್ಯವೆಂದು ತೋರುತ್ತದೆ : 'ಉದ್ವೃತ್ತ' ಶಬ್ದದ ಮೊದಲ ಛಾಯೆಯ ಅರ್ಥಗಳೆಂದು "ಮೇಲಕ್ಕೆ ಏರಿರುವ, ಅಭಿವೃದ್ಧಿ ಹೊಂದಿದ, ಏಳಿಗೆ ಹೊಂದಿದ" ಎಂಬುವನ್ನು ಹೇಳಿದೆ. ಅದನ್ನು ಹಿಡಿದು

"ಉನ್ನತಿವೆತ್ತ, ಅಭ್ಯುದಿತವರ್ತನದ ಸವತಿಗಂಧವಾರಣೆ" ಎಂದು ಅರ್ಥ ಹೇಳುವುದು ಒಂದು ಸಾಧ್ಯತೆ ; ಅನಂತರದ ಛಾಯೆಯ ಅರ್ಥಗಳಾದ "ಕೊಬ್ಬಿದ, ದರ್ಪಿಷ್ಠ" ಎಂಬುವನ್ನು ಹಿಡಿದು "ಕೊಬ್ಬಿದ, ದರ್ಪಿಷ್ಠೆಯಾದ ಸವತಿಗಂಧವಾರಣೆ" ಎಂದು ಅರ್ಥ ಮಾಡುವುದು ಇನ್ನೊಂದು ಸಾಧ್ಯತೆ. ಈ ಎರಡು ಅರ್ಥಗಳನ್ನೂ ಷಷ್ಠ್ಯಂತ ಹಾಗೂ ಸಪ್ತಮ್ಯಂತ ಪೂರ್ವಪದ ವಿಗ್ರಹವಾಕ್ಯಗಳಿಗೆ ಸಮಾನವಾಗಿ ಅನ್ವಯಿಸಲು ಶಕ್ಯವಿದೆ. ವಿಶೇಷಣವು ಅನ್ವಯಿಸುವುದು ಶಾಂತಲೆಗೆ, ಸವತಿಯರಿಗಲ್ಲ ಎಂಬುದನ್ನು ಮಾತ್ರ ಈ ಸಂದರ್ಭದಲ್ಲಿ ನೆನಪಿಡಬೇಕು.

ಇನ್ನೂ ಒಂದು ಮಾತಿದೆ. ವಾಸ್ತುಶಿಲ್ಪದಲ್ಲಿ 'ವಾರಣ', 'ಮತ್ತವಾರಣ' ಎಂಬೆರಡು ಶಬ್ದಗಳು (ಮಾನಸಾರ, ೧೯–೯) ದೊರೆಯುತ್ತವೆ. ದೊಡ್ಡ ಕಟ್ಟಡವನ್ನು ಬಳಸಿದ ಸುತ್ತುಗೋಡೆ, ದೊಡ್ಡ ಕಟ್ಟಡದ ಮೇಲುನೆಲೆಯ ಕಿರುಕೋಣೆ, ಅಲಂಕಾರ ಗಂಬದ ಮೇಲುಭಾಗದ ಜೋಡಿಗೆ ಇತ್ಯಾದಿ ರಚನೆ ಎಂಬ ಅರ್ಥಗಳು 'ಮತ್ತವಾರಣ' ಶಬ್ದಕ್ಕೆ ಇರುವುದು ಪ್ರಸಿದ್ಧವಾಗಿದೆ. ಸಂಸ್ಕೃತದ 'ಪ್ರಸ್ತರ' ಮತ್ತು ಇಂಗ್ಲಿಷಿನ entablature ಶಬ್ದಗಳಿಗೆ ಸದೃಶವಾದ ಶಬ್ದವಿದು. ಮತ್ತವಾರಣ=ಗಂಧವಾರಣ ಎಂದು ಭಾವಿಸಿ ಲಕ್ಷ್ಯಾರ್ಥದಲ್ಲಿ ಸಂರಕ್ಷಕ, ಬೆಂಬಲಿಗ, ಆಧಾರಪ್ರಾಯ ಇತ್ಯಾದಿ ಅರ್ಥಗಳನ್ನು 'ಗಂಧವಾರಣ' ಶಬ್ದಕ್ಕೆ ಕೆಲವರು ಹೊಂದಿಸುವಂತೆ ತೋರುವುದು. ಆಗ "ಸವತಿಯರಿಗೆ ಆಧಾರಪ್ರಾಯಳಾದ" ಶಾಂತಲೆ ಎಂದು 'ಸವತಿಗಂಧವಾರಣೆ' ಎಂಬ ಶಬ್ದದ ಅರ್ಥಹೇಳಲು ಅನುವು ದೊರೆಯುತ್ತದೆಯೆನ್ನುವುದು ಅವರ ಅಭಿಪ್ರಾಯ. ಆದರೆ ವಾಸ್ತುರಚನೆಯಲ್ಲಿ ಸ್ತಂಭ ಇತ್ಯಾದಿ ಅಂಗಗಳ ಹಾಗೆ 'ಮತ್ತವಾರಣ' ಅತಿಪ್ರಮುಖವಾದ ರಚನೆಯೇನಲ್ಲ, ಅದು ಇಲ್ಲದ ವಾಸ್ತುಗಳೂ ಇವೆ ಎಂಬುದಾಗಿ ಶಿಲ್ಪಶಾಸ್ತ್ರಜ್ಞರು ಹೇಳುತ್ತಾರೆ. ಅಲ್ಲದೆ ಆನೆಯನ್ನು ರೂಪಕವಿಧಾನದಿಂದ ಸಂಘಟಿಸುವ ವರ್ಣನೆಗಳೇ 'ಅನ್ಯನೃಪ ಗಂಧವಾರಣ' ಇತ್ಯಾದಿ ನಾಮಾವಳಿಗಳು ಕಾಣಿಸಿಕೊಳ್ಳುವ ಸಂದರ್ಭಗಳಲ್ಲೆಲ್ಲ ಸಾಮಾನ್ಯವಾಗಿರುವುದರಿಂದ, ಪೂರ್ವೋಕ್ತ ಪರಿಭಾವನೆಯೂ ಅರ್ಥಗಳೂ ದೂರಾನ್ವಯಿಗಳೆಂದು ಹೇಳಬೇಕು. ಒಮ್ಮೆಯಾದರೂ ಈ ಎರಡು ಶಬ್ದಗಳು ಪ್ರಯೋಗಗಳಲ್ಲಿ ಪರಸ್ಪರವಾಗಿ ವಿನಿಮಯಗೊಂಡಿಲ್ಲ ಎಂಬುದನ್ನೂ ನೆನೆದಿರಬೇಕು.

ಅನುಬಂಧ :

ಈ ಬರಹವನ್ನು ಗೋಷ್ಠಿಯೊಂದರಲ್ಲಿ ಓದಿದ ಮೇಲೆ, ಡಾ. ಎಂ. ಚಿದಾನಂದಮೂರ್ತಿಗಳು ನನಗೆ ಎರಡು ಪತ್ರಗಳನ್ನು ಬರೆದು, ಈ 'ಸವತಿಗಂಧವಾರಣೆ' ಶಬ್ದದ ಅರ್ಥ ನಿಷ್ಪತ್ತಿಗಳು ಈಗ ರೂಢಿಯಲ್ಲಿ ಪ್ರಚಲಿತವಾಗಿರುವುದಕ್ಕಿಂತ ಬೇರೆಯೇನೂ ಅಲ್ಲವೆಂದು ಸೂಚಿಸಿದ್ದಾರೆ. ಅವರ ಅಭಿಪ್ರಾಯಗಳ ಸಾರಾಂಶ ಹೀಗೆ :

(i) ಗದಾಯುದ್ಧದ ಉಲ್ಲೇಖ 'ಸವತಿಗಂಧವಾರಣೆ'ಯ ಅರ್ಥವನ್ನು ಖಚಿತಪಡಿಸುತ್ತದೆ. ಸವತಿಯರ ಅಹಂಕಾರವನ್ನು ಹೋಗಲಾಡಿಸುವವಳು, ಸವತಿಯರನ್ನು

ಆನೆಯ ಹಾಗೆ ನಿಯಂತ್ರಿಸುವವಳು 'ಸವತಿಗಂಧವಾರಣೆ'. ಆಗ 'ಉದ್ವೃತ್ತ (ಹಮ್ಮಿನ)' 'ಸವತಿ'ಗೆ ವಿಶೇಷಣವಾಗುತ್ತದೆ.

(ii) 'ಅಣ್ಣಸಂಕಕಾಜ' ಎಂದರೆ ಅಣ್ಣನ ಪಕ್ಷವರ್ತಿಯಾಗಿ ಯುದ್ಧ ಮಾಡುವ ವೀರ. 'ಅಣ್ಣನ ಗಂಧವಾರಣ' ಎಂದರೆ 'ಅಣ್ಣನ ಪಕ್ಷವರ್ತಿಯಾಗಿ ಮದ್ದಾನೆಯಂತೆ ಪರಾಕ್ರಮದಿಂದ ಹೋರಾಡುವವನು.' ಹಾಗೆಯೇ 'ಅಯ್ಯನ ಸಿಂಗಂ', 'ಅಮ್ಮನ ಗಂಧವಾರಣಂ' ಇತ್ಯಾದಿ. ಗಂಧವಾರಣ, ಸಿಂಹ, ಗರುಡ ಮುದ್ದುಪ್ರಾಣಿಗಳಲ್ಲ, ಅವು ವಿಧೇಯತೆಗೂ ಪ್ರಸಿದ್ಧವಲ್ಲ. ಹೋರಾಟಕ್ಕೆ, ನಾಶಕ್ಕೆ ಅವು ಪ್ರಸಿದ್ಧ. ಮೇಲಿನ ಪ್ರಶಸ್ತಿಗಳೆಲ್ಲ ವೀರರಿಗೆ ಹೇಳಿದ್ದು, ಬರೀ ಮಕ್ಕಳಿಗಲ್ಲ. 'ಅಣ್ಣನ ಬಂಟ', ಅಣ್ಣನ ಸೇವಕ, ಭ್ರಾತೃಭಕ್ತ ಆಗಬಹುದು ; ಅಣ್ಣನ ಪರವಾಗಿ ಹೋರಾಡುವ ವೀರ ಆಗಬಹುದು. (ಮಾವನ ಬಂಟ : ಬಂಟ=ವೀರ, ಎ.ಕ. vi ಚಿಕ್ಕಮಗಳೂರು ೯೪).

ಹಿರಿಯ ರಾಣಿಯಾದವಳಿಗೆ 'ಸವತಿಮದಭಂಜನೆ' (ಬಿಕೆಐ I, ೦೮, ೧೦೪೯) ಶಾಸನೋಕ್ತವಾಗಿದೆ. 'ಸವತಿಗಂಧವಾರಣೆ=ಸವತಿಯರಿಗೆ ಅವರನ್ನು ಅಂಕೆಯಲ್ಲಿಡುವ, ಅವರ ಜಂಬವನ್ನು ಹತ್ತಿಕ್ಕುವ ಮದ್ದಾನೆಯಂತಿರುವವಳು ಎಂಬುದು ತೀರ ಸ್ವಾಭಾವಿಕವಾದ ಅರ್ಥ. 'ಉದ್ವೃತ್ತ' ಮತ್ತು 'ಸವತಿ' ಅಕ್ಕಪಕ್ಕದಲ್ಲಿರುವುದರಿಂದ 'ಉದ್ವೃತ್ತ'ವು 'ಸವತಿ'ಗೆ ವಿಶೇಷಣವಾಗಿರುವ ಸಾಧ್ಯತೆಯೇ ಹೆಚ್ಚು. ಆಗ ಉದ್ವೃತ್ತಕ್ಕೆ ಈಗ ಇರುವ ಪ್ರಸಿದ್ಧಾರ್ಥವೇ ಹೊಂದುತ್ತದೆ. 'ಅಮ್ಮನ ಗಂಧವಾರಣ' ಇದ್ದಂತೆ 'ಸವತಿಗಂಧವಾರಣೆ' ಎಂದು ಆಗ "ಸವತಿಯರ ಪರವಾಗಿ ಗಂಧವಾರಣದಂತೆ ಹೋರಾಡುವವಳು" ಎಂದು ಅರ್ಥಮಾಡಬೇಕಾಗಿಲ್ಲ. ಅಲ್ಲದೆ 'ಅಮ್ಮನ' ಇತ್ಯಾದಿ ಷಷ್ಠಿ ; 'ಸವತಿ' ಸಮಾಸದಲ್ಲಿ ಬಂದಿದೆ ; 'ಸವತಿಯ ಗಂಧವಾರಣ' ಎಂದು ಅಲ್ಲ. ಸವತಿ ಏ. ವ. ಆಗಬಹುದು, ಬ. ವ. ಆಗಬಹುದು. 'ಗಂಧವಾರಣ'ಕ್ಕೆ destructive ಅರ್ಥವೇ ಹೆಚ್ಚು ಉಚಿತವಲ್ಲವೇ ? ಸವತಿಯರನ್ನು ಅಂಕೆಯಲ್ಲಿಟ್ಟುಕೊಳ್ಳುವುದು ಒಂದು ಭೂಷಣ ಎನಿಸಿಕೊಂಡಿರಬಹುದು.

ಈ ಅಭಿಪ್ರಾಯಗಳು ಸಹಜವಾದವು, ಸಮುಚಿತವಾದವು. ನನ್ನ ಪ್ರಬಂಧದಲ್ಲಿ ಇಲ್ಲಿಯ ಕೆಲವಂಶಗಳು ಪೂರ್ವಪಕ್ಷದ ಪ್ರಸ್ತಾವನೆಯ ಭಾಗವಾಗಿ ಅಲ್ಲಲ್ಲಿ ಬಂದಿವೆ. ಅವನ್ನು ಓದುಗರು ಗಮನಿಸಬಹುದು.

ಸವತಿಯರ ವಿಷಯದಲ್ಲಿ ಸವತಿಯರಿಗೆ ಹುರುಡು ಸ್ವಾಭಾವಿಕವಾದುದು ; ರಾಜಪತ್ನಿಯರ ವಿಷಯದಲ್ಲಂತೂ ಇದು ಇನ್ನೂ ಎದ್ದು ಕಾಣುವ ವಿಷಯ. ಆದರೆ ಸ್ವಾಭಾವಿಕವೆನ್ನುವ ವಿಷಯಕ್ಕೆ ಸಹ ಅಪವಾದಗಳು ಇರಬಾರದೆಂದಿಲ್ಲವಷ್ಟೆ ? ಶಾಂತಲೆಯ ನಡೆವಳಿಕೆ ಅಂತಹ ಒಂದು ಅಪವಾದವಾಗಿರಬಹುದು.

ಅಮ್ಮ, ಅಯ್ಯ, ಅಣ್ಣ ಇತ್ಯಾದಿ ಷಷ್ಠ್ಯಂತ ಪೂರ್ವಪದಗಳಿಗೆ ಪರದಲ್ಲಿ ಪ್ರಾಣಿವಾಚಕಗಳು ಬಂದು ಏರ್ಪಡುವ ನಾಮಾವಳಿಗಳ ರೂಪ, ಆ ರೂಪಗಳ ಉಲ್ಲೇಖಗಳಿಂದ

ಪ್ರತೀಯಮಾನವಾಗುವ ಅರ್ಥ ಇವುಗಳ ಬೆಳಕಿನಲ್ಲಿ ನಾನು 'ಸವತಿಗಂಧವಾರಣೆ' ಎಂಬ ಸಮಾಸಪದದ ವಿಗ್ರಹವಾಕ್ಯವನ್ನು ಮಾಡಿ, ಅದಕ್ಕೆ ಅನುಗುಣವಾಗಿ ಅರ್ಥಮಾಡುವ ಪ್ರಯತ್ನ ಮಾಡಿದ್ದೇನೆ. ಹೀಗೆ ಮಾಡುವಾಗ 'ಗಂಧವಾರಣ' ಎಂಬ ಮಾತು ಉತ್ತರ ಪದವಾಗಿ ಬರುವ 'ಅಪ್ಪನ ಗಂಧವಾರಣ' ಇತ್ಯಾದಿ ನಾಮಾವಳಿಗಳ ರೂಢ ಅರ್ಥಗಳು ಸವಿಶೇಷಸಾಪೇಕ್ಷ್ಯಪ್ರಕ್ಷೇಪ ಎನ್ನುವುದು ನನ್ನ ಗ್ರಹಿಕೆ. ಇಂತಹ ನಾಮಾವಳೀ ಸಂದರ್ಭಗಳನ್ನು ಇನ್ನೂ ವಿವರವಾಗಿ ಓದುಗರು ಪರಿಶೀಲಿಸಬೇಕೆಂಬುದು ನನ್ನ ವಿನಂತಿ. "ತನಗೆ ರಕ್ಷೆಯಾಗಿ, ತನಗೆ ಇಷ್ಟರಲ್ಲದ ವ್ಯಕ್ತಿಗಳ ನಿಗ್ರಹಕ್ಕಾಗಿ ದೊರೆಯೋ ಮತ್ತೊಬ್ಬನೋ ತನ್ನ ವಶದಲ್ಲಿರಿಸಿಕೊಂಡ, ಸಾಕಿ ಸಲಹಿದ ಬೇರೊಬ್ಬ ಪ್ರಿಯವ್ಯಕ್ತಿ, ಸಮರ್ಥನಾದ ವ್ಯಕ್ತಿ" ಎನ್ನುವುದು ಆ ಸಂದರ್ಭಗಳೆಲ್ಲೆಲ್ಲ ಸಾಮಾನ್ಯವಾಗಿ ಸ್ಫುರಿಸುವುದು ನಿಜ. ಆದರೆ ಆ ಸಂದರ್ಭಗಳಲ್ಲಿಯ ಸ್ವಾಮ್ಯಾರ್ಥಕ ಷಷ್ಠ್ಯಂತ ಪೂರ್ವಪದದಿಂದಾಗಿ, ವಶದಲ್ಲಿರಿಸಿಕೊಂಡವನಿಗೆ ಇಲ್ಲವೆ ಸಾಕಿ ಸಲಹಿದವನಿಗೆ ಆ ಇನ್ನೊಬ್ಬ ವ್ಯಕ್ತಿಯ ವಿಷಯದಲ್ಲಿ ಅಕ್ಕರೆ, ಅಭಿಮಾನ, ಆಪ್ತತೆ ಇತ್ಯಾದಿ ಭಾವಗಳೂ ಇರುತ್ತವೆಯೆಂದು ನಾವು ತಿಳಿಯುವುದು ತಪ್ಪಾಗದು.

ಈ ಹಿನ್ನೆಲೆಯಲ್ಲಿ 'ಸವತಿಯರ ಗಂಧವಾರಣೆ' ಎಂಬ ವಿಗ್ರಹವಾಕ್ಯ ಸಾಧ್ಯ. ಆಗ ಆಶಯ "ಸವತಿಯರ ಮದ್ದಾನೆ" ಎಂದಾಗುವುದು. "ಸವತಿಯರು ಮತ್ತಾರನ್ನೋ ನಿಗ್ರಹಿಸಲು ಇಟ್ಟುಕೊಂಡ ಸಮರ್ಥವ್ಯಕ್ತಿ" ಎನ್ನುವುದು ಅಷ್ಟು ಚೆನ್ನಾಗಿ ಹೊಂದದಿದ್ದರೂ, "ತಮ್ಮ ರಕ್ಷೆಗಾಗಿ, ಬೆಂಬಲಕ್ಕಾಗಿ ಇಟ್ಟುಕೊಂಡ ಅಕ್ಕರೆಯ, ಅತಿಶಯದ ವ್ಯಕ್ತಿ" ಎನ್ನುವುದು ತಕ್ಕಮಟ್ಟಿಗೆ ಹೊಂದಿಕೆಯಾಗಬಹುದೆಂದು ತೋರುತ್ತದೆ. ಇದು ಮನಸ್ಸಿಗೆ ಬಾರದಿದ್ದರೆ, 'ಸವತಿಯರೊಳ್ ಗಂಧವಾರಣೆ' ಎಂಬ ವಿಗ್ರಹವಾಕ್ಯವನ್ನು ಮಾಡಿಕೊಂಡು "ಸವತಿಯರ ಗುಂಪಿನಲ್ಲಿ ಅಧಿಕಳಾದವಳು, ಶ್ರೇಷ್ಠಳಾದವಳು" ಎಂಬುದಾಗಿ ಸಹ ಅರ್ಥ ಮಾಡಲು ಸಾಧ್ಯವಿದೆ. ಈ ಸಾಧ್ಯತೆಯ ಬಗ್ಗೆಯೂ ಹಿಂದೆ ಪ್ರಸ್ತಾಪಿಸಿದೆ. ತೊಡಕಾಗುವುದು ವಿಶೇಷಣಪದವಾದ 'ಉದ್ವೃತ್ತ'ವೇ. ಉದ್ವೃತ್ತೆಯಾದ (ಎಂದರೆ ಕೊಬ್ಬಿದ, ದರ್ಪಿಷ್ಠೆಯಾದ, ಹೆಮ್ಮೆಯಿಂದ ಬೀಗುವ) 'ಸವತಿಗಂಧವಾರಣೆ' (ಎಂದರೆ ಶಾಂತಲೆ) ಎಂದು ಗ್ರಹಿಸುವುದು ಪಟ್ಟಮಹಿಷಿಯಾದವಳ ವಿಷಯದಲ್ಲಿ ಅನುಚಿತವೇನಲ್ಲ; ಉದ್ವೃತ್ತೆಯರಾದ ಸವತಿಯರನ್ನು ತುಳಿಯುವ, ಅವರ ಮದವನ್ನು ಮುರಿಯುವ ಗಂಧವಾರಣೆ ಎಂದೇ ಅರ್ಥ ಮಾಡಬೇಕಾಗಿಲ್ಲ. "ಮದಸಂಗೆ ಮಹೇಶ್ವರಂ ಮದನ ಮಹೇಶ್ವರಂ" (ಶಮದ. ಸೂ. ೧೮೫) ಎಂಬಂತೆ "ಸವತಿಯರ್ಗೆ ಗಂಧವಾರಣೆ" ಎಂದು ಆಗಬಹುದು. ಆದರೆ ನನ್ನ ಮಟ್ಟಿಗೆ 'ಗಂಧವಾರಣ' ಶಬ್ದವನ್ನು ಸಾತ್ತ್ವಿಕವಾದ ಅರ್ಥದಲ್ಲಿ ಗ್ರಹಿಸುವುದು ಇಲ್ಲಿ ಅಪೇಕ್ಷಣೀಯ.

ಈ ನಿರೂಪಣೆ, ಈ ಸಮಸ್ಯೆಯನ್ನು ಪರಿಶೀಲಿಸುವವರಿಗೆ ಪೂರ್ತಿಯಾಗಿ ಸಮಾಧಾನಕೊಡಬಹುದೆಂದು ನಾನು ನಂಬಿಲ್ಲ. ವಾಸ್ತವವಾಗಿ ನನಗೇ ನನ್ನ ಗ್ರಹಿಕೆ ಪೂರ್ತಿ ಸಮರ್ಪಕ, ತೃಪ್ತಿಕರ ಎಂದು ತೋರಿಲ್ಲ. ಆದರೆ ಇಲ್ಲಿ ಖಂಡಿತವಾಗಿ ವಿಚಾರಕ್ಕೆ ಅವಕಾಶವುಂಟು ಎಂದು ಈಗಲೂ ನನಗೆ ತೋರುತ್ತಿದೆ. ಅಂತಹ ವಿಚಾರ ನಡೆಯಲು ಈ ಬರಹ ಪ್ರಚೋದಕವಾಗಲಿ ಎಂದು ಆಶಿಸುತ್ತೇನೆ.

ಎಡಱಿಱಿದೀವ ಕಲ್ಪತರುವೆಂದು ವನೀಪಕಕೋಟಿ ಸಂತಸಂ |
ಬಡೆ ಪೊಡೆವೊಂದಕಾಳ ವಿಳಯಾಶನಿಯೆಂದು ವಿರೋಧಿಗಳ್ ಮನಂ ||
ಗಿಡೆ ಬಿಯಮುಂ ಪರಾಕ್ರಮಮುಮೊಪ್ಪಿರೆ ತನ್ನೊಡವುಟ್ಟಿದರ್ ಸಮಂ |
ತೊಡವರೆ ವಾರಣಾವತಮನೆಯ್ದಿದನಸ್ಮನ ಗಂಧವಾರಣಂ ||

(೨,೯೮)

ಪೞುವೞಿಯುಂ ತಗುಳ್ದುಳುರ್ವ ಜೇಗೆವೊಳೆಚ್ಚ ಶರಾಳಿಗಳ್ ಛೞಿಲ್ |
ಛೞಿಲೆನೆ ಪಾಯೆ ಪಾಯ್ವ ಬಿಸುನೆತ್ತರ ಸುಟ್ಟುರೆ ಚಾತುರಂಗಮುಂ ||
ಕೞಿಕುೞಿವಾಗೆ ಪೇೞಿಕಪೆಸರಿಲ್ಲೆನೆ ಪಾಯಿಸಿ ತೇರನೆಯ್ದೆ ತೊ |
ತ್ತುೞಿದುೞಿದತ್ತು ವೈರಿ ಬಲ್ಲಮೆಲ್ಲಮನಸ್ಮನ ಗಂಧವಾರಣಂ ||

(ಪಂಪಭಾರತ) (೮, ೧೦೫)

ನೆಟ್ಟನೆ ವಾಸವಂಗಮೃತವಾರಿಧಿಯೊಳ್ಸುರ ಗಂಧವಾರಣಂ |
ಪುಟ್ಟಿಸುರೇಂದ್ರ ರಾಜ್ಯಮುದಿತೋದಿತಮಾದುದು ದಾನದಿಂದೊಡಂ ||
ಬಟ್ಟರೆ ಭದ್ರಲಕ್ಷಣಗುಣಾನ್ವಿತನಸ್ಮನ ಗಂಧವಾರಣಂ |
ಪುಟ್ಟೆ ನರೇಂದ್ರರಾಜ್ಯಮುದಿ ತೋದಿತಮಾಹವಮಲ್ಲದೇವನಾ ||

(೧, ೧೧)

ರಣವೊಳರಾತಿವಾರಣಘಟಾಳಿಯನೊರ್ವನೆಗೆಲ್ದನೊಂದು ವಾ |
ರಣವೊಳನೂನದಾನಗುಣವರ್ಷಿತಪ್ರೋರಣನಿಷ್ಟತುಷ್ಟದಾ ||
ರಣನವದಾತಕೀರ್ತಿಗೃಹತೋರಣನಸ್ಯನರೇಂದ್ರಗಂಧವಾ
ರಣಮದ ವಾರಣಂ ವಿಜಯಕಾರಣನಸ್ಮನ ಗಂಧವಾರಣಂ ||

(ಗದಾಯುದ್ಧ) (೧, ೧೭)

ಡಾ. ಅಂಬಳಿಕೆ ಹಿರಿಯಣ್ಣ

ತೊದವರ ಮರಣ ಸಂಪ್ರದಾಯಗಳು

ತೊದವರು ದಕ್ಷಿಣ ಭಾರತದ ಆದಿವಾಸಿ ಬುಡಕಟ್ಟುಗಳಲ್ಲಿ ಪ್ರಮುಖರಾದವರು. ಇವರು ತಮಿಳುನಾಡಿನ ನೀಲಗಿರಿ ಬೆಟ್ಟಗಳಲ್ಲಿ ನೆಲಸಿದ್ದಾರೆ. ಇವರು ಯಾವ ಜನಾಂಗ ಮೂಲದವರೆಂಬುದು ಇನ್ನೂ ಖಚಿತವಾಗಿಲ್ಲ. ಇವರ ಸಾಂಸ್ಕೃತಿಕ ಜೀವನ ಬಹುಮಟ್ಟಿಗೆ ಮಲಬಾರಿನ ನಾಯರರದ್ದೇ ಆಗಿದ್ದರೂ ಅವರಿಗಿಂತ ವಿಶಿಷ್ಟವಾದ ಜೀವನವನ್ನು ನಡೆಸುತ್ತಿದ್ದು ದಕ್ಷಿಣ ಭಾರತದ ಇತರ ಆದಿವಾಸಿ ಬುಡಕಟ್ಟುಗಳಿಂದ ಬೇರೆಯಾಗಿಯೇ ಕಾಣುತ್ತಾರೆ. ಮೊದಲಿನಿಂದಲೂ ಇತರ ಜನಪದಗಳೊಂದಿಗೆ ಬೆರೆಯದೆ ಪ್ರತ್ಯೇಕವಾಗಿ ಬದುಕುತ್ತಿರುವುದೇ ಇದಕ್ಕೆ ಕಾರಣವಿರಬಹುದು[1].

ತೊದವರಲ್ಲಿ ಬಹು ಹಿಂದಿನಿಂದಲೂ ಪ್ರಚಲಿತವಿರುವ, ಪರಂಪರಾಗತವಾಗಿ ಅವರ ಜೀವನದಲ್ಲಿ ಮುಂದುವರಿದುಕೊಂಡು ಬರುತ್ತಿರುವ ವಿಶಿಷ್ಟ ಆಚರಣೆಗಳೇ ತೊದವ ಸಂಪ್ರದಾಯಗಳಾಗಿವೆ. ಈ ಸಂಪ್ರದಾಯಗಳು ತೊದವ ಸಂಸ್ಕೃತಿಯನ್ನು ಸಮರ್ಥವಾಗಿ ಬಿಂಬಿಸುತ್ತವೆ. ಮುಖ್ಯವಾಗಿ, ಸಾವಿನ ಸಂಬಂಧವಾಗಿ ಇವರಲ್ಲಿ ಅನುಷ್ಠಾನದಲ್ಲಿರುವ ಸಂಪ್ರದಾಯಗಳು ಕುತೂಹಲಕರವಾಗಿದ್ದು ಅಭ್ಯಾಸಯೋಗ್ಯವಾಗಿವೆ. ಅವು ಜನನ, ಪ್ರೌಢ ಸಂಸ್ಕಾರ, ಮದುವೆ–ಈ ಮುಂತಾದವುಗಳ ಬಗೆಗಿನ ಕಟ್ಟಳೆ, ಆಚರಣೆಗಳಿಗಿಂತ ಹೆಚ್ಚು ಕಠಿಣ ಸ್ವರೂಪದಲ್ಲಿ ಉಳಿದು ಬಂದಿವೆ.

ತೊದವರ ಶವಸಂಸ್ಕಾರ ಸಂಪ್ರದಾಯಾಚರಣೆಗಳು ಬಹಳ ವಿಸ್ತಾರವಾದವು. ಇವರು ಮೃತರಿಗೆ 'ಹಸಕೇಡು' ಮತ್ತು 'ಬರಕೇಡು' ಎಂದು ಎರಡು ಬಗೆಯ ಉತ್ತರ ಕ್ರಿಯೆಗಳನ್ನು ನಡೆಸುತ್ತಾರೆ. ಮೊದಲು ಹಸಕೇಡು ಅನಂತರ ಬರಕೇಡು ಸಂಸ್ಕಾರಗಳನ್ನು ನಡೆಸುವುದು ಕ್ರಮ. ಮೃತರು ಮಕ್ಕಳಾಗಿದ್ದರೆ ಎರಡೂ ಉತ್ತರಕ್ರಿಯೆಗಳನ್ನು ಒಂದೇ ದಿನ ನಿರ್ವಹಿಸಲಾಗುವುದು. ಮೃತರು ಸ್ತ್ರೀಯರಾಗಿದ್ದರೆ ಮೊದಲನೆಯದಕ್ಕೂ ಎರಡನೆಯದಕ್ಕೂ ಒಂದೆರಡು ತಿಂಗಳುಗಳ ಅಂತರವಿರುತ್ತದೆ. ಮೃತರು ಪುರುಷರಾಗಿದ್ದರೆ ಒಂದು ವರ್ಷಾವಧಿಯ ಅಂತರವಿರುತ್ತದೆ. 'ಹಸಕೇಡು' ಸಂಸ್ಕಾರವನ್ನು ನಿರ್ವಹಿಸುವ ಜಾಗವನ್ನು 'ಮೇಕುಡಿ' ಎಂದೂ 'ಬರಕೇಡು' ಜಾಗವನ್ನು 'ಓಸೊರ್ಮ್' ಎಂದೂ ಕರೆಯುತ್ತಾರೆ. ಈ ಮೇಕುಡಿ ಮತ್ತು ಓಸೊರ್ಮ್‌ಗಳು ಸ್ತ್ರೀಯರಿಗೇ ಬೇರೆ, ಪುರುಷರಿಗೇ ಬೇರೆ.

ಮೃತರು ಪುರುಷರಾಗಿದ್ದರೆ ಹಸಕೇಡು ಸಂಸ್ಕಾರದ ವಿಧಿಗಳನ್ನು ಎಮ್ಮೆ ಕೊಟ್ಟಿಗೆಯಲ್ಲಾಗಲೀ ಎಮ್ಮೆಕೊಟ್ಟಿಗೆಯನ್ನು ಪ್ರತಿನಿಧಿಸುವ ನೂತನ ಗುಡಿಸಲಿನಲ್ಲಾಗಲೀ ನಿರ್ವಹಿಸಲಾಗುವುದು. ಸ್ತ್ರೀಯರಾಗಿದ್ದರೆ ಆ ಉದ್ದೇಶಕ್ಕಾಗಿ ಒಂದು ಪ್ರತ್ಯೇಕ ಗುಡಿಸಲನ್ನು ನಿರ್ಮಿಸಿ ಅಲ್ಲಿ ನೆರವೇರಿಸಲಾಗುವುದು. ಸಂಸ್ಕಾರ ವಿಧಿಗಳು ಮುಗಿದ ಮೇಲೆ ಅವನ್ನು ನಾಶಗೊಳಿಸಲಾಗುವುದು.

ಮರಣಶಯ್ಯೆಯಲ್ಲಿದ್ದ ವ್ಯಕ್ತಿಗೆ ಹೊಸ ಉತ್ತರೀಯ ಸುತ್ತುವುದು ಸಂಪ್ರದಾಯ. ಬಾಯಿಗೆ ಎರಡು ಹನಿ ಹಾಲುಬಿಟ್ಟು ಹುರಿದ ಕಾಳು ಮತ್ತು ಬೆಳ್ಳಿಯನ್ನು ಹಾಕುವುದು ಪದ್ಧತಿ. ಸತ್ತ ನಂತರ ಸ್ನಾನ ಮಾಡಿಸಿ ಕಪ್ಪು ಪೂತ್ಕುಳಿ, ನೀಲಿ ಮತ್ತು ಕೆಂಪು ಕಸೂತಿಯಿಂದ ಅಲಂಕೃತವಾದ ಪೂತ್ಕುಳಿ, ಅದರ ಮೇಲೆ ಬಿಳಿಯಂಚಿನ ಪೂತ್ಕುಳಿ, ಅದರ ಮೇಲೆ ಕೆಂಪು ಪೂತ್ಕುಳಿ – ಹೀಗೆ ನಾಲ್ಕು ಮಡಿಕೆಯ ಉಡುಪು ಉಡಿಸಿ ಬೆರಳುಗಳಿಗೆ ಹಿತ್ತಾಳೆ ಉಂಗುರಗಳನ್ನು ತೊಡಿಸುತ್ತಾರೆ. ಶವದ ಪಕ್ಕದಲ್ಲಿ ಬಿಲ್ಲು ಅಕ್ಕಿ ಕವಡೆ ಚಿಪ್ಪುಗಳಿಂದ ಅಲಂಕೃತವಾದ ಒಂದು ಚರ್ಮದ ಕಾಗದದ ಸುರುಳಿ, ದ್ರವ್ಯ, ತಂಬಾಕು, ತೆಂಗಿನಕಾಯಿ ಚೂರು, ನಾನಾ ಬಗೆಯ ಧಾನ್ಯಗಳು, ತುಪ್ಪ ಇತ್ಯಾದಿ ಪದಾರ್ಥಗಳನ್ನು ಗಂಟು ಕಟ್ಟಿಡಲಾಗುತ್ತದೆ.

ಸಾವಿನ ಸುದ್ದಿ ತಲುಪಿದ ಕೂಡಲೆ ಬಂಧುಗಳು ಮೃತನ ಗುಡಿಸಲ ಮುಂದೆ ಕಲೆತು ಶೋಕ ಸೂಚಿಸಲು ಹೆಂಗಸರು ಮತ್ತು ಹುಡುಗಿಯರು, ಗಂಡಸರು ಮತ್ತು ಹುಡುಗರು– ಹೀಗೆ ಎರಡು ಬಣಗಳನ್ನು ಸೃಷ್ಟಿಸಿಕೊಳ್ಳುತ್ತಾರೆ. ಎರಡು ಬೇರೆ ಬೇರೆ ಶಿಬಿರಾಗ್ನಿಗಳ ಸುತ್ತ ಕುಳಿತು ಮೃತರಿಗೆ ತಮ್ಮ ತೀವ್ರ ಸಂತಾಪವನ್ನು ವ್ಯಕ್ತಪಡಿಸುತ್ತಾರೆ. ಪ್ರತಿಯೊಬ್ಬ ದುಃಖಿಯೂ ತನಗೆ ಸರಿಹೊಂದುವ ದುಃಖಿಯನ್ನು ಜೋಡಿ ಮಾಡಿಕೊಂಡು ಒಂದೇ ರಾಗದಲ್ಲಿ ಆಲಾಪಗೈಯುವ ದೃಶ್ಯ ಹೃದಯಸ್ಪರ್ಶಿಯಾಗಿರುತ್ತದೆ. ಈ ಶೋಕತಪ್ತರ ರಾಗಾಲಾಪಗಳಿಗನುಗುಣವಾಗಿ ಕೋಟರು ವಾಲಗ ನುಡಿಸುತ್ತಾರೆ.

ಹಸಕೇಡು ಸಂಸ್ಕಾರದ ಸಂದರ್ಭದಲ್ಲಿ ಬಹುಪಾಲು ಎಲ್ಲಾ ಹಳ್ಳಿಗಳ ಪ್ರತಿನಿಧಿಗಳೂ ಹಾಜರಿರುತ್ತಾರೆ. ಮೃತನ ನಿಕಟವರ್ತಿಗಳು, ಸಮೀಪ ಬಂಧುಗಳು ಉತ್ತರ ಕ್ರಿಯೆಗೆ ಬೇಕಾಗುವ ಆಗತ್ಯವಸ್ತುಗಳನ್ನು ಕಳಿ ಹಾಕುತ್ತಾರೆ. ಯಾವ ಯಾವ ಬಂಧುಗಳು ಯಾವ ಯಾವ ರೀತಿಯಲ್ಲಿ ಉತ್ತರಕ್ರಿಯೆಗೆ ಸಹಕರಿಸಬೇಕೆಂಬುದನ್ನು ಮೊದಲೇ ನಿರ್ಧರಿಸಿರುವರೇನೋ ಎನ್ನುವಂತೆ ಪ್ರತಿಯೊಬ್ಬರೂ ಒಂದೊಂದು ಕಾರ್ಯವನ್ನು ನಿರ್ವಹಿಸುತ್ತಾರೆ. ಕೆಲವರು ಮೃತನ ಹೆಸರಿನಲ್ಲಿ ಬಲಿಕೊಡಲು ಎಮ್ಮೆಗಳನ್ನು ದಾನ ಕೊಡುತ್ತಾರೆ, ಕೆಲವರು ಆಹಾರ ಪದಾರ್ಥಗಳನ್ನು ಒದಗಿಸುತ್ತಾರೆ, ಕೆಲವರು ಉಡುಗೊರೆ ನೀಡುತ್ತಾರೆ – ಹೀಗೆ.

ಹಸಕೇಡು ಸಂಸ್ಕಾರದ ಸಂದರ್ಭದಲ್ಲಿ ನಡೆಯುವ ವಿಧಿಗಳು ವಿಶಿಷ್ಟವಾದವು. ರಕ್ತಸಂಬಂಧಿಯೊಬ್ಬರು ನೀಡಿದ ಹೊಸಬಟ್ಟೆಯನ್ನು ಮೃತನ ಹೆಂಡತಿ ಶವಕ್ಕೆ ಹೊದಿಸುವುದು ಪದ್ಧತಿ. ಮೃತನು 'ತಾರ್ದರಲ್' ಗುಂಪಿಗೆ ಸೇರಿದವನಾಗಿದ್ದರೆ ಶವವನ್ನು ಸುಡು

ಗಾಡಿಗೆ ಒಯ್ಯುವುದಕ್ಕೆ ಮೊದಲು 'ತೀವಲಿವಾಲ್' ಗುಂಪಿಗೆ ಸೇರಿದ ಪೈನಿಗನು ಮೂರು ಸಾರಿ ಎಮ್ಮೆಯ ಕೊಟ್ಟಿಗೆಗೆ ಮಣ್ಣೆರಚುತ್ತಾನೆ. ಆಮೇಲೆ ಶವವನ್ನು ಮೂರು ಕೋಣೆ ಗಳಿರುವ ಎಮ್ಮೆ ಕೊಟ್ಟಿಗೆಯಲ್ಲಿಟ್ಟು ಎಮ್ಮೆಗಳನ್ನು ಬಲಿ ಕೊಡುತ್ತಾರೆ. ಆಗ ರಕ್ತ ಸಂಬಂಧಿಗಳು ಶವದ ಸುತ್ತ ಕುಳಿತು ಸಾಮೂಹಿಕವಾಗಿ ದುಃಖ ಸೂಚಿಸುತ್ತಾರೆ. ತಮ್ಮ ದುಃಖತಪ್ತ ಮನಸ್ಸಿನ ಭಾವನೆಗಳನ್ನು ಹಾಡುಗಳಲ್ಲಿ ಪ್ರಕಟಿಸುತ್ತಾರೆ. (ಈ ಹಾಡುಗಳಲ್ಲಿ ಮೃತನ ವಂಶ, ಅವನ ಸಿದ್ಧಿ ಸಾಧನೆಗಳ ಹಿರಿಮೆಯನ್ನು ಕೊಂಡಾಡ ಲಾಗುವುದು). ಸಾಮೂಹಿಕ ಶೋಕ ಸೂಚಿಸುವ ಸಂದರ್ಭದಲ್ಲಿ ಹಳ್ಳಿಯ ತರುಣರು ಸ್ಮಶಾನದಲ್ಲಿ ಬಲಿ ಕೊಡಬೇಕಾಗಿರುವ ಎಮ್ಮೆಗಳನ್ನು ಜೌಗು ಭೂಮಿಗೆ ಅಟ್ಟಿಸಿಕೊಂಡು ಬರುತ್ತಾರೆ. ಆ ವೇಳೆಗೆ ಸರಿಯಾಗಿ ಶವವನ್ನು ಎಮ್ಮೆ ಕೊಟ್ಟಿಗೆಯಿಂದ ಸುಡುಗಾಡಿಗೆ ಚಟ್ಟದಲ್ಲಿ ಸಾಗಿಸಿ ತರಲಾಗುವುದು. ಶವದ ಜೊತೆಗೆ ಸಂಸ್ಕಾರ ಕ್ರಿಯೆಗಳಿಗೆ ಅಗತ್ಯ ವಾದ ಅಕ್ಕಿ, ಬೆಲ್ಲ, ಈಡಿಗೆ ಹಾಕಲು 'ಕಯೂಜ್' ಮರದ ಸೌದೆ ಇತ್ಯಾದಿಯನ್ನು ಕೊಂಡೊಯ್ಯಲಾಗುವುದು. ಶವೋತ್ಸವದಲ್ಲಿ ಗಂಡಸರು ಮುಂದೆ, ನಡುವೆ ವಾದ್ಯದವರು ಹೆಂಗಸರು ಎಲ್ಲರಿಗಿಂತ ಹಿಂದೆ ಇರುತ್ತಾರೆ.

ಶವಸಂಸ್ಕಾರ ಕ್ರಿಯೆಗಳನ್ನು ಮುಖ್ಯ ದುಃಖಿ ನೆರವೇರಿಸಿಕೊಡಬೇಕು. ಈ ವ್ಯಕ್ತಿ ಮೃತನ ಸೋದರನಾಗಿರಬಹುದು ಅಥವಾ ಮಗನಾಗಿರಬಹುದು ; ಮೃತ ವ್ಯಕ್ತಿ ಸ್ತ್ರೀ ಯಾಗಿದ್ದರೆ ಮೃತಳ ಗಂಡ ಮುಖ್ಯ ದುಃಖಿ ಎನಿಸುತ್ತಾನೆ. ಅವಳ ಮಕ್ಕಳ ಪಿತೃತ್ವದ ಹಕ್ಕನ್ನು ಪಡೆದ ಬೇರೆ ಗಂಡಂದಿರೂ ಆ ಕೆಲಸ ನಿರ್ವಹಿಸಬಹುದು. ವಿರಳವಾಗಿ ಮಗಳು ಅಥವಾ ಸೊಸೆ ಮುಖ್ಯ ದುಃಖಿಯಾಗಿ ಕಾಣಿಸಿಕೊಳ್ಳಬಹುದು.

ಶವವನ್ನು ಸ್ಮಶಾನಕ್ಕೆ ತಂದಮೇಲೆ ಅದಕ್ಕೆ ಸ್ನಾನ ಮಾಡಿಸಿ ಉಡುಗೆ ತೊಡುಗೆ ಗಳಿಂದ ಶೃಂಗರಿಸಿ ಚಟ್ಟದಮೇಲೆ ಮುಖ ಕೆಳಗೆ ಮಾಡಿ ಮಲಗಿಸುತ್ತಾರೆ. ಅಲ್ಲಿ ನೆರೆದಿದ್ದ ವರೆಲ್ಲರೂ ಶವಕ್ಕೆ ಸಾಷ್ಟಾಂಗ ಪ್ರಣಾಮ ಸಲ್ಲಿಸಿ ಬೆಲೆ ಬಾಳುವ ಪದಾರ್ಥಗಳನ್ನು ಉಡುಗೊರೆ ನೀಡುತ್ತಾರೆ. ಕೆಲವು ಬಂಧುಗಳು ಮೃತನ ಸಂಗಡ ಪರಲೋಕಕ್ಕೆ ಕಳಿಸಲು ಎಮ್ಮೆಗಳನ್ನು ಕಯೂಜ್ ಮರದ ದೊಣ್ಣೆಯಿಂದ ಹೊಡೆದು ಕೊಲ್ಲುತ್ತಾರೆ. ಅದೇ ವೇಳೆಯಲ್ಲಿ ಮುಖ್ಯ ದುಃಖಿಯು ಮೃತನ ತಲೆಗೂದಲನ್ನು ಕತ್ತರಿಸಿಟ್ಟುಕೊಂಡು ಶವಕ್ಕೆ ತೊಡಿಸಿದ್ದ ಪೂತ್ಕೂಲಿಗೆ ಬೆಳ್ಳಿ ನಾಣ್ಯವೊಂದನ್ನು ಕಟ್ಟುತ್ತಾನೆ. ಇಷ್ಟೆಲ್ಲ ಆದಮೇಲೆ ಶವವನ್ನು ತೂಗಾಡಿಸಿ ಮೂರು ಸಾರಿ ಮೇಲಕ್ಕೆ ಹಾರಿಸಿ ಈಡಿನ ಚಟ್ಟದ ಮೇಲಿಡು ತ್ತಾರೆ. ಹಾಗೆ ಮಾಡುವಾಗ ಅಲ್ಲಿ ನೆರೆದವರು ಸಾಮೂಹಿಕವಾಗಿ ಹೀಗೆ ಹಾಡುತ್ತಾರೆ: 'ನೀನು ಅಮ್ನೋಡ್‌ಗೆ ಹೋಗುತ್ತೀಯ. ಅಲ್ಲಿ ನಿನಗೆ ಕುಡಿಯಲು ಹಾಲು ದೊರಕಲಿ ; ಅಲ್ಲಿ ನಿನಗೆ ಎಲ್ಲರೂ ಚೆನ್ನಾಗಿರಲಿ'. ಹೀಗೆ ಹಾಡಿ ಹರಸಿದರೆ ಮೃತನು ನೇರ ವಾಗಿ ಅಮ್ನೋಡ್‌ಗೆ ಹೋಗುತ್ತಾನೆಂಬ ನಂಬಿಕೆ ಇದೆ. ಕೊನೆಯಲ್ಲಿ ಮತ್ತೊಮ್ಮೆ ಸಾಮೂಹಿಕ ಶೋಕವನ್ನು ಪ್ರದರ್ಶಿಸಿ ಎಮ್ಮೆಯೊಂದನ್ನು ಕೊಂದು ಅದರ ಕೊಂಬು ಗಳನ್ನು ಶವದ ಕೈಗಳಿಂದ ಹಿಡಿಸುತ್ತಾರೆ. ಮೃತನು ಸಮಾಜದ ಗಣ್ಯವ್ಯಕ್ತಿಯಾಗಿದ್ದರೆ

ಹೆಚ್ಚು ಸಂಖ್ಯೆಯ ಎಮ್ಮೆಗಳನ್ನು ಬಲಿ ಕೊಡಲಾಗುವುದು. ಎಮ್ಮೆಗಳನ್ನು ಮೃತನೊಂದಿಗೆ ಪರಲೋಕಕ್ಕೆ ಕಳುಹಿಸಿದ ನಂತರ ಶವದ ಮೈಮೇಲಿದ್ದ ಬೆಲೆಬಾಳುವ ಪದಾರ್ಥಗಳನ್ನು ಸ್ವಲ್ಪ ಸ್ವಲ್ಪ ತೆಗೆದು ಅಲ್ಲಿ ನೆರೆದಿದ್ದವರಿಗೆಲ್ಲ ಹಂಚಿ ಅನಂತರ ಶವಕ್ಕೆ ಬೆಂಕಿ ಹೊತ್ತಿಸಲಾಗುವುದು. ಎರಡು ಒಣ ಸೌದೆಗಳನ್ನು ಒಂದಕ್ಕೊಂದು ಉಜ್ಜಿ ಬೆಂಕಿ ಉತ್ಪಾದಿಸಿ ಆ ಬೆಂಕಿಯನ್ನೇ ಈಡಿಗೆ ಸ್ಪರ್ಶಿಸುವುದು ಆ ಸಂದರ್ಭದ ವಿಶೇಷ. ಶವಕ್ಕೆ ಪೂರ್ತಿಯಾಗಿ ಬೆಂಕಿ ಆವರಿಸಿದಾಗ ಮೃತನ ಸಂಬಂಧಿಗಳು ಪಕ್ಕದ ಬೆಟ್ಟದ ನೆತ್ತಿಯನ್ನೇರಿ ಪರಲೋಕಕ್ಕೆ ಹೋದ ಎಮ್ಮೆಗಳು ಅವನನ್ನು ಕಾಪಾಡಲಿ ಎಂದು ಹಾರೈಸುತ್ತಾರೆ. ಅದಕ್ಕಾಗಿ ದೇವರನ್ನು ಪ್ರಾರ್ಥಿಸುತ್ತಾರೆ. ಶವ ಸುಟ್ಟು ಭಸ್ಮವಾದ ಮೇಲೆ ಬೇಯದೆ ಉಳಿದ ಭಾಗಗಳನ್ನು ಕತ್ತರಿಸಿಟ್ಟಿದ್ದ ತಲೆಗೂದಲಿನಲ್ಲಿ ಸುತ್ತಿ ವಸ್ತ್ರವೊಂದರಲ್ಲಿ ಗಂಟು ಕಟ್ಟಿ ಮೃತನ ಗುಡಿಸಲಿಗೆ ಕೊಂಡೊಯ್ದು ಜೋಪಾನವಾಗಿ ಸಂರಕ್ಷಿಸಿಡಲಾಗುವುದು.

ಈ ಶವಸಂಸ್ಕಾರದಲ್ಲಿ ಪಾಲ್ಗೊಂಡವರೆಲ್ಲ ಸೂತಕ ಪರಿಹಾರ ವಿಧಿಗಳನ್ನು ಆಚರಿಸುವವರೆಗೆ ಅಶುದ್ಧರಾಗಿರುತ್ತಾರೆಂದು ನಂಬಿಕೆ. ಆ ಅವಧಿಯಲ್ಲಿ ಒಬ್ಬರ ಹೆಸರನ್ನು ಮತ್ತೊಬ್ಬರು ಕೂಗಿ ಕರೆಯುವುದಿಲ್ಲ.

ಮೃತಳು ವೃದ್ಧಳಾಗಿದ್ದರೆ ಅವಳ ಸಂಸ್ಕಾರ ಕ್ರಿಯೆಗಳನ್ನು ಮಗಳು ಅಥವಾ ಸೊಸೆ ನಿರ್ವಹಿಸುವುದು ಪದ್ಧತಿ. ಈ ಪ್ರಧಾನ ದುಃಖಿ ಮೃತಳ ಪೂತ್ಕೂಲಿಗೆ 'ತಿವಿರಿ' ಎಂಬ ಕುರುಚಲು ಗಿಡದ ಎಲೆಯನ್ನು ಕಟ್ಟುವುದು, ತೋಳಿನ ಮೇಲೆ ಕವಡೆ ಚಿಪ್ಪಿನ ಸರವನ್ನು ಕಟ್ಟುವುದು ಮತ್ತು ಶವಕ್ಕೆ ಅಗ್ನಿಸ್ಪರ್ಶ ಮಾಡುವುದು – ಇಷ್ಟು ಕ್ರಿಯೆಗಳನ್ನು ನೆರವೇರಿಸುತ್ತಾಳೆ.

ಸತ್ತ ವ್ಯಕ್ತಿ ಕನ್ಯೆಯಾಗಿದ್ದರೆ ಸೋದರಮಾವನ ಮಗನ ಹಸ್ತದಿಂದ ಶವದ ಕೈಗೆ ಬಿಲ್ಲು ಬಾಣಗಳನ್ನು ಕೊಡಿಸುವುದು ಸಂಪ್ರದಾಯ.[4] ಕೊನೆಯಲ್ಲಿ ಈಡಿನ ಮೇಲೆ ಅವನು ಅಕ್ಕಿ ಬೆಲ್ಲ ಜೇನುತುಪ್ಪ ಬೆಣ್ಣೆ ಇತ್ಯಾದಿಗಳಿರುವ ವಸ್ತ್ರದ ಗಂಟನ್ನು ಇಟ್ಟು ಹಿಂತಿರುಗಿ ನೋಡದೆ ಗುಡಿಸಲ ಕಡೆಗೆ ಹೋಗುತ್ತಾನೆ. ಆ ಕ್ರಿಯೆಗಳನ್ನು ನಿರ್ವಹಿಸಿದ ಅನಂತರ ಹುಡುಗನ ತಂದೆ ಆತ ಧರಿಸಿದ್ದ ಪೂತ್ಕೂಲಿಯನ್ನು ತೆಗೆದು ಅವನ್ನು ಕಾಲಿನಿಂದ ತಲೆಯವರೆಗೂ ಹೊದಿಸಿ ಗುಡಿಸಲಿಗೆ ಕರೆದೊಯ್ಯುತ್ತಾನೆ. ಅಲ್ಲಿ ಒಂದು ರಾತ್ರಿಯ ಮಟ್ಟಿಗೆ ಅವನನ್ನು ಹೊರಗಿರಿಸಿ ಅನಂತರ ಒಳಗೆ ಬರಮಾಡಿಕೊಳ್ಳಲಾಗುವುದು.

ಮೃತನು ಅವಿವಾಹಿತನಾಗಿದ್ದರೆ ಮೇಲೆ ಹೇಳಿರುವ ಕ್ರಮದಲ್ಲೇ ಸೋದರ ಮಾವನ ಮಗಳು ಪ್ರಧಾನ ದುಃಖಿಯ ಪಾತ್ರವನ್ನು ನಿರ್ವಹಿಸುತ್ತಾಳೆ. ಅಕ್ಕಿ ಬೆಲ್ಲ ಇತ್ಯಾದಿ ತುಂಬಿಸಿಟ್ಟ ಲೋಹದ ಪಾತ್ರೆಯನ್ನು ಶವದ ಮಗ್ಗುಲಲ್ಲಿಟ್ಟು ಶವದ ತಲೆಗೂದಲನ್ನು ಕತ್ತರಿಸುತ್ತಾಳೆ. ಅನಂತರ ಅವಳ ತಂದೆಯು ಅವಳಿಗೆ ಮೈತುಂಬ ಪೂತ್ಕೂಲಿಯನ್ನು ಹೊದಿಸಿ ಗುಡಿಸಲಿಗೆ ಕರೆದೊಯ್ಯುತ್ತಾನೆ. ಒಂದು ರಾತ್ರಿಯ ಮಟ್ಟಿಗೆ ಹೊರಗಡೆ ಕೂರಿಸಿ ಮರುದಿನ ಒಳಗೆ ಕರೆದುಕೊಳ್ಳುತ್ತಾರೆ.

ಬಂಜೆ ಸತ್ತಾಗ ಅವಳ ಗಂಡ ಶವದ ಕೈಗೆ ಬಿಲ್ಲು ಬಾಣಗಳನ್ನು ಸಮರ್ಪಿಸುತ್ತಾನೆ. ಹಾಗೆ ಮಾಡುವುದರಿಂದ ಮೃತಳು ಪರಲೋಕದಲ್ಲಾದರೂ ಮಗುವನ್ನು ಹೆತ್ತು ಸುಖವಾಗಿರುತ್ತಾಳೆಂದು ನಂಬಲಾಗುವುದು. ಕೊನೆಯಲ್ಲಿ ಮೃತಳ ತಲೆಗೂದಲನ್ನು ಕತ್ತರಿಸಿ ತನ್ನ ತಾಯಿಯ ಕೈಯಲ್ಲಿ ಕೊಡುತ್ತಾನೆ. ಬಂಜೆಯ ಶವಸಂಸ್ಕಾರದಲ್ಲಿ ಎರಡನೆಯ ಬಲಿಯನ್ನು ಹೆಣವು ಪೂರ್ತಿ ಸುಟ್ಟು ಭಸ್ಮವಾಗುವುದಕ್ಕೆ ಮೊದಲು ಕೊಡುವ ಪದ್ಧತಿ ಇದೆ. ಅನಂತರ ಅಲ್ಲಿ ನೆರೆದವರಿಗೆ ಅಕ್ಕಿ ಬೆಲ್ಲವನ್ನು ಹಂಚುವ ಕಾರ್ಯಕ್ರಮವಿರುತ್ತದೆ. ಸಂಸ್ಕಾರಕ್ರಿಯೆ ಮುಗಿಸಿ ಎಲ್ಲರೂ ಹಳ್ಳಿಗೆ ಹೋದ ಮೇಲೆ ವಿಧುರನು ನಾಲ್ಕಾರು ಜನ ಸಂಗಡಿಗರೊಂದಿಗೆ ಆ ರಾತ್ರಿಯನ್ನು ಅಲ್ಲೇ ಕಳೆದು ಮರುದಿನ ಬೆಳಿಗ್ಗೆ ಅನ್ನ ಬೇಯಿಸಿ ಉಂಡು ಹಳ್ಳಿಗೆ ಹಿಂತಿರುಗುತ್ತಾನೆ. ವಿಧುರನ ತಾಯಿ ಅಸ್ಥಿ ಮತ್ತು ತಲೆಗೂದಲನ್ನು ಗುಡಿಸಲಲ್ಲಿ ಸುರಕ್ಷಿತವಾದೆಡೆಯಲ್ಲಿ ಇಟ್ಟಿರುತ್ತಾಳೆ. ಅವು ಮುಂದಿನ ಉತ್ತರಕ್ರಿಯೆ ನಡೆಯುವವರೆಗೂ ಅಲ್ಲಿರುತ್ತವೆ.

ಕುಷ್ಠರೋಗಿ ಸತ್ತಾಗ ಮಣ್ಣು ಮಾಡುತ್ತಾರೆ. ಆಗ ಸಹ ಎಮ್ಮೆಗಳನ್ನು ಬಲಿ ಕೊಡಲಾಗುವುದು. 'ಪೀಕಿ' ಮತ್ತು 'ಕೆನ್ನಾ' ಕುಲಕ್ಕೆ ಸೇರಿದ ಜನರು ಮೃತನ ಸಂಸ್ಕಾರಕ್ರಿಯೆಗಳನ್ನು ನೆರವೇರಿಸಿ ಕೊಡುತ್ತಾರೆ. ಸಮಾಧಿ ಮಾಡುವಾಗ ಮೃತನ ಸದ್ಗುಣ ಸಂಪನ್ನತೆಗಳನ್ನು ಕುರಿತು ಹಾಡಲಾಗುವುದು.

'ಬರಕೇಡು' ಉತ್ತರಕ್ರಿಯೆ 'ಹಸಕೇಡು' ಸಂಸ್ಕಾರಕ್ಕಿಂತ ವಿಸ್ತಾರವಾದ ವಿಧಿ ನಿಯಮಗಳನ್ನು ಹೊಂದಿದೆ. 'ಹಸಕೇಡು' ಸಂಸ್ಕಾರದ ಸಂದರ್ಭದಲ್ಲಿ ಸಂರಕ್ಷಿಸಿಟ್ಟಿದ್ದ ಮೃತನ ಅಸ್ಥಿ ಮತ್ತು ತಲೆಗೂದಲಿಗೆ ನಡೆಸುವ ಸಂಸ್ಕಾರವನ್ನು 'ಬರಕೇಡು ಸಂಸ್ಕಾರ' ಎಂದು ಕರೆಯುತ್ತಾರೆ. ಅಂದು ಮೃತನ ಸಂಬಂಧಿಗಳಿಗೆ ವಿಶೇಷ ಆಹ್ವಾನವಿರುತ್ತದೆ. ಉಳಿಕೆಗಳನ್ನು ಸುಡುಗಾಡಿಗೆ ಕೊಂಡೊಯ್ಯುವ ಮೊದಲು ಅವಕ್ಕೆ ಬೆಣ್ಣೆ ಲೇಪಿಸುವುದು ಸಂಪ್ರದಾಯ. ಅವುಗಳ ಜೊತೆಗೆ ಸಂಬಂಧಿಕರು ನೀಡುವ ಕೆಲವು ಬೆಲೆಬಾಳುವ ವಸ್ತುಗಳಿಗೂ ಬೆಣ್ಣೆ ಲೇಪಿಸಲಾಗುವುದು. ಸುಡುಗಾಡಿನ ಜಾಗು ಭೂಮಿಯಲ್ಲಿ ಬಲಿ ಕೊಡಲಿರುವ ಎಮ್ಮೆಗಳ ಕೋಡುಗಳಿಗೂ ಬೆಣ್ಣೆ ಸವರಿ ಕೊರಳಿಗೆ ಗಂಟೆ ಕಟ್ಟಿ ಶೃಂಗರಿಸಲಾಗುವುದು.

ಎಲ್ಲ ಸಿದ್ಧತೆಗಳೊಂದಿಗೆ 'ಬರಕೇಡು' ನಡೆಯುವ ಸ್ಥಳಕ್ಕೆ ಬಂದು ಹಸಕೇಡು ಸಂಸ್ಕಾರದಲ್ಲಿ ನಡೆಸಿದಂತೆ ಎಲ್ಲ ವಿಧಿಗಳನ್ನೂ ಕ್ರಮವಾಗಿ ನಡೆಸಿ ಎಮ್ಮೆಯನ್ನು ಕೊಂದು ಅದರ ರಕ್ತವನ್ನು ಅಸ್ಥಿಯ ಮೇಲೆ ಸಿಂಪಡಿಸುತ್ತಾರೆ. ಹಾಗೆ ಎಮ್ಮೆ ರಕ್ತವನ್ನು ಸಿಂಪಡಿಸುವಾಗ ಪುರುಷರು ಕವಡೆ ಚಿಪ್ಪುಗಳ ಸರದಿಂದ ಅಲಂಕೃತವಾದ ಉದ್ದನೆಯ 'ತದ್ರಿ' ಕಂಬವನ್ನು ಹಿಡಿದು ನರ್ತನ ಮಾಡುತ್ತಾರೆ. ಹಾಡು ಮತ್ತು ನರ್ತನ ಜೊತೆ ಜೊತೆಯಲ್ಲೇ ಸಾಗುತ್ತವೆ. ಆ ಸಂದರ್ಭದಲ್ಲಿ ಸತ್ತವನ ಕುಲದವರು ಹಾಡದೆ ಮೌನವಾಗಿ ನರ್ತಿಸುವರು.

ಮಾರನೆಯ ರಾತ್ರಿ ಕಲ್ಲುಕಟ್ಟಣೆಯ ಒಂದು ವೃತ್ತವನ್ನು ನಿರ್ಮಿಸಿ ಅದರಲ್ಲಿ ಅಸ್ಥಿ, ತಲೆಗೂದಲು, ಮೃತನು ಬಳಸುತ್ತಿದ್ದ ಪಾತ್ರೆ ಪರಟೆಗಳು, ಬಂಧುಗಳು ನೀಡಿದ ಬೆಲೆಬಾಳುವ ಪದಾರ್ಥಗಳನ್ನಿಟ್ಟು ಸುಡುತ್ತಾರೆ. ಇಷ್ಟಾದಮೇಲೆ ಆ ಕಲ್ಲುಕಟ್ಟೆಯ ವೃತ್ತದ ಮೇಲೆ ಚಪ್ಪಡಿ ಕಲ್ಲೊಂದನ್ನು ಹಾಸುತ್ತಾರೆ. ಹೊಸ ಮಡಕೆಯೊಂದನ್ನು ಆ ಕಲ್ಲಿಗೆ ಘಟ್ಟಿಸಿ ಒಡೆಯಲಾಗುತ್ತದೆ. ಈ ಕ್ರಿಯೆಯೊಂದಿಗೆ ಅಸ್ಥಿ ಸುಡುವ ಕಾರ್ಯ ಮುಗಿಯುತ್ತದೆ. ಆ ಕಾರ್ಯದಲ್ಲಿ ಪಾಲ್ಗೊಂಡವರು ಹಿಂತಿರುಗಿ ನೋಡದೆ ಅಲ್ಲಿಂದ ನಿರ್ಗಮಿಸಿ ಮಾರ್ಗದಲ್ಲಿ ನದಿ ನೀರಿನಲ್ಲಿ ಮುಳುಗೆದ್ದು ಹಳ್ಳಿಗಳಿಗೆ ಹಿಂತಿರುಗುತ್ತಾರೆ. ಮತ್ತೆ ಮುಂದಿನ ಹನ್ನೆರಡು ದಿನ ಅಸ್ಥಿ ಸುಡುವ ಕ್ರಿಯೆಯಲ್ಲಿ ಪಾಲ್ಗೊಂಡವರು ಮೃತನ ಗುಡಿಸಿಲಿನ ಆವರಣವನ್ನು ಶುದ್ಧಗೊಳಿಸಿ ತಾವೂ ಪರಿಶುದ್ಧರಾಗುತ್ತಾರೆ.

ಹೀಗೆ ತೊದವರು ಸಾವಿನ ಸಂಬಂಧವಾಗಿ ಅನುಸರಿಸುವ ಸಂಪ್ರದಾಯಗಳು ವಿಶಿಷ್ಟವಾಗಿವೆ. ಇವುಗಳಲ್ಲಿ ಕೆಲವು ಸಂಪ್ರದಾಯಗಳು ಸರಳ ಸ್ವರೂಪದವಾಗಿದ್ದರೂ ಕೆಲವು ಸಂಕೀರ್ಣವಾಗಿದ್ದು ತೊದವ ಸಂಸ್ಕೃತಿಯ ಪ್ರತ್ಯೇಕತೆಯನ್ನು ಸಾರುತ್ತವೆ. ಈ ಸಂಪ್ರದಾಯಗಳು ತೊದವ ಸಮಾಜದಲ್ಲಿ ಪುರುಷ ಮತ್ತು ಸ್ತ್ರೀಯರಿಗೆ ಗೊತ್ತಾಗಿರುವ ಸ್ಥಾನಮಾನಗಳು, ತೊದವರ ಸಹಕಾರ ಜೀವನ, ಅವರ ಪೂರ್ಣ ಸಾಮಾಜಿಕ ಪ್ರತಿಷ್ಠೆ, ಅವರ ಜೀವನದಲ್ಲಿ ಪರಂಪರಾಗತ ಮೌಲ್ಯಗಳಿಗಿರುವ ಸ್ಥಾನ, ವೈವಾಹಿಕ ಜೀವನ ಮತ್ತು ಇತರ ಧರ್ಮ ಸಂಸ್ಕೃತಿ ಸಮಾಜಗಳ ಪ್ರಭಾವ ಎಷ್ಟರಮಟ್ಟಿಗಾಗಿದೆ ಎಂಬುದನ್ನು ಪ್ರಕಟಿಸುತ್ತವೆ.

ಪುರುಷ ಮತ್ತು ಸ್ತ್ರೀಯರಿಗೆ ಭಿನ್ನ ಭಿನ್ನ ರೀತಿಯ ಸಂಸ್ಕಾರ ವಿಧಿಗಳನ್ನು ಅನುಸರಿಸುವುದರ ಮೂಲಕ ತೊದವರು ತಮ್ಮ ಸಂಸ್ಕೃತಿಯ ಪ್ರತ್ಯೇಕತೆಯನ್ನು ಉಳಿಸಿಕೊಂಡಿದ್ದಾರೆ. ಮೃತರು ಸ್ತ್ರೀಯರಾಗಿದ್ದರೆ ಅವರ ಸಂಸ್ಕಾರ ವಿಧಿಗಳನ್ನು ಎಮ್ಮೆ ಕೊಟ್ಟಿಗೆಯಲ್ಲಿ ನಿರ್ವಹಿಸದೆ ಪ್ರತ್ಯೇಕ ಗುಡಿಸಲಿನಲ್ಲಿ ನಡೆಸುವ ಪದ್ಧತಿ ತೊದವ ಸಮಾಜ ಸ್ತ್ರೀಯರ ಬಗ್ಗೆ ತಾಳಿರುವ ಧೋರಣೆ ಎಂಥದೆಂಬುದನ್ನು ತೋರಿಸಿಕೊಡುತ್ತವೆ. ಎಮ್ಮೆಗಳನ್ನು ಆರಾಧಿಸುವುದರ ಮೂಲಕ ತೊದವರು ತಮ್ಮ ಧಾರ್ಮಿಕ ಜೀವನದಲ್ಲಿ ಅವಕ್ಕೆ ವಿಶೇಷ ಮಹತ್ತ್ವ ನೀಡುವುದರಿಂದ ತೊದವ ಸ್ತ್ರೀಯರಿಗೆ ಎಮ್ಮೆ ಕೊಟ್ಟಿಗೆಗಳನ್ನು ಪ್ರವೇಶಿಸಲು ಅವಕಾಶವಿಲ್ಲ (ಎಮ್ಮೆಗಳ ಪಾಲನಪೋಷಣೆ, ಹಾಲು ಕರೆಯುವುದು ಮುಂತಾಗಿ ಎಲ್ಲ ಜವಾಬ್ದಾರಿಯೂ ಪುರುಷನದೇ). ತೊದವ ಸಮಾಜದಲ್ಲಿ ಸ್ತ್ರೀ ಪುರುಷನಿಗಿಂತ ಕೀಳಾದ್ದರಿಂದ ಅವಳಿಗೆ ಆ ನಿರ್ಬಂಧ (ಈ ನಡವಳಿಕೆ ಬ್ರಾಹ್ಮಣ ಪುರುಷರು ತಮ್ಮ ಸ್ತ್ರೀಯರನ್ನು ಶೂದ್ರರೆಂದು ಪರಿಗಣಿಸಿರುವುದನ್ನು ನೆನೆಪಿಗೆ ತರುತ್ತದೆ). ಪುರುಷರು ಸ್ತ್ರೀಯರೊಂದಿಗೆ ಬೆರೆಯದೆ ಪ್ರತ್ಯೇಕ ಬಣ ರಚಿಸಿಕೊಂಡು ಮೃತನಿಗೆ ಸಂತಾಪ ಸೂಚಿಸುವ ಕ್ರಮದಲ್ಲೂ ಸ್ತ್ರೀಯರನ್ನು ಕೀಳಾಗಿ ನಡೆಸಿಕೊಳ್ಳುವುದು ಕಂಡುಬರುತ್ತದೆ.

ತೊದವರಿಗೆ ಸಾವಿನ ಬಗೆಗೆ ಭಯಭೀತವಾದ ಕಲ್ಪನೆಯಿರುವುದರಿಂದ ಜನ್ಮಾಂತರದಲ್ಲಿ ಪ್ರಬಲ ವಿಶ್ವಾಸವಿರುವುದರಿಂದ ಶವಕ್ಕೆ ಶೃಂಗಾರ ಮಾಡುವುದರಲ್ಲಿ ಹೆಚ್ಚು ಆಸ್ಥೆ ತೋರುತ್ತಾರೆ. ಮೃತನ ಕುಟುಂಬದವರು ಶವದ ಶೃಂಗಾರದಲ್ಲಿ ಹೆಚ್ಚು ಆಡಂಬರವನ್ನು ಪ್ರದರ್ಶಿಸುವುದು ಸಮಾಜದವರ ಕಣ್ಣಲ್ಲಿ ದೊಡ್ಡವರಾಗಿ ಕಾಣಲು ಇರಬಹುದು. ಇದು ಪರೋಕ್ಷವಾಗಿ ಅವರ ಪೊಳ್ಳು ಪ್ರತಿಷ್ಠೆಯನ್ನು ಬಯಲಿಗೆಳೆಯುತ್ತದೆ.

ತೊದವರು ತಮ್ಮ ಪೊಳ್ಳುಪ್ರತಿಷ್ಠೆಯನ್ನು ಪ್ರದರ್ಶಿಸಲು ಬಳಸಿಕೊಳ್ಳುವ ಇನ್ನೊಂದು ಸಂದರ್ಭವೆಂದರೆ ಮೃತರ ಹೆಸರಿನಲ್ಲಿ ಎಮ್ಮೆಗಳನ್ನು ಬಲಿಕೊಡುವ ಸಂದರ್ಭ. ಅವರ ಪ್ರಕಾರ ಅದು ವಾಸ್ತವವಾಗಿ 'ಬಲಿ' ಅಲ್ಲ. ಮೃತನ ರಕ್ಷಣೆಗಾಗಿ, ಅವನ ಸಂಗಡ ಎಮ್ಮೆಗಳನ್ನು ಪರಲೋಕಕ್ಕೆ ಕಳಿಸುವ ಕ್ರಿಯೆ ಅದು. ಮೃತನು ಬದುಕಿದ್ದಾಗ ಸಮಾಜದಲ್ಲಿ ಅವನು ಪಡೆದಿದ್ದ ಸ್ಥಾನಕ್ಕನುಗುಣವಾಗಿ ಎಮ್ಮೆಗಳನ್ನು ಬಲಿ ಕೊಡಲಾಗುವುದು. ಆತ ಸಮಾಜದ ಗಣ್ಯನಾಗಿದ್ದರೆ ಹೆಚ್ಚು ಸಂಖ್ಯೆಯ ಎಮ್ಮೆಗಳನ್ನೂ ಅಗಣ್ಯನಾಗಿದ್ದರೆ ಒಂದೋ ಎರಡೋ ಎಮ್ಮೆಗಳನ್ನೂ ಬಲಿ ಕೊಡುವುದು ಸಂಪ್ರದಾಯ. ಇದು ಬಲಿ ಕೊಡುವವರ ಸ್ಥಿತಿಗತಿಗಳನ್ನವಲಂಬಿಸಿರುವುದರಿಂದ ಅವರ ಆರ್ಥಿಕ ಜೀವನದ ಮೇಲೂ ಬೆಳಕು ಚೆಲ್ಲುತ್ತದೆ.

ತೊದವರಿಗೆ ಸಾಂಘಿಕ ಜೀವನದಲ್ಲಿ ಬಲವಾದ ನಂಬಿಕೆಯಿದೆ. ಕಷ್ಟ ಸುಖಗಳಲ್ಲಿ ಒಬ್ಬರಿಗೆ ಮತ್ತೊಬ್ಬರು ಆಗುತ್ತಾರೆ. ಹಸಕೇಡು ಸಂಸ್ಕಾರದ ಸಂದರ್ಭದಲ್ಲಿ ಮೃತನ ಬಂಧುಗಳು ಕೆಲಸ ಕಾರ್ಯಗಳನ್ನು ವ್ಯವಸ್ಥಿತವಾಗಿ ಹಂಚಿಕೊಂಡು ಒಟ್ಟಾಗಿ ನಿರ್ವಹಿಸುವುದರಲ್ಲಿ ಅವರ ಸಹಕಾರ ಜೀವನದ ಪರಿಚಯವಾಗುತ್ತದೆ. ಸಂಸ್ಕಾರದ ಖರ್ಚು ವೆಚ್ಚಗಳನ್ನು ಮೃತನ ಕುಟುಂಬದವರು ದಿಢೀರನೆ ಭರಿಸುವುದು ಕಷ್ಟ ಎನ್ನುವ ಹಿನ್ನೆಲೆಯಲ್ಲಿ ಬಂಧುವರ್ಗದವರು ಯಥಾನುಶಕ್ತಿ ಸಹಕರಿಸುವ ಸೌಜನ್ಯ ಸಂಸ್ಕೃತಿ ಅನುಕರಣೀಯವಾದುದು.

ವಿಶೇಷ ಸಂದರ್ಭಗಳನ್ನು ಬಿಟ್ಟರೆ ಉಳಿದಂತೆ ದಹನಕ್ರಿಯೆಯೇ ಇವರಲ್ಲಿ ಹೆಚ್ಚು ಪ್ರಚಲಿತವಿದೆ. ಮೂಲತಃ ಅರಣ್ಯವಾಸಿಗಳಾದ ಇವರಿಗೆ ಸೌದೆಯ ಅಭಾವದ ಪರಿಚಯವಿಲ್ಲವಾದ್ದರಿಂದ ಈ ಕ್ರಿಯೆ ಹೆಚ್ಚು ರೂಢಿಯಾಗಲು ಕಾರಣವಿರಬಹುದು. ಆರ್ಯ ಸಂಸ್ಕೃತಿಯ ಪ್ರಭಾವದಿಂದಲೂ ಈ ಕ್ರಿಯೆಗೆ ಹೆಚ್ಚು ಮನ್ನಣೆ ದೊರಕಿರಬಹುದು.

ಇಂದು ನಾಗರಿಕತೆ ಎಷ್ಟೇ ಕ್ಷಿಪ್ರವಾಗಿ ಹಳ್ಳಿಗಾಡನ್ನು ವ್ಯಾಪಿಸುತ್ತಿರಲಿ, ಕೆಲವು ವಿಶೇಷ ಸಂದರ್ಭಗಳಲ್ಲಿ ಜನತೆ ಸಂಪ್ರದಾಯಕ್ಕೆ ಜೋತು ಬೀಳುತ್ತಾರೆನ್ನುವುದಕ್ಕೆ ತೊದವರು ಶವಕ್ಕೆ ಅಗ್ನಿಸ್ಪರ್ಶ ಮಾಡುವಾಗ ಎರಡು ಒಣ ಸೌದೆಗಳನ್ನು ಉಜ್ಜಿ ಬೆಂಕಿ ಉತ್ಪಾದಿಸುವುದು ಒಂದು ಉತ್ತಮ ನಿದರ್ಶನ.

ಮೃತರು ಸ್ತ್ರೀಯರಾಗಿದ್ದರೆ ಮೃತಳ 'ಪೂತ್ಕೂಲಿ'ಗೆ 'ತಿವಿರಿ' ಎಂಬ ಕುರುಚಲು ಗಿಡದ ಎಲೆಯನ್ನು ಕಟ್ಟುವುದು, ತೋಳಿನಮೇಲೆ ಕವಡೆ ಚಿಪ್ಪಿನ ಸರ ಕಟ್ಟುವುದು,

ಮತ್ತು ಕೊನೆಯಲ್ಲಿ ಪ್ರಧಾನ ದುಃಖಿಯು ಶವಕ್ಕೆ ಅಗ್ನಿಸ್ಪರ್ಶ ಮಾಡುವುದು – ಇವೇ ಮುಂತಾದ ಕ್ರಿಯೆಗಳು ತೋಡವರ ವಿಶಿಷ್ಟ ಸಂಸ್ಕೃತಿಯ ಪರಿಚಯ ಮಾಡಿಕೊಡುತ್ತವೆ.

ಮೃತಳು ಕನ್ಯೆಯಾಗಿದ್ದರೆ ಸೋದರ ಮಾವನ ಮಗನ ಹಸ್ತದಿಂದ ಶವದ ಕೈಗೆ ಬಿಲ್ಲು ಬಾಣಗಳನ್ನು ಕೊಡಿಸುವ ಸಂಪ್ರದಾಯ ತೋಡವರ ಬಂಧುತ್ವ ಪದ್ಧತಿಯ ಮೇಲೆ ಬೆಳಕು ಚೆಲ್ಲುತ್ತವೆ. ಸೋದರಿಕೆ ಸಂಬಂಧಗಳಿಗೆ ಅವರು ಹೆಚ್ಚು ಮಹತ್ತ್ವ ಕೊಡುತ್ತಾರೆಂಬುದು ಇದರಿಂದ ಗೊತ್ತಾಗುತ್ತದೆ.

ಅಸ್ಥಿ ತೇಲಿಬಿಡುವ ವೈದಿಕ ಸಂಪ್ರದಾಯಕ್ಕೆ ಸಮಾನವೆನಿಸುವಂತೆ ತೋಡವರಲ್ಲಿ ಅಸ್ಥಿ ಸುಡುವ ಕ್ರಿಯೆ ಅನುಷ್ಠಾನದಲ್ಲಿದೆ. ಆ ಸಂದರ್ಭದಲ್ಲಿ ಮೃತನ ಅಸ್ಥಿಯೊಂದಿಗೆ ಅವನ ತರಿಗೂನಲು, ಬದುಕಿದ್ದಾಗ ಆತ ಬಳಸುತ್ತಿದ್ದ ಸಾಮಗ್ರಿಗಳು, ಹಸಕೇಡು ಸಂವರ್ಭದಲ್ಲಿ ಬಂಧುಗಳು ನೀಡಿದ ಬೆಲೆಬಾಳುವ ವಸ್ತುಗಳನ್ನೂ ಸುಡುವುದು ಪದ್ಧತಿ. ಇಲ್ಲಿ ಕೂಡ ಆರ್ಯ ಸಂಸ್ಕೃತಿಯ ಪ್ರಭಾವನನ್ನು ಗುರುತಿಸಬಹುದು.

ಅಡಿ ಟಿಪ್ಪಣಿಗಳು

1. ಪರಿಚಯಕ್ಕೆ ನೋಡಿ : ಅಂಬಳಿಕೆ ಹಿರಿಯಣ್ಣ, ತೋಡವರು, ಐ ಬಿ ಎಚ್ ಪ್ರಕಾಶನ, ಬೆಂಗಳೂರು, 1982
2. ಎಮ್ಮೆಕೊಟ್ಟಿಗೆ ಮತ್ತು ಹೈನಿನ ಮನೆಯ ಆಚರಣೆಗಳೇ ತೋಡವ ಧರ್ಮದ ಪ್ರಮುಖ ಅಂಶಗಳು. ಎಮ್ಮೆ ಕೊಟ್ಟಿಗೆಗಳು ಅವರಿಗೆ ದೇವಮಂದಿರಗಳು. ಎಮ್ಮೆಯ ಹಾಲು ಹೈನು ಪವಿತ್ರ ಪದಾರ್ಥಗಳು.
3. ಉದ್ದನೆಯ ಸಡಿಲವಾದ ದಗಲೆ ಅಥವಾ ಮೇಲಂಗಿ.
4. ವಿವಾಹಿತ ಸ್ತ್ರೀ ಗರ್ಭಿಣಿಯಾದಾಗ ಮುಂದೆ ಜನಿಸುವ ಮಗುವಿನ ಪಿತೃತ್ವವನ್ನು ನಿರ್ಧರಿಸಲು ಅವಳ ಗಂಡಂದಿರಲ್ಲಿ, ಯಾರಾವರೊಬ್ಬರು ಅವಳಿಗೆ ಬಿಲ್ಲು ಬಾಣಗಳನ್ನು ಸಮರ್ಪಿಸಬೇಕು. ಈ ಸಮಾರಂಭವನ್ನು 'ಪುರುಸುತ್ಪಿಮಿ' ಸಮಾರಂಭ ಎಂದು ಕರೆಯುತ್ತಾರೆ. ನೋಡಿ : ಪೂರ್ವೋಕ್ತ ಪು. 29

ವಿ. ಎಸ್. ಶೇಷಗಿರಿರಾವ್

ಪ್ರಾಚೀನ ಪಾಶ್ಚಾತ್ಯ ತಾತ್ವಿಕ ಚಿಂತನೆ- ಒಂದು ಸ್ಥೂಲ ವಿವೇಚನೆ

(ಸಂಚಿಕೆ ೧ ರಿಂದ ಮುಂದುವರಿದುದು)

೧

ಸೋಫಿಸ್ಟರು

ಸೋಫಿಸ್ಟರು ಪುರಾತನ ಗ್ರೀಕ್ ಚಿಂತನೆಯ ಎರಡನೆಯ ಘಟ್ಟವನ್ನು ಪ್ರತಿನಿಧಿಸುತ್ತಾರೆ. 'ಸೋಫಿಸ್ಟ್' ಎಂದರೆ 'ಅಲೆದಾಡುವ ಬೋಧಕ' ಎಂದು ಅರ್ಥ. ಇವರು ದೇಶ ಸಂಚಾರ ಕೈಗೊಂಡು ಹೋದೆಡೆಯಲ್ಲೆಲ್ಲಾ ಜನರಿಗೆ ವಾಕ್ಚಾತುರ್ಯದಲ್ಲಿ, ವಾದ ವೈಖರಿಯಲ್ಲಿ, ತರ್ಕದಲ್ಲಿ, ವ್ಯಾಕರಣ ಅಲಂಕಾರ ಶಾಸ್ತ್ರಗಳಲ್ಲಿ, ಸೂಕ್ಷ್ಮಬುದ್ಧಿಯನ್ನು ಮೈಗೂಡಿಸಿಕೊಳ್ಳುವಿಕೆಯಲ್ಲಿ ಬೋಧನೆಯನ್ನೂ, ತರಬೇತಿಯನ್ನೂ ನೀಡುತ್ತಿದ್ದರು. ಇದೇ ಅವರ ವೃತ್ತಿಯಾಗಿತ್ತು. ಇದಕ್ಕಾಗಿ ಅವರು ವೇತನವನ್ನೂ, ಶುಲ್ಕವನ್ನೂ ತೆಗೆದುಕೊಳ್ಳುತ್ತಿದ್ದರು. ರಾಜಕಾರಣದಲ್ಲಿ, ಭಾಷಾ ಕೌಶಲದಲ್ಲಿ ಯುವಜನರಿಗೆ ತರಬೇತಿ ಕೊಡುವುದು ಅವರ ವಿಶಿಷ್ಟ ಕಾರ್ಯವಾಗಿತ್ತು. ಯುಕ್ತಿಯಿಂದಲೋ, ಕುಯುಕ್ತಿಯಿಂದಲೋ, ಒಟ್ಟಿನಲ್ಲಿ ಎದುರಾಳಿಯನ್ನು ವಾದದಲ್ಲಿ ಸೋಲಿಸುವುದು ಅವರ ಗುರಿಯಾಗಿತ್ತು. ತರ್ಕ ಕೌಶಲದಿಂದ ಕಪ್ಪಾದುದನ್ನು ಬೆಳ್ಳಗಿದೆಯೆಂದೂ, ಬೆಳ್ಳಗಿರುವುದನ್ನು ಕಪ್ಪಾಗಿದೆಯೆಂದೂ, ಅಸತ್ಯವನ್ನು ಸತ್ಯವೆಂದೂ, ಸತ್ಯವನ್ನು ಅಸತ್ಯವೆಂದೂ ಸಿದ್ಧಮಾಡಿ ತೋರಿಸುವುದರಲ್ಲಿ ಅವರು ಅಗ್ರಗಣ್ಯರು : ಅವರ ಪ್ರಕಾರ ಕಾರ್ಯಸಿದ್ಧಿಯಾಗುವುದು ಮುಖ್ಯ ; ಅದು ನ್ಯಾಯದಿಂದಲೋ ಅನ್ಯಾಯದಿಂದಲೋ ಎಂಬುದು ಮುಖ್ಯವಲ್ಲ ! ಯಾವುದೇ ವಿಷಯಕ್ಕೆ ಸಾರ್ವಜನಿಕರಿಂದ ಬೇಡಿಕೆಯಿದ್ದರೆ ಅದನ್ನು ಆ ಕ್ಷಣದಲ್ಲೇ ಬೋಧಿಸುವ ಚಾಣಾಕ್ಷ ಸಾಮರ್ಥ್ಯವಿತ್ತು ಅವರಲ್ಲಿ. ಅವರು ಸಂಪ್ರದಾಯ ಪದ್ಧತಿಗಳನ್ನು ಕಟುವಾಗಿ ಟೀಕಿಸಿ ಸಂಪೂರ್ಣವಾಗಿ ನಿರ್ಮೂಲನ ಮಾಡಲು ತೊಡಗಿದುದರಿಂದ ಕೆಟ್ಟ ಅರ್ಥದಲ್ಲಿ 'ಸೋಫಿಸ್ಟರು' ಎಂದು ಕರೆಸಿಕೊಂಡರು. ಇವರನ್ನೂ ಇವರ ಬೋಧನೆಯನ್ನೂ ನಡೆವಳಿಕೆಯನ್ನೂ ಕುರಿತು ವಿವರವಾದ ವಿವರಣೆಯನ್ನು ಪ್ಲೇಟೋ

ತನ್ನ ಸಂವಾದಗಳಾದ 'ರಿಪಬ್ಲಿಕ್', 'ಪ್ರೊಟೊಗೊರಾಸ್', 'ಗಾರ್ಜಿಯಾಸ್', 'ಸೋಫಿಸ್ಟ್' ಮುಂತಾದವುಗಳಲ್ಲಿ ಕೊಟ್ಟಿದ್ದಾನೆ.

ಸೋಫಿಸ್ಟರು ವ್ಯವಸ್ಥಾಬದ್ಧವಾದ ಯಾವುದೇ ತಾತ್ವಿಕ ಚಿಂತನೆಯನ್ನು ರಚಿಸಲಿಲ್ಲ. ಅವರದು ಆಯಾಯ ಸಂದರ್ಭಕ್ಕೆ ಬೇಕಾದ, ತತ್‌ಕ್ಷಣ ಫಲ ಕೊಡುವ 'ವ್ಯಕ್ತಿಗತ' ಬೋಧನೆ. ಅವರದು ಒಂದು ಬಗೆಯ ಸಡಿಲವಾದ, ಆಧಾರರಹಿತವಾದ ವ್ಯಕ್ತಿನಿಷ್ಠ ಚಿಂತನೆ. ಅವರು ಸಾರ್ವತ್ರಿಕ ಸತ್ಯ, ನ್ಯಾಯ, ನೀತಿ, ಧರ್ಮ, ಶ್ರೇಯ ಸೌಂದರ್ಯಗಳನ್ನು ಪ್ರತಿಭಟಿಸಿದರು ; ಅವುಗಳ ಅಸ್ತಿತ್ವವನ್ನೂ ಅಲ್ಲಗಳೆದರು. ಅವರ ಪ್ರಕಾರ ಸಾರ್ವತ್ರಿಕವೂ, ಸರ್ವಸಮ್ಮತವೂ ಆದ ಸತ್ಯವೆಂಬುದಿಲ್ಲ, ಶ್ರೇಯವೆಂಬುದಿಲ್ಲ. ವ್ಯಕ್ತಿ ಯಾವುದನ್ನು ಸತ್ಯವೆಂದು ಕರೆಯಲು ಇಷ್ಟಪಡುತ್ತಾನೋ ಅದೇ ಸತ್ಯ. ಯಾವುದು ಒಳಿತು ಎಂದು ಅನಿಸಿಗೆಸಿಸುವುದೋ ಅದೇ ಒಳಿತು. "ಪ್ರಪಂಚದಲ್ಲಿ ಎಲ್ಲಾ ವಿಷಯಗಳಿಗೂ ಮಾನವನೇ ಒರೆಗಲ್ಲು ; ಸತ್ಯಕ್ಕೆ ಪ್ರತಿಯೊಬ್ಬ ವ್ಯಕ್ತಿಯೂ ಒರೆಗಲ್ಲು ; ನನಗೆ ಸತ್ಯವೆಂದು ತೋರಿದ್ದು ನನಗೆ ಸತ್ಯ, ನಿನಗೆ ಸತ್ಯವೆಂದು ತೋರಿದ್ದು ನಿನಗೆ ಸತ್ಯ ; ಇದಕಾರಣ ಲೋಕದಲ್ಲಿ ತಪ್ಪೆನ್ನುವುದು ಇಲ್ಲವೇ ಇಲ್ಲ. ಒಟ್ಟಿನಲ್ಲಿ ಜ್ಞಾನವೆನ್ನುವುದು ಇಲ್ಲ ; ಇದ್ದರೂ ಅದನ್ನು ತಿಳಿಯುವುದು ಸಾಧ್ಯವಿಲ್ಲ ; ಒಂದು ಪಕ್ಷ ತಿಳಿಯುವುದು ಸಾಧ್ಯವಾದರೂ ಅದನ್ನು ಮತ್ತೊಬ್ಬರಿಗೆ ಬೋಧಿಸುವುದು ಸಾಧ್ಯವಿಲ್ಲ" ಎಂದು ಅವರು ಸಾರಿದರು. ಹಾಗೆಯೇ "ನೀತಿ ಎಂಬುದಕ್ಕೆ ಒಂದು ನೆಲೆಯಿಲ್ಲ ; ರಾಷ್ಟ್ರ ಶಾಸನಗಳು ಪದ್ಧತಿಯ ಮೇಲೂ, ಪಶುಬಲದ ಮೇಲೂ ನಿಂತಿವೆ. ನ್ಯಾಯ ಧರ್ಮ ಇವೊಂದೂ ಇಲ್ಲ. ನನ್ನ ಮನಸ್ಸಿಗೆ ತೋರಿದ್ದೇ ನ್ಯಾಯ ; ನನ್ನ ಆಚರಣೆಯೇ ಸದಾಚಾರ", ಎಂದೂ ಅವರು ಬೋಧಿಸಿದರು. ನ್ಯಾಯದ ಮಾತಿಗೆ ಒಳಗಾಗುವವನು ಕೆಲಸಕ್ಕೆ ಬಾರದ ಶುದ್ಧ ಮೂರ್ಖ ! ಪಿತೂರಿ, ಒಳಸಂಚುಗಳಲ್ಲಿ ಜಯಶೀಲನಾದವನೇ 'ಬುದ್ಧಿವಂತ'! ಎಂದು ತಮ್ಮ ಮನಮೋಹಕ ವಾದ ವೈಖರಿಯ ಮೂಲಕ ಜನರನ್ನು ಮರುಳುಮಾಡಿದರು. ಇವರ ಬೋಧನೆಯ ಫಲವಾಗಿ ಗ್ರೀಸಿನಲ್ಲಿ ಎಲ್ಲೆಲ್ಲಿಯೂ ಸ್ವಾರ್ಥಪರತೆ, ಲೋಭಿತನ, ಕರ್ತವ್ಯಭ್ರಷ್ಟತೆ, ಬಡಾಯಿ, ಅಹಂಕಾರ, ಅಕಾಡಭೂತಿತನ, ದಗ, ಮೋಸ, ನಾಸ್ತಿಕತೆ, ಸಂಶಯ ಭಾವನೆಗಳು ತಾಂಡವಾಡತೊಡಗಿದವು. ನ್ಯಾಯ, ಸತ್ಯ, ನೀತಿ, ಧರ್ಮಗಳನ್ನು ಗಾಳಿಗೆ ತೂರಲಾಯಿತು. ದೇವರು, ಧರ್ಮಗಳು ಹಾಸ್ಯಾಸ್ಪದ ಸಂಗತಿಗಳಾದವು. ಒಟ್ಟಿನಲ್ಲಿ, ಎಲ್ಲ ವಿಷಯಗಳಲ್ಲಿಯೂ ಮಾನವನೇ ತನ್ನ ಮಾನದಂಡ : ಎಲ್ಲವೂ ವ್ಯಕ್ತಿನಿಷ್ಠ ; ವಸ್ತುನಿಷ್ಠವಾದುದು ಪ್ರಪಂಚದಲ್ಲಿ ಯಾವುದೂ ಇಲ್ಲ ಎಂಬ ಮನೋಭಾವ ಎಲ್ಲೆಲ್ಲೂ ತಲೆದೋರಿತು.

೨

ಪ್ರೊಟಾಗೊರಾಸ್ (ಸುಮಾರು ಕ್ರಿ. ಪೂ. 480)

ಪ್ರೊಟಾಗೊರಾಸ್, ಸೋಫಿಸ್ಟರಲ್ಲಿ ಪ್ರಸಿದ್ಧನಾದವನು ; ಇದುವರೆಗೂ ತಿಳಿದಿರುವ ಸೋಫಿಸ್ಟರಲ್ಲಿ ಮೊದಲಿಗನೂ ಆಗಿದ್ದಾನೆ. "ಪ್ರಪಂಚದಲ್ಲಿ ಎಲ್ಲಾ ವಿಷಯಗಳಿಗೂ

ಮಾನವನೇ ಒರೆಗಲ್ಲು, ಮಾನದಂಡ" (Man is the measure of all things) ಎಂಬುದು ಅವನ ಪ್ರಸಿದ್ಧ ಹೇಳಿಕೆ. ಮುಂದೆ ಒಂದ ಸೋಫಿಸ್ಟರ ಬೋಧನೆಯನ್ನೆಲ್ಲಾ ಈ ಹೇಳಿಕೆ ಬೀಜರೂಪವಾಗಿ ಹೊಂದಿದೆ ಎಂದು ಹೇಳಬಹುದು.

ಪಾರ್ಮನೈಡಿಸ್ ಮುಂತಾದ ತಾತ್ವಿಕರು, ಬುದ್ಧಿ (Reason) ಮತ್ತು ಇಂದ್ರಿಯ (Sense)ಗಳ ನಡುವೆ ಭೇದವನ್ನು ಮಾಡಿ, ಪರಮಸತ್ಯ ಬುದ್ಧಿಗೆ ಅನುಗುಣವಾಗಿರಬೇಕೆಂದು ಪ್ರತಿಪಾದಿಸಿದರೆ, ಪ್ರೊಟಾಗೊರಾಸ್ ಈ ಭೇದವನ್ನು ನಿರಾಕರಿಸುತ್ತಾನೆ. ಅವನ ಪ್ರಕಾರ ಸತ್ಯ ಆಯಾಯ ವ್ಯಕ್ತಿಯ ಇಂದ್ರಿಯಾನುಭವದ ಮೇಲೆ ನಿಂತಿರುತ್ತದೆ. ಇಂದ್ರಿಯಾನುಭವ ಏನೇನು ತೋರಿಸುತ್ತದೋ ಅದೆಲ್ಲವೂ ಸತ್ಯ. ಒಂದೇ ವಸ್ತುವನ್ನು ಕುರಿತು ಪರಸ್ಪರ ವಿರುದ್ಧ ನಿಲುವುಗಳು ಇರುವುದು ಸಾಧ್ಯ. ಯಾವುದನ್ನು ಸತ್ಯ ಎಂದು ಪ್ರಬಲವಾದ ವಾದದಿಂದ ಪ್ರತಿಪಾದಿಸಬಹುದೋ, ಅಷ್ಟೇ ಪ್ರಬಲ ವಾದದಿಂದ ಅದನ್ನು ಅಸತ್ಯ ಎಂದೂ ತೋರಿಸಬಹುದು. ಹೀಗೆ ಸತ್ಯ ಅಸತ್ಯಗಳ ನಡುವೆ ಭೇದವೇ ಇಲ್ಲ. ಸಾರ್ವತ್ರಿಕವಾದ ಸರ್ವರಿಗೂ ಸಮ್ಮತವಾದ ಸತ್ಯ, ನೀತಿ, ಧರ್ಮ ಯಾವುದೂ ಇಲ್ಲ. ಹಾಗೆಯೇ ಸಾರ್ವತ್ರಿಕವಾದ ಬುದ್ಧಿ ಎಂಬುದಿಲ್ಲ.. ನನಗೆ ಯಾವುದು ಹೇಗೆ ಹೇಗೆ ತೋರುತ್ತದೋ ಅದು ಹಾಗೆ ಹಾಗೆ ಸತ್ಯ. ವ್ಯಕ್ತಿಯೇ ಸತ್ಯದ ಮಾನದಂಡ. ಸತ್ಯ ವ್ಯಕ್ತಿನಿಷ್ಠವಾದುದು, ವಸ್ತುನಿಷ್ಠವಲ್ಲ. ಸತ್ಯ, ವ್ಯಕ್ತಿಯ ಆಸೆ ಆಮಿಶಗಳಿಗನುಗುಣವಾಗಿರುತ್ತದೆಯೇ ಹೊರತು ವ್ಯಕ್ತಿ, ಸತ್ಯಕ್ಕೆ ಅನುಗುಣವಾಗಿರಬೇಕೆಂದೇನೂ ಇಲ್ಲ. ಹಾಗೆಯೇ ಸಾರ್ವತ್ರಿಕ ಜ್ಞಾನ ಎಂಬುದಿಲ್ಲ. ಇಂದ್ರಿಯ ಸಂವೇದನೆಯೇ ಜ್ಞಾನ ; ಪ್ರತಿಯೊಬ್ಬರ ಸ್ವಂತ ಅಭಿಪ್ರಾಯವೇ ಜ್ಞಾನ ; ಅದೇ ಯಥಾರ್ಥ ಜ್ಞಾನ ; ಪ್ರತಿಯೊಬ್ಬ ವ್ಯಕ್ತಿಯ ಇಂದ್ರಿಯಾನುಭವ ಅವನವನಿಗೆ ಪ್ರತ್ಯೇಕ ಹಾಗೂ ವಿಶಿಷ್ಟ. ಅದನ್ನು ಮತ್ತೊಬ್ಬರಿಗೆ ರವಾನಿಸಲಾಗುವುದಿಲ್ಲ. ಹೀಗೆ ಸಾರ್ವತ್ರಿಕವಾದ, ಸರ್ವಜನಗ್ರಾಹ್ಯವಾದ, ಸ್ವತಃಸಿದ್ಧವಾದ ಜ್ಞಾನವೆಂಬುದಿಲ್ಲ ಎಂದು ಪ್ರೊಟಾಗೊರಾಸ್ ವಾದಿಸುತ್ತಾನೆ.

೩

ಗಾರ್ಜಿಯಸ್ (ಸುಮಾರು ಕ್ರಿ. ಪೂ. 500)

ಸರ್ವಸಮ್ಮತವೂ, ಸಾರ್ವತ್ರಿಕವೂ ಆದ ಜ್ಞಾನ ಅಸಾಧ್ಯವೆಂದು ಗಾರ್ಜಿಯಸ್ ತನ್ನ ಚಿಂತನೆಯನ್ನು ಪ್ರಾರಂಭಿಸುತ್ತಾನೆ. ಅವನು ತನ್ನ ಸಿದ್ಧಾಂತವನ್ನು ಕೆಳಗಿನ ಮೂರು ವಾಕ್ಯಗಳಲ್ಲಿ ವಿವರಿಸುತ್ತಾನೆ :

(೧) 'ಸತ್' ಎಂಬುದು ಯಾವುದೂ ಇಲ್ಲ. ಅಂದರೆ ಎಲ್ಲವೂ ಶೂನ್ಯ.

(೨) ಒಂದು ವೇಳೆ ಯಾವುದಾದರೂ ಸತ್ ಆಗಿದ್ದರೆ ಅದನ್ನು ಪೂರ್ಣವಾಗಿ ತಿಳಿಯಲಾಗುವುದಿಲ್ಲ.

(೩) ಒಂದು ಪಕ್ಷ ಯಾರಾದರೂ ಅದನ್ನು ತಿಳಿದರೂ, ಅದನ್ನು ಮತ್ತೊಬ್ಬರಿಗೆ ತಿಳಿಯಪಡಿಸುವುದು ಅಸಾಧ್ಯ, ಅದು ವ್ಯಕ್ತಿಯಲ್ಲಿ ರಹಸ್ಯವಾಗಿದ್ದುಬಿಡುತ್ತದೆ.

ಗಾರ್ಜಿಯಾಸ್ ತನ್ನ ಮೊದಲನೆಯ ಪ್ರಮೇಯವನ್ನು ಹೀಗೆ ಸಾಧಿಸುತ್ತಾನೆ: ಯಾವುದಾದರೂ ಒಂದು ವಸ್ತು ಅಸ್ತಿತ್ವದಲ್ಲಿದೆ (ಸತ್) ಎಂದು ಒಪ್ಪಿದ ಪಕ್ಷದಲ್ಲಿ, ಅದಕ್ಕೆ ಹುಟ್ಟು ಇರಬೇಕು. ಅದರ ಹುಟ್ಟು 'ಸತ್'ನಿಂದಾಗಲೀ 'ಅಸತ್'ನಿಂದಾಗಲೀ ಉಂಟಾಗಿರಬೇಕು. ಅದು 'ಸತ್'ನಿಂದ ಉಂಟಾಗಿದೆ ಎಂದು ಒಪ್ಪಿದ ಪಕ್ಷದಲ್ಲಿ, ಅದಕ್ಕೆ ಪ್ರಾರಂಭವೇ ಇಲ್ಲ ಎನ್ನಬೇಕಾಗುತ್ತದೆ; ಏಕೆಂದರೆ 'ಸತ್' ಸದಾಕಾಲ ಅಸ್ತಿತ್ವದಲ್ಲಿರುವುದು. 'ಅಸತ್'ನಿಂದ ಉತ್ಪತ್ತಿಯಾಯಿತೆಂದೂ ಹೇಳಲಾಗುವುದಿಲ್ಲ; ಏಕೆಂದರೆ 'ಅಸತ್' ಸಂಪೂರ್ಣವಾಗಿ ಶೂನ್ಯವಾದುದು. ಶೂನ್ಯದಿಂದ ಏನೂ ಹೊರಬರಲಾರದು. ಹೀಗೆ ಅಸ್ತಿತ್ವ, ಸ್ವವಿರೋಧ ಕಲ್ಪನೆಯಾದುದರಿಂದ ಯಾವುದೂ ಅಸ್ತಿತ್ವದಲ್ಲಿಲ್ಲ ಎಂದು ಹೇಳಬೇಕಾಗುತ್ತದೆ.

ತನ್ನ ಎರಡನೆಯ ಪ್ರಮೇಯವನ್ನು ಗಾರ್ಜಿಯಾಸ್ ಹೀಗೆ ಸಾಧಿಸುತ್ತಾನೆ. 'ಜ್ಞಾನ' ಎಂದರೆ ಇಂದ್ರಿಯ ಸಂವೇದನೆ. ವಸ್ತುವನ್ನು ಕುರಿತ ಇಂದ್ರಿಯ ಸಂವೇದನೆ ವ್ಯಕ್ತಿ ವ್ಯಕ್ತಿಗೂ ಬೇರೆ ಬೇರೆಯಾಗಿರುತ್ತದೆ. ಅಷ್ಟೇ ಅಲ್ಲ. ಒಂದೇ ವ್ಯಕ್ತಿಯ ದೃಷ್ಟಿಯಲ್ಲಿ ಆ ಸಂವೇದನೆಗಳು ಏಕ ಪ್ರಕಾರವಾಗಿರುವುದಿಲ್ಲ. ಹೀಗೆ ವಸ್ತು ಸ್ವರೂಪತಃ ಏನು ಎಂಬುದನ್ನು ತಿಳಿಸಲಾಗುವುದಿಲ್ಲ. ಆದುದರಿಂದ ಜ್ಞಾನ ಅಸಾಧ್ಯ ಎಂದು ಗಾರ್ಜಿಯಾಸ್ ವಾದಿಸುತ್ತಾನೆ.

ಜ್ಞಾನ ಎನ್ನುವಂಥದ್ದು ಇಂದ್ರಿಯ ಸಂವೇದನೆ ಎಂದು ತೋರಿಸಿದ್ದಾಯಿತು. ಇಂದ್ರಿಯ ಸಂವೇದನೆಯನ್ನು ಮತ್ತೊಬ್ಬರಿಗೆ ಬೋಧಿಸುವುದಾಗಲೀ, ರವಾನಿಸುವುದಾಗಲೀ ಸಾಧ್ಯವಿಲ್ಲವೆನ್ನುವುದು ಸುಸ್ಪಷ್ಟ ಎಂದು ಗಾರ್ಜಿಯಾಸ್ ಹೇಳುತ್ತಾನೆ.

ಹೀಗೆ ಸೋಫಿಸ್ಟರು ಸತ್ಯ, ಸೌಂದರ್ಯ, ಶ್ರೇಯ, ನ್ಯಾಯ, ನೀತಿ, ಜ್ಞಾನ ಮುಂತಾದುವು ಯಾವುವೂ ಸಾಧ್ಯವಿಲ್ಲವೆಂದು ಬೋಧಿಸಿದರು. ಮುಂದೆ ಬಂದ ಸೋಫಿಸ್ಟರು ಇನ್ನೂ ಅತಿರೇಕಕ್ಕೆ ಹೋದರು. 'ಬಲವೇ ನ್ಯಾಯ' 'ಬಲವಂತನೇ ಹಕ್ಕುದಾರ', 'ಬಲಾಢ್ಯನೇ ಗುಣಾಢ್ಯ', 'ಬಲ ಪ್ರದರ್ಶನವೇ ಧರ್ಮ' ಎಂದು ಅವರು ಬೋಧಿಸಿದರು. ಅವರ ಉಪದೇಶ ಸ್ವಾರ್ಥಪರವೂ ಸಂಕುಚಿತವೂ ವ್ಯಕ್ತಿನಿಷ್ಠವೂ ಆಗಿ ಪರಿಣಮಿಸಿತು.

ಸೋಫಿಸ್ಟರು ಒಂದು ರೀತಿಯ ವಿಚಾರ ಕ್ರಾಂತಿಯನ್ನು ಎಬ್ಬಿಸಿದರು. ನಿರ್ಭಯವಾದ ವಿಚಾರ ವಿಮರ್ಶೆಯನ್ನು ಹುಟ್ಟುಹಾಕಿ ಪ್ರೋತ್ಸಾಹಿಸಿ ಬೆಳಸಿದವರು ಅವರು. ಪ್ರತಿಯೊಂದನ್ನೂ ವಿಚಾರ ಬುದ್ಧಿಯಿಂದ ಪರೀಕ್ಷಿಸಬೇಕೆಂದು ನವಜ್ಞಾನೋದಯವನ್ನು ಉಂಟುಮಾಡಿದವರು ಅವರು. ಅವರು ಪಾಂಡಿತ್ಯವನ್ನು ಹರಡಿದರು. ಮುಖ್ಯವಾಗಿ ಅವರು ವ್ಯಕ್ತಿ ಸ್ವಾತಂತ್ರ್ಯವಾದಿಗಳು. ಸಂಪ್ರದಾಯ ನೀತಿಯನ್ನು ತರಾಟೆಗೆ ತೆಗೆದು

ಕೊಂಡಿದ್ದು ಅವರ ವಿಚಾರಪರತೆಯ ದ್ಯೋತಕವಾಗಿವೆ. ಹೀಗೆ ವೈಚಾರಿಕತೆಯ ವರ್ಧನೆ ಸೋಫಿಸ್ಟರ ಬೋಧನೆಯ ಒಹುಮುಖ್ಯ ಗುಣಾಂಶವಾಗಿದೆ. ಆದರೆ ಅವರದು ರಚನಾತ್ಮಕ ವಿಚಾರ ವಿಮರ್ಶೆಯಲ್ಲ ; ಅದು ವಿಧ್ವಂಸಕ ವಿಮರ್ಶೆ. ಅವರು ಸಂಪ್ರದಾಯ ನೀತಿಯನ್ನೂ ಪದ್ಧತಿಗಳನ್ನೂ ಕಟುವಾಗಿ ಟೀಕಿಸಿದರು. ಆದರೆ ಅವಕ್ಕೆ ಬದಲಾಗಿ ವೈಚಾರಿಕ ನೀತಿ ಪದ್ಧತಿಗಳನ್ನು ಪ್ರತಿಪಾದಿಸಿ ಸಂಸ್ಥಾಪಿಸಲಿಲ್ಲ. ಜ್ಞಾನ, ನೀತಿ, ಧರ್ಮ ಸತ್ಯಗಳಿಲ್ಲವೆಂದೇ ಪ್ರತಿಪಾದಿಸಿದರು. ವ್ಯಕ್ತಿ ಅರಿಸಿದ್ದೇ ಒಳಿತು, ಹೇಳಿದ್ದೇ ಸತ್ಯ ಎನ್ನುವಷ್ಟರಮಟ್ಟಿಗೆ ಸ್ವಾರ್ಥಲೋಲುಪವಾಯಿತು, ವ್ಯಕ್ತಿನಿಷ್ಠವಾಯಿತು ಅವರ ಉಪದೇಶ. ಇಲ್ಲಿಯೇ ಸೋಫಿಸ್ಟರು ಸಮಾಜಘಾತುಕರಾಗಿ, ತತ್ವಜ್ಞಾನ ವಿರೋಧಿಗಳಾಗಿ ನಿಂತಿದ್ದು. ಇದೇ ಅವರ ದೋಷ.

೧

ಸಾಕ್ರಟೀಸ್ (ಸುಮಾರು ಕ್ರಿ. ಪೂ. 469–399)

ಕುಯುಕ್ತಿಯಿಂದ, ಧನದಾಸೆಯಿಂದ ಸತ್ಯ, ಧರ್ಮ, ನ್ಯಾಯ, ಶ್ರೇಯ, ಜ್ಞಾನ ಮುಂತಾದವುಗಳು ಇಲ್ಲವೆಂದೇ ಪರಿಣಾಮಕಾರಿಯಾದ ರೀತಿಯಲ್ಲಿ ಬೋಧಿಸಿ, ಗ್ರೀಸ್ ದೇಶದಲ್ಲಿ ಎಲ್ಲೆಲ್ಲೂ ಅವ್ಯವಸ್ಥೆ, ಅನೈತಿಕತೆ, ಅರಾಜಕತೆಯನ್ನುಂಟುಮಾಡಿದ್ದ ಸೋಫಿಸ್ಟರನ್ನು ಎದುರಿಸಿ ಸತ್ಯ, ಧರ್ಮ, ನ್ಯಾಯ, ಶ್ರೇಯ, ಜ್ಞಾನ, ಸೌಂದರ್ಯಗಳನ್ನು ಪುನರ್‌ಪ್ರತಿಷ್ಠಾಪಿಸಿ ಸಮಾಜದಲ್ಲಿ ಒಂದು ವ್ಯವಸ್ಥೆಯನ್ನು ರೂಪಿಸಿ, ಸಮಾಜದ ಸಾರ್ವತಿಕ ಒಳಿತನ್ನು ಗುರುತಿಸಿ ಬೋಧಿಸುವ ಕೆಲಸ ಸಾಕ್ರಟೀಸನ ಪಾಲಿಗೆ ಬಂದಿತು.

ಸಾಕ್ರಟೀಸ್ ಹುಟ್ಟಿನಿಂದ ಶ್ರೀಮಂತನಲ್ಲ, ಅವನ ತಂದೆ ಸಾಫ್ರೊನಿಸ್ಕಸ್. ಅವನು ವೃತ್ತಿಯಿಂದ ಶಿಲ್ಪಿ ತಾಯಿ ಫೀನಾರಿಟೆ ಎಂಬ ಸೂಲಗಿತ್ತಿ. ಆದರೆ ಅವನದು ಶ್ರೀಮಂತ ಮತಿ ; ಪಾದರಸದ ಚುರುಕು ಬುದ್ಧಿ. ಅವನು ಚಿಂತನಾ ಸಾಹಸಿ, ಮೇಧಾವಿ, ನ್ಯಾಯ ಪಕ್ಷಪಾತಿ ; ಅವನ ಮಾತು ಮಿಂಚಿನ ಅಲುಗಿನ ಹಾಗೆ ; ವಾದದಲ್ಲಿ ಗಟ್ಟಿ ಕಾಳು ; ತರ್ಕ ಆಭಾಸಗಳನ್ನು ತೋರಿಸುವುದರಲ್ಲಿ ಎತ್ತಿದ ಕೈ. ಬಹುದೊಡ್ಡ ತಾರ್ಕಿಕನಾದ ಅವನು, ಪ್ರತಿಯೊಂದು ವಿಷಯಕ್ಕೂ ಲಕ್ಷಣ ನಿರೂಪಣೆ (definition) ಯನ್ನು ಕೊಟ್ಟ ಹೊರತು ಅದನ್ನು ಸಂಪೂರ್ಣವಾಗಿ ತಿಳಿಯಲಾಗುವುದಿಲ್ಲ ಎಂದು ಸಾರುತ್ತಾನೆ. ಗ್ರೀಕ್ ಸಮಾಜ ವಿಷಮ ಘಟ್ಟದ ಮೂಲಕ ಹಾದುಹೋಗುತ್ತಿದ್ದ ಸಮಯದಲ್ಲಿ ಜನ್ಮವೆತ್ತಿ ಆಷಾಢಭೂತಿತನ, ಅನೈತಿಕತೆ, ಡಂಭಾಚಾರ, ಸ್ವೇಚ್ಛಾಚಾರ, ವಿಷಯಲಂಪಟತ್ವಗಳನ್ನು ಖಂಡಿಸಿ, ಸಮಾಜದ ಧ್ಯೇಯ ಆದರ್ಶಗಳನ್ನು ಎತ್ತಿ ಹಿಡಿದವನು ಸಾಕ್ರಟೀಸ್. ನೈತಿಕಮೌಲ್ಯಗಳ ಸಂರಕ್ಷಕನಾಗಿ ಅವನು ಅಂದಿನ ಯುವ ಜನತೆಯ ಸ್ಫೂರ್ತಿ ಬುಗ್ಗೆಯಾಗಿದ್ದನು.

ಸಾಕ್ರಟೀಸ್ ನೋಡುವುದಿಕ್ಕೆ ಕುರೂಪಿ. ಮೊದಲನೇ ನೋಟಕ್ಕೇ ಭಯೋತ್ಪಾದನೆ ಮಾಡುವಂಥ ವ್ಯಕ್ತಿ; ಆದರೆ ಅದು ಕೇವಲ ಬಾಹ್ಯ ನೋಟವಷ್ಟೆ ! ಅಂತರ್ಯ

ದಲ್ಲಿ ಅವನು ಅಕವಾದ ಗಾಂಭೀರ್ಯವನ್ನೂ ಸೌಂದರ್ಯವನ್ನೂ ಹೊಂದಿದ್ದನು ; ಹೃದಯವಂತಿಕೆ, ಸೌಜನ್ಯ ಸೌಶೀಲ್ಯಗಳ ಅಪರಾವತಾರವಾಗಿದ್ದನು. ಅವನದು ಅಪ್ರತಿಮ ಮನೋದಾರ್ಢ್ಯ. ಅವನು ಅತ್ಯಾಶ್ಚರ್ಯಕರವಾದ ಸ್ಥೈರ್ಯ ಕಷ್ಟಸಹಿಷ್ಣುತೆ ಹಾಗೂ ಅಪ್ರತಿಮ ಇಂದ್ರಿಯ ನಿಗ್ರಹವನ್ನು ಹೊಂದಿದ್ದನು. ಅವನಲ್ಲಿ ವಿಚಾರಕ್ಕೂ ಆಚಾರಕ್ಕೂ ಯಾವುದೇ ಅಂತರವಿರಲಿಲ್ಲ. ಅವನು ಏನನ್ನು ಬೋಧಿಸಿದನೋ ಅದನ್ನು ತನ್ನ ನಿಜ ಜೀವನದಲ್ಲಿ ಆಚರಿಸಿ ತೋರಿಸಿದನು. ಅವನ ಅನುಷ್ಠಾನ ನಿಷ್ಠೆ ಹೇಗಿತ್ತೆಂದರೆ 'ಸಾಕ್ರೆಟೀಸೇ ತತ್ವಶಾಸ್ತ್ರ, ತತ್ವಶಾಸ್ತ್ರವೇ ಸಾಕ್ರಟೀಸ್' ಎಂದು ತಾತ್ವಿಕ ಲೋಕ ಮುಕ್ತಕಂಠದಿಂದ ಪೊಗಳುತ್ತದೆ. ಹುಟ್ಟಿದಂದಿನಿಂದ ಸಾಯುವತನಕ ಅವನು ಅಥೆನ್ಸ್ ನಗರವನ್ನು ಬಿಟ್ಟು ಕದಲಲಿಲ್ಲ. ಇದು ಅವನ ವೈಶಿಷ್ಟ್ಯವೂ ಹೌದು. ಅವನ ಜೀವನ ಸಂಕಷ್ಟಗಳ ನೋವಿನ ಸಾಹಸಗಳ ಹೋರಾಟವಾಗಿದೆ.

ಸಾಕ್ರೆಟಿಸ್ ದೇವರಲ್ಲಿ ದೃಢವಾದ ನಂಬಿಕೆಯನ್ನಿಟ್ಟಿದ್ದನು. ದೇವರು ತನ್ನ ಇಚ್ಛೆಯನ್ನು ಕನಸಿನ ರೂಪದಲ್ಲಿ, ಅಂತರ್ವಾಣಿ ಅಶರೀರವಾಣಿಗಳ ಮೂಲಕ ಸೂಚಿಸುತ್ತಾನೆಂದು ಪ್ರಬಲನಾಗಿ ನಂಬಿದ್ದನು. ಅವನು ಅತ್ಯಂತ ಸರಳನೂ ಆದರೆ ಅತ್ಯಂತ ಯೋಗ್ಯನೂ ಪ್ರಾಮಾಣಿಕನೂ ಆಗಿದ್ದನು. ಪ್ರಪಂಚದ ಆಶೆ ಆಮಿಷಗಳಿಗೆ ಅವನೆಂದೂ ಗುಲಾಮನಾಗಿರಲಿಲ್ಲ. ಜ್ಞಾನವನ್ನು ಅರ್ಜಿಸುವುದು ಸದ್ಗುಣವನ್ನು ದಿನೇ ದಿನೇ ಬೆಳೆಸಿಕೊಂಡು ನೈಗೂಡಿಸಿಕೊಳ್ಳುವುದು ಅವನ ಧ್ಯೇಯವಾಗಿತ್ತು. ಯಾವುದೇ ಕಾರ್ಯದ ಒಳಿತು ಕೆಡುಕುಗಳನ್ನು ಮುಂದಾಗಿ ತನ್ನ ಅಂತರ್ವಾಣಿಯಿಂದ ತಿಳಿಯುತ್ತಿದ್ದುದಾಗಿ ಅವನೇ ಹೇಳಿಕೊಂಡಿದ್ದಾನೆ. ಅಂತರ್ವಾಣಿಯೇ ತನ್ನ ಎಲ್ಲ ಕಾರ್ಯಗಳ ಪ್ರೇರಕಶಕ್ತಿಯಾಗಿತ್ತು.

ಬೌದ್ಧಿಕತೆಗೆ, ವೈಚಾರಿಕತೆಗೆ ಮತ್ತೊಂದು ಹೆಸರೇ ಸಾಕ್ರಟೀಸ್. ವಿಚಾರ ತನ್ನ ಪರಾಕಾಷ್ಠೆಯನ್ನು ಮುಟ್ಟಬೇಕು. ವಿಚಾರ ಶಕ್ತಿಯನ್ನು ಕುಂದಿಸುವ ಯಾವುದೇ ಪ್ರಯತ್ನವನ್ನು ಅವನು ಪ್ರಬಲವಾಗಿ ವಿರೋಧಿಸುತ್ತಾನೆ. ವಿಚಾರವನ್ನು ಮಾಡದೆ ಮಾನವ ತಪ್ಪು-ಒಪ್ಪುಗಳ ಯಂತ್ರವಾಗಬಾರದು. 'ಆತ್ಮವಿಮರ್ಶೆ ಇಲ್ಲದ ಅವೈಚಾರಿಕ ಜೀವನ ಬಾಳಲು ಯೋಗ್ಯವಾದುದಲ್ಲ' (An unexamined life is not worth living) ಎಂಬುದು ಅವನ ಸ್ಪಷ್ಟ ಅಭಿಮತವಾಗಿತ್ತು. ತಾವು ಜ್ಞಾನಿಗಳಲ್ಲದಿದ್ದರೂ ಜ್ಞಾನಿಗಳೆಂದು ನಟನೆ ಮಾಡುವವರ ಅಲ್ಪಬುದ್ಧಿಯನ್ನೂ ಮೌಢ್ಯವನ್ನೂ ಹೊರಗೆಡಹುದೇ ಅವನ ಗುರಿಯಾಗಿತ್ತು. ಅವನು ನಿರ್ಭಯನಾಗಿ ಮುಕ್ತ ಮನಸ್ಸಿನಿಂದ ವಿಚಾರತರ್ಕ ಮಾಡುತ್ತಿದ್ದನು. ಅವನದು ಇಂಗಿಸಲಾಗದ ಜ್ಞಾನ ಪ್ರಸಾರಣೆಯ ಪಿಪಾಸೆ. ಅಂದಿನ ರಾಜಕೀಯ ವಿಚಾರಗಳಲ್ಲಿ ಅವನು ಆಸಕ್ತಿಯನ್ನೂ ಸಕ್ರಿಯ ಅಭಿರುಚಿಯನ್ನೂ ಹೊಂದಿದ್ದನು. ದೇಶದ ಕಾನೂನುಗಳಲ್ಲಿ ಅಚಲ ಶ್ರದ್ಧೆಯುಳ್ಳವನಾಗಿ ಪರಿಶುದ್ಧ ಜೀವನವನ್ನು ನಡೆಸಲು ಪ್ರೋತ್ಸಾಹಿಸುತ್ತಿದ್ದನು. ಜನರಲ್ಲಿ ದೇಶಪ್ರೇಮ, ಧರ್ಮ ಶ್ರದ್ಧೆ ಅಂಕುರಿಸುವಂತೆ ಮಾಡಿದನು. ಪ್ರಜಾಪ್ರಭುತ್ವ ಮೌಲ್ಯ

ಗಳ ನಾಶ, ಮಾನವತೆಯನ್ನು ಅಣಕಿಸುವ ಹಣದಾಹ, ಸಾಮಾಜಿಕ, ಬೇಜವಾಬ್ದಾರಿಗಳನ್ನು ಕುರಿತು ಜನರಿಗೆ ತಿಳಿಸಿ ನಿಯಂತ್ರಿಸಲು ಸತತ ಪ್ರಯತ್ನಪಟ್ಟನು. ಹೀಗೆ ಹತ್ತು ಹಲವು ಮುಖಗಳಲ್ಲಿ ಮಾನವ ಧರ್ಮವನ್ನೂ ನೀತಿಯನ್ನೂ ಉಳಿಸಿ ಬೆಳೆಸಲು ಮೂಲಕಾರಣನಾದನು.

೨

ಸಾಕ್ರಟೀಸನು ವ್ಯವಸ್ಥಾಬದ್ಧವಾದ ಯಾವ ತಾತ್ವಿಕ ಚಿಂತನೆಯನ್ನೂ ಕಟ್ಟಲಿಲ್ಲ. ಅವನು ತನ್ನ ಚಿಂತನೆಯನ್ನು ಬರೆದಿಡಲಿಲ್ಲ. ಅವನ ತಾತ್ತ್ವಿಕ ಚಿಂತನೆಯನ್ನೂ ಅರಿಯಲು ನಮಗೆ ಮೂಲವಾಗಿ ಮುಖ್ಯವಾಗಿ ಇಬ್ಬರು ವ್ಯಕ್ತಿಗಳಿದ್ದಾರೆ. (i) ಕ್ಸೆನೋಫೋನ್ ಮತ್ತು (ii) ಪ್ಲೇಟೋ. ಕ್ಸೆನೋಫೋನ್‌ನ 'ನೆನಪುಗಳು' ಸಾಕ್ರಟೀಸನ ನೆನಪುಗಳನ್ನು, ವಸ್ತುಸ್ಥಿತಿಯನ್ನೂ ಸ್ವಲ್ಪವೂ ವಿರೂಪಮಾಡದ ನೇರ ಗ್ರಂಥ. ಏನನ್ನು ಹೇಳಬೇಕೋ ಅದನ್ನು ಮುಚ್ಚುಮರೆಯಿಲ್ಲದೆ ನೇರವಾಗಿ ಹೇಳಿಬಿಡುವುದು ಆ ಗ್ರಂಥದ ವೈಶಿಷ್ಟ್ಯ. ಪ್ಲೇಟೋ ತನ್ನ ಜಗತ್ಪ್ರಸಿದ್ಧ ಸಂವಾದಗಳಲ್ಲಿ ಸಾಕ್ರೆಟೀಸನನ್ನು ಮುಖ್ಯ ಪಾತ್ರಧಾರಿಯನ್ನಾಗಿ, ತನ್ನ ನಿಲುವುಗಳ ಸೂತ್ರಧಾರಿಯನ್ನಾಗಿ ಮಾಡಿದ್ದಾನೆ. ಅವುಗಳಲ್ಲಿ ಪ್ಲೇಟೋ ಸಾಕ್ರೆಟೀಸನನ್ನು ಎತ್ತರಿಸಿ ಒಂದು ಆದರ್ಶ ಚಿತ್ರವನ್ನು ನೀಡಿದ್ದಾನೆ.

ಸಾಕ್ರಟೀಸನ ತತ್ವಜಿಜ್ಞಾಸೆಯ ರೀತಿ ಬಹಳ ಆಶ್ಚರ್ಯಕರವಾಗಿತ್ತು. ಅವನು ತನ್ನ ತಾತ್ವಿಕ ಚಿಂತನೆಯನ್ನು ನಾಲ್ಕು ಗೋಡೆಗಳ ಮಧ್ಯೆ ಬೆಳೆಸಲಿಲ್ಲ. ಅಪಾರ ಸಂಖ್ಯೆಯಲ್ಲಿ ಜನ ಸೇರುತ್ತಿದ್ದ ಪೇಟೆ ಬಜಾರುಗಳಲ್ಲಿ, ಅಂಗಡಿಬೀದಿಗಳಲ್ಲಿಗೆ ಹೋಗಿ ತನಗೆ ಪರಿಚಯವಿಲ್ಲದಿದ್ದರೂ ಜನರನ್ನು ಕುರಿತು 'ಇರುವಿನ' ಸಮಸ್ಯೆಗಳ ಬಗ್ಗೆ 'ಜ್ಞಾನ ಮೀಮಾಂಸೆ'ಯ ಬಗ್ಗೆ, 'ಸೌಂದರ್ಯ ಮೀಮಾಂಸೆ'ಯ ಬಗ್ಗೆ ವಿವಿಧ ರೀತಿಯ ಮೂಲಭೂತ ಪ್ರಶ್ನೆಗಳನ್ನು ಕೇಳುತ್ತಿದ್ದನು. ಆ ಪ್ರಶ್ನೆಗಳಿಗೆ ಉತ್ತರ ತನಗೆ ಗೊತ್ತಿದ್ದರೂ ಏನೂ ಗೊತ್ತಿಲ್ಲದವನಂತೆ ನಟಿಸುತ್ತಿದ್ದನು. ಯೋಧರು, ಸ್ತ್ರೀಲೋಲರು, ಆಧ್ಯಾತ್ಮಿಕ ಪ್ರವೃತ್ತಿಯುಳ್ಳವರು ಶ್ರೀಮಂತರು, ಬಡವರು—ಹೀಗೆ ಎಲ್ಲ ವರ್ಗಗಳ ಎಲ್ಲ ವಯಸ್ಸಿನ ಜನರೂ ಅವನನ್ನೂ ಸುತ್ತುವರಿಯುತ್ತಿದ್ದರು. ಅವರು ಸಾಕ್ರಟೀಸನು ಕೇಳಿದ ಪ್ರಶ್ನೆಗಳಿಗೆ ತಮಗೆ ತೋರಿದ ಉತ್ತರಗಳನ್ನು ಹೇಳಲು ಉಪಕ್ರಮಿಸುತ್ತಿದ್ದರು ; ಆ ದಿಸೆಯಲ್ಲಿ ಪ್ರಯತ್ನಪೂರ್ವಕವಾಗಿ ಚಿಂತಿಸುತ್ತಿದ್ದರು. ಸಾಕ್ರಟೀಸನು ಈ ಎಲ್ಲ ಉತ್ತರಗಳನ್ನು ತಾಳ್ಮೆಯಿಂದ ಕೇಳಿ, ತರ್ಕ ವಿತರ್ಕ ಮಾಡುತ್ತಾ ಪ್ರತಿ ಪ್ರಶ್ನೆ ಪ್ರತ್ಯುತ್ತರ ಹೇಳುತ್ತಾ ಕೊನೆಯಲ್ಲಿ ಅವುಗಳ ಗುಣಾವಗುಣಗಳ ವಿಮರ್ಶೆ ಮಾಡಿ ತನ್ನ ತೀರ್ಮಾನವನ್ನು ನೀಡುತ್ತಿದ್ದನು. ತನ್ನ ತೀರ್ಮಾನವೇ ಅಂತಿಮ ತೀರ್ಮಾನ ಅಲ್ಲವೆಂದೂ ವಿಚಾರ ತರ್ಕ ಮುಂದುವರಿಯಬೇಕೆಂದೂ ನಮ್ರನಾಗಿ ಹೇಳುತ್ತಿದ್ದನು. ಅಲ್ಲಿ ನೆರೆದಿದ್ದ ಜನರು

ಸಾಕ್ರಟೀಸನ ವಾದ ಪ್ರೌಢಿಗೆ ವಾದವಿಧಾನ ಚಮತ್ಕಾರಗಳಿಗೆ, ವಿಚಾರ ಪ್ರಭೆಗೆ ತಲೆದೂಗುತ್ತಿದ್ದರು. ಅವರಲ್ಲಿ ಅನೇಕರು ಅವನ ಶಿಷ್ಯರಾಗುತ್ತಿದ್ದರು. ಹೀಗೆ ಸಾಕ್ರಟೀಸ್ ತನ್ನ ತಾತ್ತ್ವಿಕ ಚಿಂತನೆಯನ್ನು ಪ್ರಶ್ನೆ-ಉತ್ತರ, ಪ್ರತಿಪ್ರಶ್ನೆ-ಪ್ರತ್ಯುತ್ತರಗಳ ಸಂವಾದ ವಿಧಾನದಿಂದ ಮುಂದುವರಿಸುತ್ತಿದ್ದನು. ಇದನ್ನು ಸಾಕ್ರಟೀಸನ 'ವ್ಯಂಗ್ಯ ಪದ್ಧತಿ' (Socratic Irony) ಎಂದು ಕರೆಯಲಾಗಿದೆ. ಸಾಕ್ರಟೀಸನು ಸೋಫಿಸ್ಟರಂತೆ ಅಲ್ಲಿ ನೆರೆದಿದ್ದ ಜನರಿಂದ ಯಾವುದೇ ಶುಲ್ಕವನ್ನು ತೆಗೆದುಕೊಳ್ಳುತ್ತಿರಲಿಲ್ಲ.

೩

ಸಾಕ್ರಟೀಸನ ತಾತ್ತ್ವಿಕ ಚಿಂತನೆ ಪ್ರಧಾನತಃ ನೈತಿಕವಾದುದು, ಸಮಾಜದಲ್ಲಿ ಮಾನವನ ಸ್ಥಾನಮಾನವೇನು ? ಅವನ ಕರ್ತವ್ಯಗಳೇನು ? ಮುಂತಾದ ಮಾನವ ಪ್ರಧಾನ ವಿಷಯಗಳ ಬಗ್ಗೆ ತನ್ನ ಗಮನವನ್ನು ಕೇಂದ್ರೀಕರಿಸಿದ್ದ. ಬಾಹ್ಯ ವಿಶ್ವದ ಸ್ವರೂಪವನ್ನು ಕುರಿತು ಚರ್ಚಿಸುವುದು ಅವನ ಉದ್ದೇಶವಾಗಿರಲಿಲ್ಲ. ಅಂಥ ಪ್ರಯತ್ನಗಳು ಅವನಿಗೆ ಸ್ವಲ್ಪವೂ ಒಪ್ಪಿಗೆಯಾಗಿರಲಿಲ್ಲ. ಅವನ್ನು ಅವನು ಬಹಿರಂಗವಾಗಿಯೇ ಖಂಡಿಸುತ್ತಿದ್ದನು. ಮೈದಾನಗಳಿಂದಾಗಲೀ, ಗಿಡಮರಗಳಿಂದಾಗಲೀ ಮಾನವ ಕಲಿಯಬೇಕಾದುದು ಏನೂ ಇಲ್ಲ ಎಂದು ಅವನು ವಾದಿಸುತ್ತಿದ್ದನು. ಅವನ ಇಡೀ ತತ್ತ್ವ ಚಿಂತನೆಯನ್ನು ಹೀಗೆ ಸಂಗ್ರಹಿಸಬಹುದು : (i) 'ನಿನ್ನ ನೀನು ತಿಳಿ' (Know thyself). ಅಂದರೆ ಈ ವಿಶ್ವದಲ್ಲಿ ವಾಸ ಮಾಡುತ್ತಿರುವ 'ನಾನು' ಯಾರು ? ನನ್ನ ನಿಜಸ್ವರೂಪವೇನು ? ನನ್ನ ಮೂಲ ಯಾವುದು ? ನನ್ನ ಕರ್ತವ್ಯಗಳೇನು ? ಗುರಿ ಧ್ಯೇಯಗಳೇನು ? ಅವನ್ನು ಸಾಧಿಸುವ ಬಗೆ ಹೇಗೆ ? ಮಾನವೀಯ ಮೌಲ್ಯಗಳೆಂದರೇನು ? ಅವುಗಳನ್ನು ಮೈಗೂಡಿಸಿಕೊಳ್ಳುವ ಬಗೆ ಹೇಗೆ ? ಈ ಪ್ರಶ್ನೆಗಳನ್ನು ಕುರಿತು ಮಾನವ ಆಳವಾಗಿ ಚಿಂತಿಸಬೇಕು. ಅವುಗಳಿಗೆ ಉತ್ತರಗಳನ್ನು ಕಂಡುಹಿಡಿಯುವ ನಿಷ್ಠಾವಂತ ಪ್ರಯತ್ನವನ್ನು ಮಾಡಬೇಕು ಎಂದು ಅವನು ಬೋಧಿಸುತ್ತಾನೆ. ಬಾಹ್ಯ ವಿಶ್ವದ ಬಗ್ಗೆ ತಲೆ ಕೆಡಿಸಿಕೊಳ್ಳುವುದರಲ್ಲಿ ಅರ್ಥವಿಲ್ಲವೆಂದು ಅವನು ವಾದಿಸುತ್ತಾನೆ. ಅವನ ಪ್ರಕಾರ ಮಾನವನಿಗೆ ತನ್ನನ್ನು ತಾನು ತಿಳಿಯುವುದಕ್ಕಿಂತ ಹೆಚ್ಚಿನದಾದ ಕರ್ತವ್ಯವಿಲ್ಲ.

(ii) ಸಾಕ್ರಟೀಸನ ಪ್ರಕಾರ ಜ್ಞಾನ ಮಾನವನ ಪರಮ ಶ್ರೇಯ. ಅದನ್ನು ಪಡೆಯಬಹುದು. ಅದು ಬರೀ ಮಾತಲ್ಲ : ಬರಿಯ ಬುದ್ಧಿವಂತಿಕೆಯಲ್ಲ, ಶಬ್ದಾರ್ಥದ ತಿಳುವಳಿಕೆಯಲ್ಲ. ಅದೊಂದು ಅದಮ್ಯ ಶಕ್ತಿ, ಚೇತನ. ತಾವು ಅಜ್ಞಾನಿಗಳಾದರೂ ಜ್ಞಾನಿಗಳಂತೆ ಸೋಗು ಹಾಕುವವರಂಥಲ್ಲ, ಸಾಕ್ರಟೀಸ್. ತಾನು ಅಜ್ಞಾನಿ, ತಿಳಿಯಬೇಕಾದುದು ಬಹಳ ಇದೆ ಎಂದು ಅವನು ತಿಳಿದಿದ್ದನು. ಈ ಅರ್ಥದಲ್ಲಿ ಅವನು 'ಜ್ಞಾನಿ' ಉಪನಿಷತ್ತು ಹೇಳುವಂತೆ "ಯಸ್ಯಅಮತಂ ತಸ್ಯ ಮತಂ ಯಸ್ಯ ನ ವೇದ ಸಃ"[1]

ಸಾಕ್ರಟೀಸ್ ಇನ್ನೂ ಮುಂದುವರಿದು ಹೇಳುತ್ತಾನೆ : 'ಜ್ಞಾನವೇ ಸದ್ಗುಣ ; ಸದ್ಗುಣವೇ ಜ್ಞಾನ' (Knowledge is Virtue, Virtue is Know-

ledge). ಜ್ಞಾನವೇ ಶೀಲ, ಸಕಲ ಸದ್ಗುಣ ಸಂಪತ್ತು. ಹಾಗೆಯೇ ಜ್ಞಾನ ಶೂನ್ಯತೆಯೇ, ಅಜ್ಞಾನವೇ ದುಷ್ಟತನ, ಅನಿಷ್ಟ. ಜ್ಞಾನದ ಅಭಾವವೇ ದುಶ್ಶೀಲ, ದುರ್ಗುಣ. ಇದು ಸಾಕ್ರಟೀಸನ ತತ್ವ ಚಿಂತನೆಯ ಬೆನ್ನೆಲುಬು.

ಸಾಕ್ರಟೀಸನ ಪ್ರಕಾರ ಈ ಪ್ರಪಂಚದಲ್ಲಿ ಜ್ಞಾನಿಯೇ ಸದ್ಗುಣಿ. ನೀತಿವಂತ ನಾಗಿರಲು, ಸದ್ಗುಣಿಯಾಗಿರಲು ಜ್ಞಾನದಿಂದ ಮಾತ್ರ ಸಾಧ್ಯ. ನೀತಿ ಎಂದರೇನೆಂಬು ದನ್ನು ತಿಳಿಯಲು ಅಸಮರ್ಥನಾದವನು ನೀತಿವಂತನಾಗಲಾರ, ಸದ್ಗುಣಿಯಾಗಲಾರ ಎಂದು ಅವನು ಪ್ರತಿಪಾದಿಸುತ್ತಾನೆ. ಇಲ್ಲಿ ಜ್ಞಾನವೆಂದರೆ ಪುಸ್ತಕ ಜ್ಞಾನವಲ್ಲ, ಪಾಂಡಿತ್ಯವಲ್ಲ, ನೆನಪಿನಲ್ಲಿಟ್ಟುಕೊಳ್ಳುವುದಲ್ಲ. ಇಂದ್ರಿಯ ಸಂವೇದನೆಯಂತೂ ಅಲ್ಲವೇ ಅಲ್ಲ. ವ್ಯಕ್ತಿ ಸತತವೂ ಒಳ್ಳೆಯದನ್ನು ಪ್ರೀತಿಸುವುದು ಹಾಗೂ ಕೆಟ್ಟದ್ದನ್ನು ಸತತವೂ ದ್ವೇಷಿಸುವುದು ಜ್ಞಾನವೆನಿಸುವುದು. ಸದ್ಗುಣವನ್ನು ಮೈಗೂಡಿಸಿಕೊಳ್ಳಬೇಕೆಂದೂ, ಅದನ್ನು ನಿರಂತರವೂ ಪ್ರೀತಿಸಬೇಕೆಂದೂ ಸಾಕ್ರಟೀಸ್ ಬೋಧಿಸುತ್ತಿದ್ದನು. ಸರ್ವರ ಹಿತವನ್ನು ಸಾಧಿಸುವುದು ಅವನ ಗುರಿಯಾಗಿತ್ತು. ಅವನು ಕನಸಿನಲ್ಲೂ ದುಷ್ಟತನ ದೊಂದಿಗೆ ಶಾಮೀಲು ಮಾಡಿಕೊಳ್ಳುವವನಲ್ಲ.

ಹೀಗೆ ಸಾಕ್ರಟೀಸನ ಅಭಿಪ್ರಾಯದಲ್ಲಿ ಜ್ಞಾನವೇ, ವಿವೇಕವೇ ಶಾಶ್ವತ ಸುಖದ ಹಾದಿ. ನೈತಿಕ ವರ್ತನೆ, ನೈತಿಕತೆ—ಇವು ಜ್ಞಾನದಿಂದ ಉದಯಿಸಬೇಕು. ಜ್ಞಾನವೇ ಅವುಗಳ ತಳಹದಿ. ಜ್ಞಾನವಿಲ್ಲದಿದ್ದರೆ ಸದ್ಗುಣ ಸಾಧ್ಯವೇ ಇಲ್ಲ.

ತಿಳಿದೂ ತಿಳಿದೂ, ಜ್ಞಾನಪೂರ್ವಕವಾಗಿ ಯಾರೂ ಕೆಡುಕನ್ನು ಮಾಡುವುದಿಲ್ಲ ಎಂದು ಸಾಕ್ರಟೀಸ್ ದೃಢವಾಗಿ ನಂಬಿದ್ದ. ಅಜ್ಞಾನಿಯಾದವನು ಸರ್ವದೃಷ್ಟಿ ಯಿಂದಲೂ ಸರಿಯಾದುದನ್ನು (Right) ಮಾಡಲಾರ. ಜ್ಞಾನನಿಧಿ ಎನಿಸಿದವನು ಎಂದೆಂದಿಗೂ ತಪ್ಪನ್ನು, ಕೆಡುಕನ್ನು ಎಸಗಲಾರ ಎಂದು ಅವನ ಅಭಿಪ್ರಾಯ ವಾಗಿತ್ತು. ಎಲ್ಲ ರೀತಿಯ ಕೆಡುಕು, ಹಾಗೂ ಕೆಡುಕನ್ನು ಮಾಡುವಿಕೆಗೆ ಅಜ್ಞಾನವೇ ಕಾರಣವೆಂದು ಅವನು ಹೇಳುತ್ತಾನೆ. ಉದ್ದೇಶಪೂರ್ವಕವಾಗಿ ಯಾವನೂ ತಪ್ಪನ್ನು ಮಾಡಲಾರ ; ಒಬ್ಬ ತಪ್ಪನ್ನೆಸಗಿದರೆ ಅದಕ್ಕೆ ಒಳ್ಳೆಯದರ ಜ್ಞಾನಾಭಾವ ಅಂದರೆ ಅಜ್ಞಾನವೇ ಕಾರಣ. ಅರಿತು ತಪ್ಪು ಮಾಡುವವರು, ಒಂದು ಪಕ್ಷ ಅಂಥವರು ಇದ್ದಲ್ಲಿ, ಅರಿಯದೆ ತಪ್ಪು ಮಾಡುವವರಿಗಿಂತ ಬಹಳ ಮೇಲು ಎಂದು ಅವನು ಪ್ರತಿ ಪಾದಿಸುತ್ತಾನೆ, ಹಾಗೆಯೇ ಸದ್ಗುಣವೇನೆಂಬುದನ್ನು ಮಾನವರಿಗೆ ಉಪದೇಶಿಸುವುದರ ಮೂಲಕ ಅವರನ್ನು ಸದ್ಗುಣಿಗಳನ್ನಾಗಿ ಮಾಡಬಹುದು ಎಂದು ಅವನು ನಂಬಿದ್ದನು. ಸದ್ಗುಣ ಎಂಬುದು ಹುಟ್ಟು ಸ್ವಭಾವ, ಅನುವಂಶಿಕೆ–ಎಂಬ ವಾದವನ್ನು ಸಾಕ್ರಟೀಸ್ ಒಪ್ಪುವುದಿಲ್ಲ. ಅದನ್ನು ಅಭ್ಯಾಸ, ಆಚರಣೆಗಳ ಮೂಲಕ ಬೋಧಿಸಬಹುದು. ಆದರೆ ಅದನ್ನು ಬೋಧಿಸುವ ಒಬ್ಬ ಬೋಧಕ ಸಿಗಬೇಕು, ಅಷ್ಟೆ !

ಗೊತ್ತಿದ್ದೂ ಗೊತ್ತಿದ್ದೂ ಉದ್ದೇಶಪೂರ್ವಕವಾಗಿ ಯಾವನೂ ಕೆಡುಕನ್ನು ಎಸ ಗಲಾರ ಎಂಬ ಸಾಕ್ರಟೀಸ್‌ನ ವಾದ ದೋಷಪೂರಿತವಾಗಿದೆ ಎಂದು ಇಲ್ಲಿ ಹೇಳಬೇಕು.

ಮಾನವ ಮೋಸ ಮಾಡುವುದು ಒಳ್ಳೆಯದಲ್ಲ ಎಂದು ತಿಳಿದಿದ್ದೂ ಮೋಸ ಮಾಡಲು ಯತ್ನಿಸುತ್ತಾನೆ. ಎಷ್ಟೋ ಸಾರಿ ಮಾನವ ಒಳ್ಳೆಯ ಮಾರ್ಗ ಯಾವುದೆಂದು ಚೆನ್ನಾಗಿ ತಿಳಿದಿದ್ದರೂ ಕೆಟ್ಟದಾರಿಯನ್ನು ತುಳಿಯುತ್ತಾನೆ. ಹೀಗೆ ಒಳ್ಳೆಯದು ಎಂದು ತಿಳಿದ ಮಾತ್ರಕ್ಕೆ ಅದನ್ನು ಮಾಡಿದ ಹಾಗಾಗಲಿಲ್ಲ. ಮಾನವನ ಕಾರ್ಯ ಪ್ರವೃತ್ತಿಗೆ ಜ್ಞಾನವಷ್ಟೇ ಅಲ್ಲದೆ ಎಷ್ಟೋ ಸಾರಿ ಅವನಲ್ಲಿರುವ ಕಾಮ, ಕ್ರೋಧ ಮುಂತಾದ ಅಸುರೀ ಪ್ರವೃತ್ತಿಯೂ ಕಾರಣ ಎಂಬುದನ್ನು ಸಾಕ್ರೆಟೀಸ್ ಮರೆತಂತೆ ಕಾಣುತ್ತದೆ ಎಂದು ಅರಿಸ್ಟಾಟಲ್ ಟೀಕಿಸುತ್ತಾನೆ. ತಿಳುವಳಿಕೆಯ ಜೊತೆಗೆ ಚಿತ್ತ ಶುದ್ಧಿಯೂ ಬೇಕು. ಚಿತ್ತ ಶುದ್ಧಿಯನ್ನು ಹೊಂದಿದ್ದ ಸಾಕ್ರೆಟೀಸ್ ಬಹುಶಃ ತನ್ನ ಸ್ವಂತ ಅನುಭವದಿಂದ ಹಾಗೆ ಹೇಳಿರಬೇಕು. ಉಳಿದೆಲ್ಲ ಮಾನವರೂ ತನ್ನಂತಹ ಚಿತ್ತಶುದ್ಧಿಯನ್ನು ಹೊಂದಿದ್ದಾರೆ ಎಂದು ಅವನು ತಿಳಿದಿರಬೇಕು. ಆದರೆ ವಸ್ತುಸ್ಥಿತಿ ಹಾಗಿಲ್ಲ. ವಿವೇಕಕ್ಕೆ ವಿರೋಧವಾಗಿ ವರ್ತಿಸುವ ಸ್ವಭಾವ ಮಾನವನಲ್ಲಿ ಇಲ್ಲದಿಲ್ಲ.

೪

ಸಾಕ್ರಟೀಸನ ಜ್ಞಾನ ಮೀಮಾಂಸೆ

ಜ್ಞಾನಮೀಮಾಂಸೆಯನ್ನು ಕಟ್ಟಿ ಬೆಳಸಿ, ಜ್ಞಾನ ಸಾಧ್ಯ ಎಂದು ಸಾರಿದವನು ಸಾಕ್ರೆಟೀಸ್. ಸರ್ವಸಮ್ಮತವಾದ ಸಾರ್ವತ್ರಿಕವಾದ, ಸರ್ವಗ್ರಾಹಿಯಾದ ಜ್ಞಾನ ಎಂಬುದಿಲ್ಲ ಎಂದು ಬೋಧಿಸಿದ ಸೋಫಿಸ್ಟರನ್ನು ಅವನು ತರಾಟಿಗೆ ತೆಗೆದುಕೊಳ್ಳುತ್ತಾನೆ. ಜ್ಞಾನ ಸದ್ಗುಣಗಳು ಸತ್ಯವೆಂದೂ, ತೋರಿಕೆಯಲ್ಲವೆಂದೂ, ಅವು ಅತ್ಯಾವಶ್ಯಕವೆಂದೂ ಅವನು ಬೋಧಿಸುತ್ತಾನೆ. ಅವನ ಪ್ರಕಾರ ಜ್ಞಾನ ಸಾಧ್ಯ. ಯಥಾರ್ಥ ಜ್ಞಾನ ಹೇಗೆ ಸಾಧ್ಯ ಎಂಬುದನ್ನು ಸಾಕ್ರೆಟೀಸ್ ಅತ್ಯಂತ ಸರಳ ರೀತಿಯಲ್ಲಿ ಹೀಗೆ ತೋರಿಸಿದ್ದಾನೆ : ಜ್ಞಾನ ಎಂಬುದು, ಸೋಫಿಸ್ಟರು ಹೇಳುವಂತೆ ಇಂದ್ರಿಯ ಸಂವೇದನೆಯಲ್ಲ. ಜ್ಞಾನ ವ್ಯಕ್ತಿ ನಿಷ್ಠವಾದುದಲ್ಲ, ವಸ್ತು ನಿಷ್ಠ. ಸತ್ಯ ವ್ಯಕ್ತಿಗತವಲ್ಲ, ವಸ್ತು ಪ್ರಧಾನ. ಎಲ್ಲಾ ಜ್ಞಾನ ಪರಿಭಾವನೆ (concepts) ಗಳ ಮೂಲಕ ಬಂದ ಜ್ಞಾನ. ಪರಿಭಾವನೆಗಳ ಸುಸಂಬದ್ಧ ಸುವ್ಯವಸ್ಥೆಯೇ ಜ್ಞಾನವೆನಿಸುವುದು. ಪರಿಭಾವನೆ ಎಂದರೇನು ? ಅದನ್ನು ಹೀಗೆ ವಿವರಿಸಬಹುದು. ನಾವು ಒಂದು ವಸ್ತುವನ್ನು ನೇರವಾಗಿ ನೋಡಿದಾಗ ತಕ್ಷಣವೆ ನಮಗೆ ಒಂದು 'ಕಲ್ಪನೆ' ಬರುತ್ತದೆ. ಉದಾಹರಣೆಗೆ, ನಾವು ಒಂದು ಮರವನ್ನು ನೋಡಿದಾಗ, ತಕ್ಷಣ ನಮಗೆ 'ಮರದ ಕಲ್ಪನೆ' ಬರುತ್ತದೆ. ಇದನ್ನು ಪ್ರತ್ಯಕ್ಷ ಜ್ಞಾನವೆನ್ನಬಹುದು. ನಾವು ಮನಸ್ಸಿನಲ್ಲಿಯೇ ಅಂಥ ಕಲ್ಪನೆಯನ್ನು ನೆನಪಿಸಿಕೊಂಡಾಗ ಅದು 'ಪ್ರತಿಕಲ್ಪನೆ' ಅಥವಾ 'ಪ್ರತಿಬಿಂಬ' (image or representation) ಎನಿಸುವುದು. ಮನಸ್ಸಿನ ಕಲ್ಪನೆಗಳು ಸಾಮಾನ್ಯವಾಗಿ ಒಂದು ನಿರ್ದಿಷ್ಟ ವಸ್ತುವನ್ನು ಕುರಿತದ್ದಾಗಿವೆ. ಮನಸ್ಸಿನಲ್ಲಿ ನಿರ್ದಿಷ್ಟ ಭಾವನೆಗಳಲ್ಲದೆ ಸಾರ್ವತ್ರಿಕ ಭಾವನೆಗಳೂ ಇವೆ. ಸಾರ್ವತ್ರಿಕ ಭಾವನೆಗಳು ಒಂದು ವರ್ಗ

ಅಥವಾ ಜಾತಿಗೆ ಸೇರಿದ ವಸ್ತುಗಳೆಲ್ಲದವುಗಳ ಸಾರ ಗ್ರಹಣವಾಗಿವೆ; ಅನ್ಯ ಪ್ರತ್ಯೇಕ ವಸ್ತುಗಳ ಪ್ರತ್ಯೇಕ ಗ್ರಹಣವಲ್ಲ.

ಸಾರ್ವತ್ರಿಕ ಭಾವನೆಗಳನ್ನೇ ಪರಿಕಲ್ಪನೆ (concept)–ಗಳನ್ನೆಬಹುದು. ಉದಾಹರಣೆಗೆ, 'ಸಾಕ್ರಟೀಸನು ಮರ್ತ್ಯ' ಎನ್ನುವುದು 'ನಿರ್ದಿಷ್ಟ ಭಾವನೆ'; ಆದರೆ 'ಮಾನವರೆಲ್ಲರೂ ಮರ್ತ್ಯರು' ಎನ್ನುವುದು 'ಸಾರ್ವತ್ರಿಕ ಭಾವನೆ'. ಹೀಗೆ ಸಾರ್ವತ್ರಿಕ ಭಾವನೆ ಅಥವಾ ಪರಿಕಲ್ಪನೆ ಒಂದು ವರ್ಗಕ್ಕೆ ಸೇರಿದ ಎಲ್ಲಾ ವಸ್ತುಗಳ ಸಮಾನ ಗುಣಗಳ ಸಾರವೇ ಆಗಿದೆ; ಅದು ಅವುಗಳ ಪರಸ್ಪರ ವಿರುದ್ಧ ಗುಣಲಕ್ಷಣಗಳನ್ನು ವರ್ಜಿಸುತ್ತದೆ. ಉದಾಹರಣೆಗೆ ಬೆಳ್ಳಗಿರುವುದು ಎಲ್ಲಾ ಕುದರೆಗಳ ಸಮಾನ ಗುಣಲಕ್ಷಣ (ಸಾರ) ವಲ್ಲ. ಏಕೆಂದರೆ ಒಂದು ಕುದರೆ ಕಪ್ಪು ಬಣ್ಣದ್ದಾಗಿರಬಹುದು, ಮತ್ತೊಂದು ಕೆಂಪು ಬಣ್ಣದ್ದಾಗಿರಬಹುದು, ಮಗದೊಂದು ಕೆಂಪು ಬಣ್ಣದ್ದಾಗಿರಬಹುದು. ಆದರೆ ಎಲ್ಲಾ ಕುದರೆಗಳೂ ಬೆನ್ನೆಲುಬುಳ್ಳ ಪ್ರಾಣಿಗಳು (vertebrates) ಎಂದು ಹೇಳಿದರೆ ನಾವು ಆ ವರ್ಗಕ್ಕೆ ಸೇರಿದ ಪ್ರಾಣಿಗಳ ಸಾರವನ್ನು ಸೂಚಿಸಿದಂತಾಗುತ್ತದೆ. ಹೀಗೆ 'ಕಶೇರುಕ' (ಬೆನ್ನೆಲಬನ್ನು ಹೊಂದಿರುವಿಕೆ), ಎಲ್ಲ ಕುದರೆಗಳ ಸಾಮಾನ್ಯ ಪರಿಕಲ್ಪನೆ (general idea) ಯಾಗಿದೆ. ಒಂದು ವರ್ಗಕ್ಕೆ ಸೇರಿದ ವಸ್ತುಗಳಿಗೆ ಸಮಾನವಾದ ಲಕ್ಷಣವನ್ನು ಸೂಚಿಸುವುದರ ಮೂಲಕ ಆ ವರ್ಗದ ಸಾರ್ವತ್ರಿಕ ಪರಿಕಲ್ಪನೆ (concept or general idea)ಯನ್ನು ಹೊಂದಬಹುದು.

ಪರಿಕಲ್ಪನೆಗಳನ್ನು ಉಂಟುಮಾಡುವಿಕೆಯಲ್ಲಿ ಬುದ್ಧಿ ಅಥವಾ Reason ಬಹು ಮುಖ್ಯ ಪಾತ್ರವನ್ನು ವಹಿಸುತ್ತದೆ. Reasonನ್ನು ಪರಿಕಲ್ಪನೆಗಳ ಕುಲುಮೆ ಎನ್ನಬಹುದು. ಅದು ಎಲ್ಲಾ ಮಾನವರಲ್ಲಿಯೂ ಒಂದೇ ಬಗೆಯಾಗಿ ಕೆಲಸ ಮಾಡುತ್ತದೆ. ಅದು ಒಂದು ವರ್ಗದ ಪ್ರತ್ಯೇಕ ವಸ್ತುಗಳ ವೀಕ್ಷಣೆಯಿಂದ ಪ್ರಾರಂಭಿಸಿ ಆ ವರ್ಗದ ಸಾಮಾನ್ಯ ಪರಿಕಲ್ಪನೆಯನ್ನು ಉಂಟು ಮಾಡುವಲ್ಲಿ ಪರ್ಯಾವಸಾನವಾಗುತ್ತದೆ. ಬುದ್ಧಿಯು ಈ ಕ್ರಿಯೆಯನ್ನು 'ವ್ಯಾಪ್ತಿ ಮಾರ್ಗ' ಅಥವಾ 'ಅನುಗಮನ' (Induction) ಎಂದು ಪಾರಿಭಾಷಿಕವಾಗಿ ಹೇಳಬಹುದು. ಹೀಗೆ ಬುದ್ಧಿ ಎಲ್ಲರಲ್ಲಿಯೂ ಒಂದೇ ವಿಧವಾದ ಕೆಲಸ ಮಾಡುತ್ತದೆಯಾದುದರಿಂದ ಎಲ್ಲರೂ ಒಪ್ಪಬಹುದಾದ, ಸರ್ವಗ್ರಾಹ್ಯವಾದ, ಸಾರ್ವತ್ರಿಕವಾದ ಜ್ಞಾನವಿದೆ ಎಂದು ಸಾಕ್ರಟೀಸ್ ವಾದಿಸಿ ತೋರಿಸುತ್ತಾನೆ.

ಬುದ್ಧಿ ಅಥವಾ Reason, ಪ್ರತ್ಯೇಕ ವಸ್ತುಗಳ ವೀಕ್ಷಣೆಯಿಂದ ಪ್ರಾರಂಭಿಸಿ ಸಾರ್ವತ್ರಿಕ ತೀರ್ಮಾನಕ್ಕೆ ಬಂದಿಳಿಯುವುದರ ಜೊತೆಗೆ ಇನ್ನೊಂದು ಕಾರ್ಯವನ್ನೂ ಮಾಡುತ್ತದೆ. ಸಾರ್ವತ್ರಿಕ ಪರಿಕಲ್ಪನೆಯಿಂದ ಪ್ರಾರಂಭಿಸಿ ಪ್ರತ್ಯೇಕ ತೀರ್ಮಾನಗಳನ್ನು ರೂಪಿಸುವುದೇ ಅದರ ಇನ್ನೊಂದು ಕ್ರಿಯೆಯಾಗಿದೆ. ಈ ಕ್ರಿಯೆಯನ್ನು 'ನಿಗಮನ' (Deduction) ಎಂದು ಪಾರಿಭಾಷಿಕವಾಗಿ ಹೇಳಬಹುದು. ಹೀಗೆ 'ಅನುಗಮನ' (Induction). ಸಾರ್ವತ್ರಿಕ ತೀರ್ಮಾನವನ್ನು ರೂಪಿಸುವುದಾದರೆ,

‘ನಿಗಮನ’ (Deduction) ಆ ತೀರ್ಮಾನವನ್ನು ಪ್ರತ್ಯೇಕ ವಸ್ತುಗಳಿಗೆ ಅನ್ವಯಿಸುವ ಕ್ರಿಯೆಯಾಗಿದೆ.

ಹೀಗೆ ಸಾಕ್ರಟೀಸ್ Reasonನ್ನು ಜ್ಞಾನದ ಪ್ರಮುಖ ಉಪಕರಣವನ್ನಾಗಿ ಮಾಡಿಕೊಳ್ಳುತ್ತಾನೆ. Reason ಪರಿಕಲ್ಪನೆಗಳನ್ನು ಉಂಟು ಮಾಡುವುದಷ್ಟೇ ಅಲ್ಲದೆ ಅವುಗಳ ನಡುವೆ ಸುಸಂಬದ್ಧ ಸುವ್ಯವಸ್ಥೆಯನ್ನು ಏರ್ಪಡಿಸುತ್ತದೆ. ಪರಿಕಲ್ಪನೆಗಳನ್ನು ಸಂಘಟಿಸಿ ವಾಕ್ಯರೂಪದಲ್ಲಿ ಉಪಯೋಗಿಸುತ್ತದೆ. ಹೀಗೆ ಪರಿಕಲ್ಪನೆಗಳನ್ನು ವಾಕ್ಯರೂಪದಲ್ಲಿ ಉಪಯೋಗಿಸುವುದೇ ಲಕ್ಷಣ ವ್ಯಾಖ್ಯೆ, ಲಕ್ಷಣ ನಿರೂಪಣೆ ಅಥವಾ ಲಕ್ಷಣ ಸಿದ್ಧಾಂತ (definition) ಎನಿಸುವುದು. ಒಂದು ವಸ್ತುವಿನ ಲಕ್ಷಣ ವ್ಯಾಖ್ಯೆಯನ್ನು ಕೊಡಬೇಕೆಂದರೆ, ಆ ವರ್ಗಕ್ಕೆ ಸೇರಿದ ವಸ್ತುಗಳ ಸಮಾನ ಗುಣ (ಸಾರ)ವನ್ನು ಹೇಳುವುದೇ ಆಗಿದೆ: ಉದಾಹರಣೆಗೆ ಮಾನವ, ಎಲ್ಲ ಮಾನವರಿಗೂ. ಸಮಾನವಾದ ಗುಣಲಕ್ಷಣ (ಸಾರ)ವನ್ನು ಹೇಳಿದಾಗ ಮಾನವನ ಲಕ್ಷಣ ವ್ಯಾಖ್ಯೆಯನ್ನು ಸೂಚಿಸಿದಂತಾಗುತ್ತದೆ. ಮಾನವನನ್ನು ‘ಬಿಳಿ ತೊಗಲಿನ ಪ್ರಾಣಿ’ ಎಂದು ಹೇಳಿದಾಗ ಅದು ಅವನ ಲಕ್ಷಣ ವ್ಯಾಖ್ಯೆಯೆನಿಸುವುದಿಲ್ಲ ಏಕೆಂದರೆ ‘ಬಿಳಿ ತೊಗಲು’ ಎಲ್ಲಾ ಮಾನವರಿಗೂ ಸಮಾನವಾದ ಗುಣಲಕ್ಷಣವಲ್ಲ: ಮಾನವರು ಶ್ವೇತವರ್ಣದವರೂ ಹೌದು, ಎಣ್ಣೆಗೆಂಪು ವರ್ಣದವರೂ ಹೌದು, ಅಚ್ಚ ಕಪ್ಪು ವರ್ಣದವರೂ ಹೌದು. ಹಾಗೆಯೇ ಮಾನವನನ್ನು ‘ಇಂಗ್ಲೀಷ್ ಮಾತನಾಡುವ ಪ್ರಾಣಿ’ ಎಂದು ವಿವರಿಸಿದರೆ ಮಾನವನ ಲಕ್ಷಣ ವ್ಯಾಖ್ಯೆ (definition) ಕೊಟ್ಟ ಹಾಗಾಗುವುದಿಲ್ಲ. ಏಕೆಂದರೆ ಎಲ್ಲ ಮಾನವರೂ ಇಂಗ್ಲೀಷ್ ಭಾಷೆಯನ್ನು ಮಾತನಾಡುವುದಿಲ್ಲ. ಪ್ರಪಂಚದಲ್ಲಿ ಅಸಂಖ್ಯಾತ ಭಾಷೆಗಳಿವೆ. ಅಂದರೆ ಇಂಗ್ಲೀಷ್ ಎಲ್ಲ ಮಾನವರಿಗೂ ಸಮಾನವಾದ ಗುಣಲಕ್ಷಣವಲ್ಲ ; ಅದು ಅವರ ಸಾರವಲ್ಲ. ಆದರೆ ಮಾನವನನ್ನು ‘ಎರಡು ಕಾಲುಗಳುಳ್ಳ ಪ್ರಾಣಿ’ (two legged animal) ಎಂದು ವಿವರಿಸಿದಾಗ, ಮಾನವನ ಲಕ್ಷಣವ್ಯಾಖ್ಯೆಯನ್ನು ಕೊಟ್ಟಂತಾಗುತ್ತದೆ. ಏಕೆಂದರೆ “ಎರಡು ಕಾಲುಗಳನ್ನು ಹೊಂದಿರುವುದು” ಬಹುತೇಕ ಎಲ್ಲ ಮಾನವರೂ ಸಮಾನವಾಗಿರುವ ಅಂಶವಾಗಿದೆ.

ಹೀಗೆ ವಸ್ತುವಿನ ಲಕ್ಷಣ ವ್ಯಾಖ್ಯೆಯನ್ನು ನೀಡುವುದೆಂದರೆ ವಸ್ತುವಿನ ಜ್ಞಾನವನ್ನು ಹೊಂದುವುದು ; ಸತ್ಯದ ವಸ್ತು ಸ್ಥಿತಿಯನ್ನು ಗುರುತಿಸುವುದು ; ಜ್ಞಾನದ ವಸ್ತುನಿಷ್ಠತೆಯನ್ನು (objectivity of knowledge) ಸಂಸ್ಥಾಪಿಸುವುದು. ಜ್ಞಾನ ಖಂಡಿತವಾಗಿಯೂ ಸಾಧ್ಯವಿದೆ. ಅದು ಎಂದೆಂದಿಗೂ ವಸ್ತುನಿಷ್ಠ, ವ್ಯಕ್ತಿನಿಷ್ಠವಲ್ಲ. ಅದು ಸಾರ್ವತ್ರಿಕ, ಸರ್ವಸಮ್ಮತ, ಸರ್ವಗ್ರಾಹ್ಯ. ಅದನ್ನು ಮತ್ತೊಬ್ಬರಿಗೆ ತಿಳಿಸಬಹುದು, ಎಂದು ಸಾಕ್ರಟೀಸ್ ಸೋಫಿಸ್ಟರ ‘ಜ್ಞಾನ ಅಸಾಧ್ಯ’ ಎಂಬ ವಾದವನ್ನು ತಳ್ಳಿಹಾಕುತ್ತಾನೆ.

ವಸ್ತುವಿನ ಲಕ್ಷಣ ವ್ಯಾಖ್ಯೆಯನ್ನು ಅಂದರೆ ವಸ್ತುನಿಷ್ಠ ಜ್ಞಾನವನ್ನು ತುಲನೆಯ ಮಾನದಂಡವನ್ನಾಗಿಯೂ ಉಪಯೋಗಿಸಬಹುದೆಂದು ಸಾಕ್ರಟೀಸ್ ಬೋಧಿಸುತ್ತಾನೆ.

ಉದಾಹರಣೆಗೆ ತ್ರಿಕೋನ. ತ್ರಿಕೋನದ ಲಕ್ಷಣ ವ್ಯಾಖ್ಯೆಯನ್ನು (ಮೂರು ಭುಜಗಳುಳ್ಳ ಆಕೃತಿಯೇ ತ್ರಿಕೋನ) ನೀಡಿದ ಮೇಲೆ ಕೊಟ್ಟಿರುವ ಆಕೃತಿ ತ್ರಿಕೋನವೇ ಅಲ್ಲವೆ ಎಂದೂ ಅಥವಾ ತ್ರಿಕೋನವಲ್ಲದ ಅದು ತ್ರಿಕೋನದಿಂದ ಹೇಗೆ ಭಿನ್ನವಾಗಿದೆ ಎಂಬ ಆಕೃತಿಗಳ ತುಲನಾತ್ಮಕ ಜ್ಞಾನವನ್ನೂ ಹೊಂದಬಹುದು—ಎಂದು ಅವನು ಹೇಳುತ್ತಾನೆ.

ಹೀಗೆ ಸಾರ್ವತ್ರಿಕ ಜ್ಞಾನ ಎಂಬುದಿಲ್ಲ, ಇರುವುದೆಲ್ಲಾ ಪ್ರತ್ಯೇಕ ಪ್ರತ್ಯೇಕ ವ್ಯಕ್ತಿನಿಷ್ಠ ಇಂದ್ರಿಯ ಸಂವೇದನೆ ಮಾತ್ರ ಎಂಬ ಸೋಫಿಸ್ಟರ ವಾದಕ್ಕೆ ಸಾಕ್ರಟೀಸ್ ಕೊನಲಿ ಪೆಟ್ಟನ್ನು ಕೊಟ್ಟಿದ್ದಾನೆ. ಜ್ಞಾನದ ಆಧಾರ, ಸರ್ವರಿಗೂ ಸಮಾನ ಅಂಶವಾದ ಬುದ್ಧಿ ಅಥವಾ Reasonನೇ ಹೊರತು, ಇಂದ್ರಿಯಗಳಲ್ಲ. ಇಂದ್ರಿಯಗಳು ಜ್ಞಾನದ ದ್ವಾರಗಳಷ್ಟೆ, ಮೂಲವಲ್ಲ. ಜ್ಞಾನ ಇಂದ್ರಿಯಗಳಿಂದ ಪ್ರಾರಂಭವಾದರೂ, ಇಂದ್ರಿಯಗಳಿಂದಲೇ ಅದು ಉತ್ಪತ್ತಿಯಾಗುವುದಿಲ್ಲ. ಬುದ್ಧಿಯೇ ಜ್ಞಾನದ ಮೂಲ ಎಂದು ಸಾಕ್ರಟೀಸ್ ಸಾರುತ್ತಾನೆ.

ಒಂದು ವಸ್ತುವಿನ ಲಕ್ಷಣ ವ್ಯಾಖ್ಯೆಯನ್ನು ನೀಡುವುದೆಂದರೆ ಜ್ಞಾನವೆನ್ನುವುದು ವಸ್ತು ನಿಷ್ಠ. ವ್ಯಕ್ತಿ ನಿಷ್ಠವಲ್ಲ ಎಂದು ಆಗಲೇ ಹೇಳಿಯಾಯಿತು. ಸಾಕ್ರಟೀಸನ ಪ್ರಕಾರ ಪ್ರಪಂಚದಲ್ಲಿ ಎಲ್ಲ ವಸ್ತು ವಿಶೇಷಗಳಿಗೂ—ಆಧ್ಯಾತ್ಮಿಕ, ನೈತಿಕ, ರಾಜಕೀಯ ಇತ್ಯಾದಿ ಲಕ್ಷಣ ವ್ಯಾಖ್ಯೆಗಳನ್ನು ಕೊಡಬಹುದು.—ಅವನ ದೃಷ್ಟಿಯಲ್ಲಿ ನೈತಿಕ ಜ್ಞಾನವೇ ಅತ್ಯಂತ ಶ್ರೇಷ್ಠ ಜ್ಞಾನ. ನೈತಿಕ ಜ್ಞಾನದ ಕೇಂದ್ರಬಿಂದುವೇ ಸದ್ಗುಣ. ಜ್ಞಾನಸದ್ಗುಣಗಳೊಡನೆ ಹೋಲಿಸಿದರೆ ಮತ್ತೆಲ್ಲವೂ ನಿಕೃಷ್ಟ. ಸದ್ಗುಣಕ್ಕೂ ಲಕ್ಷಣ ವ್ಯಾಖ್ಯೆಯುಂಟು. ಅದರ ಆಧಾರದ ಮೇಲೆ ಒಬ್ಬ ವ್ಯಕ್ತಿ ಸದ್ಗುಣಿಯೋ ದುರ್ಗುಣಿಯೋ ಎಂದು ನಿರ್ಧರಿಸಿಬಿಡಬಹುದು. ಅದು ವ್ಯಕ್ತಿನಿಷ್ಠವಲ್ಲ, ವಸ್ತುನಿಷ್ಠ. ಅದು ಮಾನವನ ಆಸೆ ಆಮಿಷಗಳಿಗೆ ಅನುಸಾರವಾಗಿರುವುದಲ್ಲ ; ಮಾನವನ ಆಸೆ ಆಮಿಷಗಳು ನೈತಿಕವೆ ಅಥವಾ ಅಲ್ಲವೆ ಎನ್ನುವುದನ್ನು ನಿರ್ಧರಿಸುವಂಥಾದ್ದು.

ಹೀಗೆ ವಸ್ತುಗಳ ಲಕ್ಷಣ ವ್ಯಾಖ್ಯೆಯನ್ನು ಹುಡುಕುವುದೇ ಸಾಕ್ರಟೀಸನ ವೃತ್ತಿಯಾಗಿತ್ತು. ಲಕ್ಷಣ ವ್ಯಾಖ್ಯೆಯನ್ನು ಕೊಡದ ಹೊರತು ಮಾನವ, ವಸ್ತು ಏನೆಂಬುದನ್ನು ತಿಳಿಯಲಾರ ಎಂದು ಅವನು ಪ್ರಬಲವಾಗಿ ನಂಬಿದ್ದನು. ಆದರೂ ಸಾಕ್ರಟೀಸ್ ಲಕ್ಷಣ ವ್ಯಾಖ್ಯೆಯನ್ನು ಹುಡುಕುವುದರಲ್ಲಿ ಸೋತನೆಂದೇ ಹೇಳಬೇಕು. ಅದಕ್ಕೆ ಕಾರಣ ಹೀಗಿದೆ : ಸಾಕ್ರಟೀಸ್ ತನ್ನೊಡನೆ ವಾದಮಾಡುವವರೊಡನೆ ಲಕ್ಷಣ ವ್ಯಾಖ್ಯೆಯನ್ನು ವಾದದ ಒಂದು ಪ್ರಮೇಯ ವಾಕ್ಯವನ್ನಾಗಿ ಮಾಡಿಕೊಂಡು ಇತರ ಪ್ರಮೇಯ ವಾಕ್ಯಗಳನ್ನು ಪ್ರತ್ಯಕ್ಷತಃ ಅಥವಾ ಪರೋಕ್ಷತಃ ಒಪ್ಪಿಕೊಳ್ಳುತ್ತಿದ್ದನು. ಅವುಗಳ ಆಧಾರದ ಮೇಲೆ ತೀರ್ಮಾನಗಳನ್ನು ಹೊರಗೆಳೆಯುತ್ತಿದ್ದನು. ಈ ತೀರ್ಮಾನಗಳಿಗೆ ಒಂದೇ ಒಂದು ಅಪವಾದ ಕಂಡುಬಂದರೆ ಅಥವಾ ವಸ್ತುಸ್ಥಿತಿಗೆ ವಿರೋಧವಿದ್ದಲ್ಲಿ ಅವು ಅಸಮರ್ಪಕವಾಗಿ ಪರಿಣಮಿಸುವ ಸಂಭವ ಉಂಟು. ಹೀಗೆಂದರೆ ಉಳಿದ ಪ್ರಮೇಯ

ವಾಕ್ಯಗಳನ್ನು ಆಗಲೇ ಒಪ್ಪಿರುವುದರಿಂದ ಪ್ರಾರಂಭದ ಪ್ರಮೇಯ ವಾಕ್ಯ, ಅಂದರೆ, ಲಕ್ಷಣ ವ್ಯಾಖ್ಯೆ ದೋಷಪೂರ್ಣವೆಂದು ವ್ಯಕ್ತವಾಗುತ್ತದೆ.

ಒಟ್ಟಿನಲ್ಲಿ ಸಾಕ್ರಟೀಸ್ ವಿಚಾರಪೇತ್ರ, ಯಾವುದೇ ವಿಷಯವನ್ನಾಗಲೀ ಸರಿಯಾದ ರೀತಿಯಲ್ಲಿ ಆಲೋಚಿಸಿ ವಿಮರ್ಶಿಸಬೇಕು. ವಿಮರ್ಶೆ ಮಾಡದೆ ಯಾವುದನ್ನೂ ಒಪ್ಪಿಕೊಳ್ಳಬಾರದು. ನಮ್ಮ ಭಾವನೆಗಳು ಸ್ಪಷ್ಟವಾಗಿರಬೇಕು. ನಾವು ಉಪಯೋಗಿಸುವ ಶಬ್ದಗಳಿಗೆ ನಿಶ್ಚಿತ ಅರ್ಥವಿರಬೇಕು. ಪ್ರತಿಯೊಂದು ಅಭಿಪ್ರಾಯವನ್ನೂ ಸಕಾರಣವಾಗಿ ಸಮರ್ಥಿಸುವಂತಿರಬೇಕು. ವಸ್ತುಸ್ಥಿತಿಗೂ ಅಭಿಪ್ರಾಯಕ್ಕೂ ಹೊಂದಾಣಿಕೆ ಇರದಿದ್ದರೆ ಸಕಾರಣಗಳಿಂದೊಳಗೂಡಿದ ಅಭಿಪ್ರಾಯಗಳನ್ನು ವಸ್ತುಸ್ಥಿತಿಗೆ ಅನುಗುಣವಾಗಿ ಬದಲಿಸಿಕೊಳ್ಳುವ ಮನೋಸ್ಥೈರ್ಯವನ್ನೂ ಉದಾರಬುದ್ಧಿಯನ್ನೂ ಆತ್ಮವಿಮರ್ಶೆಯನ್ನೂ ಹೊಂದಿರಬೇಕೆಂದು ಸಾಕ್ರಟೀಸ್ ಬೋಧಿಸುತ್ತಾನೆ. ಸರಿಯಾದ ಪ್ರಯತ್ನದಿಂದ ಜ್ಞಾನವನ್ನು ಪಡೆದು, ಅಂತಹ ಜ್ಞಾನ ಜನರನ್ನು ಸನ್ಮಾರ್ಗ ಪ್ರವರ್ತಕರೂ, ಸತ್ಯಸಂಕಲ್ಪಪ್ರಜ್ಞರೂ ಆಗುವಂತೆ ಮಾಡಬೇಕೆಂದು ಅವನು ಬೋಧಿಸುತ್ತಿದ್ದನು. ಸತ್ಯಶೋಧನೆಯಲ್ಲಿ ಮಾನವ ಬುದ್ಧಿಗೆ ಸಾಮರ್ಥ್ಯವಿದೆ ಎಂದು ಅವನು ದೃಢವಾಗಿ ನಂಬಿದ್ದನು.

ಸಾಕ್ರಟೀಸನ ಪ್ರಕಾರ ದೇಹ ಎಂಬುದು ಆತ್ಮನ ಸೆರೆಮನೆಯಿದ್ದಂತೆ. ಆತ್ಮ ಅಭೌತಿಕ, ದೇಹ ಭೌತಿಕ. ಆತ್ಮ ಅಮರ, ದೇಹ ಮರ್ತ್ಯ. ಆತ್ಮ ಅಗೋಚರವೂ ದೈವಿಕವೂ, ಜ್ಞಾನ ಪೂರಿತವೂ ಆದುದು. ಆತ್ಮ ತಾನೇ ತಾನಾದ, ಅಂದರೆ ಶರೀರರಹಿತ ಸ್ಥಿತಿಯೇ ಪರಿಪೂರ್ಣಸ್ಥಿತಿ. ಅದು ಸಶರೀರಯಾದಾಗ ಎಲ್ಲ ರೀತಿಯ ಬಂಧನಗಳಿಗೆ ಒಳಗಾಗುತ್ತದೆ; ಅದರ ಸ್ವಾತಂತ್ರ್ಯ ಮೊಟಕುಗೊಂಡಂತೆ ವ್ಯಕ್ತವಾಗುತ್ತದೆ. ದೇಹದಿಂದ ಬಿಡುಗಡೆಯೇ ಜೀವನದ ಅಂತಿಮ ಗುರಿ ಎಂದು ಸಾಕ್ರಟೀಸ್ ಪ್ರತಿಪಾದಿಸುತ್ತಾನೆ. ಇದನ್ನೇ ಭಾರತೀಯ ತತ್ವಶಾಸ್ತ್ರದಲ್ಲಿ 'ಮೋಕ್ಷ' ಎನ್ನುವುದು. ಅಸತ್ಯ, ಮೌಢ್ಯ, ಭಯರಾಗದ್ವೇಷಾದಿಗಳು ಮನುಷ್ಯನ ಪಾಲಿಗೆ ಬರುವ ವಿಪತ್ತುಗಳು—ಇವುಗಳಿಂದ, ಬಿಡುಗಡೆ ಹೊಂದಿ ಆತ್ಮ ಆನಂದರಸದಲ್ಲಿ ಒಂದಾಗುತ್ತದೆ.

೬

ಸಾಕ್ರಟೀಸ್‌ನ ಕೊನೆಯ ದಿನಗಳು

ಸಾಕ್ರಟೀಸನ ತರ್ಕಬುದ್ಧಿ, ಆಗಲೇ ಹೇಳಿದಂತೆ ಸಮಾಜದಲ್ಲಿ ಯಾರನ್ನೂ— ಅವರು ರಾಜಕೀಯ ಮುಂದಾಳುಗಳಾಗಿರಲಿ, ಆಡಳಿತ ಸೂತ್ರಧಾರಿಗಳಾಗಿರಲಿ, ಪ್ರತಿಷ್ಠಿತ ವ್ಯಕ್ತಿಗಳಾಗಿರಲಿ—ವಿಚಾರ ವಿಮರ್ಶೆಗೆ ಒಳಪಡಿಸದೆ ಇರಲಿಲ್ಲ. ಅವನು ನಿರ್ಭಯನಾಗಿ ಎಲ್ಲರೊಡನೆಯೂ ಜಿಜ್ಞಾಸೆಯನ್ನು ಹುಡುಕುತ್ತಿದ್ದನು. ತಾವು ಮೂಢರೂ ಅಜ್ಞಾನಿಗಳೂ ಆಗಿದ್ದರೂ, ಜ್ಞಾನಿಗಳಂತೆ ನಟಿಸುತ್ತಿದ್ದವರ ಮೌಢ್ಯವನ್ನು ನಿರ್ಭಯ ವಿಮರ್ಶೆಯಿಂದ ಬಟ್ಟಬಯಲು ಮಾಡುತ್ತಿದ್ದನು. ಈ ಕ್ರಿಯೆಯಿಂದ ಕೆಲವರ

ಸ್ವಾಭಿಮಾನಕ್ಕೆ ಕುಂದುಂಟಾಗಿತ್ತು. ಅಲ್ಲದೆ ದೇಶದ ಅಧಃಪತನಕ್ಕೆ ಕಾರಣರಾಗಿದ್ದ ಸೋಫಿಸ್ಟರಲ್ಲಿ ಸಾಕ್ರಟೀಸನೂ ಒಬ್ಬ ಎಂಬ ತಪ್ಪು ಗ್ರಹಿಕೆಯೂ ಅಥೆನ್ಸಿನ ಕೆಲವು ಪ್ರಭಾವೀ ಜನರಲ್ಲಿತ್ತು. ಈ ಎಲ್ಲ ಕಾರಣಗಳಿಂದ ಸಾಕ್ರಟೀಸನು ಅಥೆನ್ಸಿನ ಕೆಲವು ಜನರ ಕೋಪಕ್ಕೂ, ದ್ವೇಷಾಸೂಯೆಗಳಿಗೂ ಗುರಿಯಾಗಿದ್ದನು. ಅವನು ಸಂಪ್ರದಾಯ ವಿರೋಧಿಯಾಗಿ ಹೊಸ ದಾರಿಯನ್ನು ತುಳಿಯುವವನಾಗಿದ್ದನು. ಆ ದಾರಿ ಜನರನ್ನು ಎತ್ತ ಕರೆದೊಯ್ಯುವುದೋ ಎಂಬ ಹೆದರಿಕೆ ಉಂಟಾಗಿತ್ತು. ಅಥೆನ್ಸಿನ ಪೂರ್ವಗ್ರಹ ಪೀಡಿತರಾದ ಕೆಲವರು ಅವನನ್ನು ಶಿಕ್ಷಿಸಬೇಕೆಂದು ಒಂದಲ್ಲ ಒಂದು ಕಾರಣವನ್ನು ಹುಡುಕುತ್ತಿದ್ದರು. ಕಡೆಗೆ ಅವನ ಎಪ್ಪತ್ತನೆಯ ಮುಪ್ಪಿನಲ್ಲಿ ಅವರು ಅವನ ಮೇಲೆ ಕೆಲವು ದೋಷಾರೋಪಣೆಗಳನ್ನು ಹೊರಿಸಿ ನ್ಯಾಯಾಸ್ಥಾನಕ್ಕೆ ಕರೆದೊಯ್ದರು. ಅವನ ಮೇಲೆ ದೋಷಾರೋಪಣೆಯನ್ನು ಹೊರಿಸಿದವರು ಮುಖ್ಯವಾಗಿ ಮೂರು ಜನ— ಚರ್ಮ ವ್ಯಾಪಾರಿಯಾದ ಆನಿಟಸ್, ಪ್ರಸಿದ್ಧ ಕವಿಯಾಗಲಿಲ್ಲವಲ್ಲ ಎಂದು ಕೊರಗುತ್ತಿದ್ದ ಮೆಲಿಟಸ್ ಮತ್ತು ತನ್ನನ್ನು ತಾನು ಪ್ರಸಿದ್ಧ ವಾಗ್ಮಿ ಎಂದು ಕರೆದುಕೊಳ್ಳುತ್ತಿದ್ದ ಲೈಕನ್. ದೋಷಾರೋಪಣೆ ಎರಡು ರೀತಿಯದಾಗಿತ್ತು. (i) ಸಾಕ್ರಟೀಸ್ ಅಥೆನ್ಸಿನ ಯುವಕರನ್ನು ದುರ್ಮಾರ್ಗಕ್ಕೆ ಎಳೆಯುತ್ತಿದ್ದಾನೆ ಮತ್ತು (ii) ಸಂಪ್ರದಾಯ ವಿರೋಧಿಯಾದ ಅವನು ಅಥೆನ್ಸಿನ ದೇವರುಗಳಲ್ಲಿ ನಂಬಿಕೆಯಿಟ್ಟಿಲ್ಲ ; ತನ್ನದೇ ಆದ, ತಾನೇ ಕಲ್ಪಿಸಿಕೊಂಡ ದೇವತೆಗಳಲ್ಲಿ ನಂಬಿಕೆಯಿಟ್ಟಿದ್ದಾನೆ.

ಮೊದಲನೆಯ ಆರೋಪವನ್ನು ಸ್ವಲ್ಪ ಯೋಚಿಸಿ ನೋಡಿದರೆ ಹುರುಳಿಲ್ಲದ್ದು ಎಂದು ತೋರದೆ ಇರದು. ಕಣ್ಣು ಮುಚ್ಚಿಕೊಂಡು ಸಂಪ್ರದಾಯದ ಹಾದಿಯನ್ನು ತುಳಿಯುತ್ತಿದ್ದ ಯುವಜನರಲ್ಲಿ ವೈಚಾರಿಕ ಕ್ರಾಂತಿಯನ್ನುಂಟುಮಾಡಿದ್ದು ಅಜ್ಞಾನಿಯಾಗಿರಲು ಯಾವನಿಗೂ ಹಕ್ಕಿಲ್ಲ ಎಂದು ಬೋಧಿಸಿದ್ದು ಅವರನ್ನು ದುರ್ಮಾರ್ಗಕ್ಕೆ ಎಳೆದಂತಾಗುವುದಿಲ್ಲ. ಒಬ್ಬ ಮತ್ತೊಬ್ಬನನ್ನು ಮೊದಲು ದುರ್ಮಾರ್ಗಕ್ಕೆ ಎಳೆಯಬೇಕಾದರೆ ಮೊದಲನೆಯವನು ದುರ್ಮಾರ್ಗಿಯೂ, ಅನೀತಿವಂತನು ಆಗಿರಬೇಕು. ಆದರೆ ಸಾಕ್ರಟೀಸ್ ಸದ್ಗುಣಿ, ಸದಾಚಾರ ಸಂಪನ್ನ. ಕನಸಿನಲ್ಲಿಯೂ ಮತ್ತೊಬ್ಬರಿಗೆ ಕೇಡನ್ನು ಮಾಡದವನೂ "ಸಾವು ಬಂದರೆ ಬರಲಿ, ಅಧರ್ಮವನ್ನಾಚರಿಸುವುದಿಲ್ಲ" ಎಂದು ಹೇಳುವ ಧೀರ, ತನ್ನ ಶಿಷ್ಯರು ದುರಾಚಾರಿಗಳಾದರೆ ಅವನ್ನು ನಿರ್ದಾಕ್ಷಿಣ್ಯವಾಗಿ ಎತ್ತಿ ತೋರಿಸಿ ಸನ್ಮಾರ್ಗದಲ್ಲಿ ನಡೆಯುವಂತೆ ಪ್ರಭಾವ ಬೀರುತ್ತಿದ್ದವನು. ನೈತಿಕ ಬಲದ ಆಧ್ಯಾತ್ಮಶಕ್ತಿಯ ಸ್ಫೂರ್ತಿಯಾಗಿದ್ದನು. ಅಂಥವನು ಯುವಜನತೆಯನ್ನು ದುರ್ಮಾರ್ಗಕ್ಕೆ ಎಳೆಯುತ್ತಿದ್ದನೆಂಬುದು ಅರ್ಥವಿಲ್ಲದ ಪ್ರಲಾಪ. ಅದು ಮಿಥ್ಯಾರೋಪವೇ ಸರಿ. ಅವನ ಮಾತುಗಳಲ್ಲೇ ಹೇಳುವುದಾದರೆ :— "ನಾನು ನನ್ನ ನೆರೆಯುವನನ್ನು ಕೆಟ್ಟದಾರಿಗೆ ಎಳೆದರೆ ನಾಳೆ ಅವನು ನನಗೇ ಕೇಡನ್ನು ಬಗೆಯುತ್ತಾನೆ ಎನ್ನುವುದನ್ನು ತಿಳಿದು ತಿಳಿದೂ ನಾನು ಅವನನ್ನು ಹಾಗೆ ಕೆಡಿಸುತ್ತೇನೆಯೆ? ನಿನ್ನ

(ಮೆಲಿಟಸ್) ಮಾತಿನಲ್ಲಿ ನನಗಾಗಲೀ ಇತರರಿಗಾಗಲಿ ಎಂದಿಗೂ ನಂಬಿಕೆ ಹುಟ್ಟ ಲಾರದು."2

ಇನ್ನು ಎರಡನೆಯ ದೋಷವನ್ನು ಕುರಿತು ವಿವೇಚಿಸಬಹುದು. ಈ ಆರೋಪ ತಪ್ಪುಗ್ರಹಿಕೆ ಎಂದೇ ಹೇಳಬೇಕು. ಪ್ರತಿಯೊಂದರಲ್ಲೂ ದೈವೀಶಕ್ತಿಯ ಕೈವಾಡವಿದೆ ಯೆಂದು ಸಾಕ್ರಟೀಸ್ ದೃಢವಾಗಿ ನಂಬಿದ್ದನು. ದೇವರು ಎಲ್ಲರ ಪ್ರೇರಕ ಶಕ್ತಿ ಎಂದು ಸಾಕ್ಷಾತ್ಕರಿಸಿಕೊಂಡಿದ್ದವನು. ಹೀಗೆ ಸಾಕ್ರಟೀಸ್ ದೈವಾಸ್ತಿಕ್ಯವಾದಿ ; ದೈವಾಸ್ತಿಕ್ಯ ವಾದದ ಸಾರವನ್ನು ಚೆನ್ನಾಗಿ ಮನಗಂಡಿದ್ದನು. ಅವನು ದೇವತಾಚರಣೆಗೆ ಸಂಬಂಧಿಸಿದ ಧ್ಯಾನ ಮುಂತಾದ ಧರ್ಮಾಚರಣೆಗಳನ್ನು ಚಾಚೂ ತಪ್ಪದೆ ಅನುಸರಿಸುತ್ತಿದ್ದನೆಂದು ಅವನ ಶಿಷ್ಯರಾದ ಕ್ಸೆನೋಫೊನ್, ಪ್ಲೇಟೋ ಹೇಳಿದ್ದಾರೆ. "ನಿಜವಾಗಿಯೂ ನನಗೆ ದೇವರಲ್ಲಿ ನಂಬಿಕೆಯಿದೆ; ನನ್ನನ್ನು ದೂರುವವರಿಗೆ ಇರುವುದಕ್ಕಿಂತಲೂ ಉತ್ತಮ ತರದ ನಂಬಿಕೆಯಿದೆ"3 ಎಂದು ತಾನೇ ಸುಸ್ಪಷ್ಟವಾಗಿ ಹೇಳಿದ್ದಾನೆ.

ಸಾಕ್ರಟೀಸ್ ತತ್ವಜಿಜ್ಞಾಸುವಾದುದರಿಂದ ಕೆಲವು ಮತಾವಲಂಬಿಗಳು ನಂಬುವ ಮಾನವ ರೂಪದ, ಮಾನವರಂತೆ ಸಣ್ಣ ಪುಟ್ಟ ಕಾರಣಗಳಿಗೆ ಕಲಹವಾಡುವ, ಕಾಮ ಕ್ರೋಧಾದಿ ಅರಿಷಡ್ವರ್ಗಗಳನ್ನು ಪ್ರದರ್ಶಿಸುವ, ಪೌರಾಣಿಕ ಕಾಲ್ಪನಿಕ ದೇವತೆಗಳನ್ನು ನಂಬದಿರಬಹುದು. ಅವನ ಮಾತುಗಳನ್ನೇ ಉದ್ಧರಿಸುವುದಾದರೆ : "ಇವನ (ಮೆಲಿ ಟಸ್‌ನ) ಮಾತನ್ನು ಕೇಳಿದರೆ 'ಸಾಕ್ರಟೀಸ್ ದೈವಭಕ್ತ ; ಆದರೆ ದೇವರಲ್ಲಿ ನಂಬಿಕೆ ಯಿಲ್ಲದವನು"4 ಎಂದು ಹೇಳಿದಂತಿದೆ. ಇನ್ನೂ ಮುಂದುವರಿದು ಹೀಗೆ ಹೇಳು ತ್ತಾನೆ :"....ದೈವಿಕವಾದ ಶಕ್ತಿಗಳೂ ವಸ್ತುಗಳೂ ಇರುವುವೆಂದು ನಂಬುವವನೇ ದೇವತೆ ಗಳು ಇಲ್ಲವೆಂದೂ ನಂಬುವುದು ಅಸಾಧ್ಯ."5 ಹೀಗೆ ಎರಡನೆಯ ಆರೋಪವೂ ಆಧಾರ ರಹಿತವಾದುದೆಂದು ಕಂಡುಬರುವುದು. ಈ ದೋಷಾರೋಪಣೆಗಳು ಹುರುಳಿಲ್ಲದವು ಗಳೆಂದೂ, ಮಿಥ್ಯಾರೋಪಗಳೆಂದೂ ಪ್ಲೇಟೋ ಬರೆದ 'ಸಮರ್ಥನೆ' (Apology) ಎಂಬ ಸಂವಾದದಲ್ಲಿ ಮುಖ್ಯ ಪಾತ್ರಧಾರಿಯಾದ ಸಾಕ್ರಟೀಸ್ ತರ್ಕ ನ್ಯಾಯಗಳಿಂದ ಸಮರ್ಥಿಸಿಕೊಂಡಿದ್ದಾನೆ.

ಆದರೂ ಸಾಕ್ರಟೀಸನನ್ನು ಸೋಫಿಸ್ಟನೆಂದೇ ತಪ್ಪಾಗಿ ತಿಳಿದು ಹಾಗೂ ಅವನ 'ಕಡಿದು ಎಚ್ಚರಿಸಿ ದೋಷಗಳನ್ನು ತೋರಿಸುವ' ಕಾಟದಿಂದ 'ಹೇಗಾದರೂ' ತಪ್ಪಿಸಿ ಕೊಳ್ಳಬೇಕೆಂಬ ತವಕದಿಂದ ಅವನನ್ನು ತಪ್ಪಿತಸ್ಥನೆಂದು ಬಹುಮತದಿಂದ ನಿರ್ಧರಿಸಿ ಮರಣದಂಡನೆಯನ್ನು ವಿಧಿಸಿದರು.

ಸಾಕ್ರಟೀಸನು ಮರಣದಂಡನೆಯನ್ನು ತಪ್ಪಿಸಿಕೊಳ್ಳಲು ಯಾವುದೇ ವಿಧದಲ್ಲೂ ಸ್ವಲ್ಪವೂ ಪ್ರಯತ್ನಿಸುವುದಿಲ್ಲ. ಅಂದಿನ ಪದ್ಧತಿಯಂತೆ ಅವನು ನ್ಯಾಯಾಧೀಶರು ಗಳನ್ನು ಇಂದ್ರಚಂದ್ರರೆಂದು ಹೊಗಳಲಿಲ್ಲ. ಅಥವಾ ತನ್ನ ಹೆಂಡತಿ ಮಕ್ಕಳನ್ನು ನ್ಯಾಯಾಸ್ಥಾನಕ್ಕೆ ಕರೆದು ತಂದು ನ್ಯಾಯಾಧೀಶರಿಗೆ ಮರುಕ ಉಂಟಾಗುವಂತೆ ಮಾಡಿ ಮರಣದಂಡನೆಯ ಬದಲು ಲಘುತರವಾದ ಗಡೀಪಾರು ಶಿಕ್ಷೆಗೆ ಅವರನ್ನು ಒಪ್ಪಿಸಿ

ಜೀವನ ಉಳಿಸಿಕೊಳ್ಳಬಹುದಾಗಿತ್ತು. ಸಾಕ್ರೆಟೀಸ್ ಅಂಥ ಪ್ರಯತ್ನಗಳ ಔಚಿತ್ಯವನ್ನು ಪ್ರಶ್ನಿಸುತ್ತಾನೆ. ತಾನು ಗಡೀಪಾರು ಶಿಕ್ಷೆಗೆ ಒಪ್ಪಿದ್ದರೆ ತಪ್ಪಿತಸ್ಥನೆಂದು ತಾನೇ ಒಪ್ಪಿಕೊಂಡಂತಾಗುತ್ತಿತ್ತು. ಇದು ತಾನು ನಿರ್ದೋಷಿಯೆಂದು ಸಾಬೀತುಪಡಿಸಲು ಆಗುತ್ತಿರಲಿಲ್ಲ. ಅವನು ನ್ಯಾಯಾಧೀಶರ ಕರುಣೆಯನ್ನು ಬೇಡದಿದ್ದರೆ 'ನ್ಯಾಯ' ವನ್ನು ಕುರಿತ ಅವನ ಅಚಲ ನಿಲುವೇ ಕಾರಣ ; "ನ್ಯಾಯಾಧಿಪತಿ ಇರುವುದು ತೀರ್ಪು ಕೊಡುವುದಕ್ಕೆ ; ಬೇಡಿದವರ ಕೋರಿಕೆಯನ್ನು ಸಲ್ಲಿಸುವುದಕ್ಕಲ್ಲ. ಆತನು ಶಾಸನಕ್ಕನು ಸಾರವಾಗಿ ತೀರ್ಪು ಕೊಡುತ್ತೇನೆಂದು ಪ್ರಮಾಣ ಮಾಡಿರುತ್ತಾನೆ ; ಇಚ್ಛೆ ಬಂದಾಗ ದಯೆ ತೋರಿಸುತ್ತೇನೆಂದಲ್ಲ."6 ಸಾವಿಗೆ ಹೆದರಿ ಗೋಳಿಡುವುದು ಹೇಡಿಯ ಲಕ್ಷಣವೆಂದು ಅವನು ಬಗೆದಿದ್ದನು. ಅವನು ಸಕಲವನ್ನೂ ವಿಚಾರವಿಮರ್ಶೆಗೆ ಒಳಪಡಿಸಿ ತಿಳಿಯ ಬೇಕೆಂಬ ತನ್ನ ಉಪದೇಶ ನಿರ್ದೋಷವಾದುದೆಂದು ನ್ಯಾಯಾಸ್ಥಾನದಲ್ಲಿ ಸಾರುತ್ತಾನೆ: "ಆದರೆ ನಾನು ಹತ್ತು ಸಲ ಮರಣ ಯಾತನೆಯನ್ನು ಅನುಭವಿಸಬೇಕಾದರೂ ನನ್ನ ನಡತೆಯನ್ನೇನೂ ಬದಲಾಯಿಸುವುದಿಲ್ಲವೆಂದು ಮಾತ್ರ ತಿಳಿಯಿರಿ."7 ನ್ಯಾಯಾಸ್ಥಾನ ವನ್ನು ಬಿಟ್ಟು ಹೊರಡುವಾಗ ಅವನಾಡಿದ ಮಾತುಗಳು ಗಮನಾರ್ಹ: "ನಾನು ಸಾಯುವುದಕ್ಕೆ ಹೋಗುತ್ತೇನೆ ; ನೀವು ಬದುಕಿ ಬಾಳಲು ಹೋಗುತ್ತೀರಿ. ಇವೆರಡ ರಲ್ಲಿ ಯಾವುದು ಉತ್ತಮ ಸ್ಥಿತಿಯೋ ಭಗವಂತನೊಬ್ಬನಿಗೇ ಗೊತ್ತು."8

೭

ಸಾಕ್ರೆಟೀಸನ ವಿಚಾರಣೆಯಾದ ಮೇಲೆ ಒಂದು ತಿಂಗಳು ಸೆರೆಮನೆಯಲ್ಲಿರಿಸಿ ಆ ಅವಧಿಯ ಅನಂತರ ಅವನಿಗೆ ವಿಷಪಾನ ಮಾಡಿಸುವುದು ಎಂದು ತೀರ್ಮಾನಿಸಲಾಗಿತ್ತು. ಸೆರೆಮನೆಯಲ್ಲಿದ್ದ ಸಾಕ್ರೆಟೀಸನ ಈ ಒಂದು ತಿಂಗಳ ಅವಧಿಯಲ್ಲಿ ತಮಗೋಸ್ಕರವಾಗಿ ತಪ್ಪಿಸಿಕೊಂಡು ಹೋಗಿ ಜೀವ ಉಳಿಸಿಕೊಳ್ಳಬೇಕೆಂದೂ, ಅದಕ್ಕೆ ಎಲ್ಲಾ ತಯಾರಿ ಯನ್ನು ಮಾಡಲು ತಾವು ಸಿದ್ಧರಾಗಿರುವುದಾಗಿ ಅವನ ಶಿಷ್ಯರು ಕಳಕಳಿಯಿಂದ ಪ್ರಾರ್ಥಿ ಸಿದರೆಂದು ನಾವು 'ಕ್ರೈಟೋ ಸಂವಾದ'ದಿಂದ ತಿಳಿಯಬಹುದು. ಸಾಕ್ರೆಟೀಸನು ಈ ಅಭಿಪ್ರಾಯವನ್ನು ಒಪ್ಪಿಕೊಳ್ಳುವುದಿಲ್ಲ. ಶಿಷ್ಯರ ಪ್ರಾರ್ಥನೆಗೆ ಅವನು ಕೊಡುವ ಉತ್ತರ ಅವನ ದೇಶ ಪ್ರೇಮವನ್ನೂ, ದೇಶದ ಕಾನೂನು ಕಟ್ಟಳೆಗಳನ್ನು ಯಾವ ಪ್ರಜೆಯೂ ಯಾವ ಕಾರಣಕ್ಕೂ ಎಂದಿಗೂ ಉಲ್ಲಂಘಿಸಬಾರದೆಂಬ ಪೌರಪ್ರಜ್ಞೆ ಮತ್ತು ಪೌರ ಶಿಸ್ತುಗಳನ್ನು ಧ್ವನಿಸುತ್ತದೆ. ದೇಶದ ಪ್ರಜೆಯಾಗಿ ತನ್ನ ಕರ್ತವ್ಯ ಅದರ ಕಾನೂನುಗಳನ್ನು ಚಾಚೂ ತಪ್ಪದೆ ಪರಿಪಾಲಿಸುವುದು. ಸೆರೆಮನೆಯಿಂದ ತಪ್ಪಿಸಿ ಕೊಂಡು ಹೋಗುವುದೆಂದರೆ ದೇಶದ ಕಾಯಿದೆಗಳಿಗೆ ಅನಾದರ, ಅಗೌರವ ಸೂಚಿಸಿ ದಂತೆ. ಪ್ರಜೆ ಹಾಗೆಂದಿಗೂ ಮಾಡಬಾರದು. ವ್ಯಕ್ತಿ ತನ್ನ ಸುಖಕ್ಕೋಸ್ಕರ ದೇಶದ ತೀರ್ಪಿಗೆ ವಿರುದ್ಧವಾಗಿ ನಡೆಯಲಾಗದು ಎಂದು ಅವನ ಮನವರಿಕೆಯಾಗಿತ್ತು. "....ನಾನು ಮರಣಕ್ಕೆ ಎಳ್ಳಷ್ಟೂ ಅಂಜುವವನಲ್ಲ, ಧರ್ಮಕ್ಕೂ ಸತ್ಯಕ್ಕೂ ವಿರೋಧವಾಗಿ ನಡೆಯಲು ಮಾತ್ರ ಅಂಜುವೆನು ..."9

"ದೇವತೆಗಳ ಮತ್ತು ಪ್ರಾಜ್ಞರ ದೃಷ್ಟಿಯಲ್ಲಿ ಮಾತೃಭೂಮಿ ತಂದೆತಾಯಿಗಳಿಗಿಂತಲೂ ಪಿತೃಗಳಿಗಿಂತಲೂ ಹೆಚ್ಚು ಮಹಿಮೆಯುಳ್ಳದ್ದು, ಪವಿತ್ರವಾದದ್ದು, ದೇವತಾಸ್ವರೂಪವುಳ್ಳದು."[10] ಊರಿಂದ ಊರಿಗೆ, ಒಂದೂರಿನಿಂದ ಓಡಿಹೋದರೆ ಮತ್ತೊಂದು ಊರಿಗೆ ಅಲೆಯುತ್ತಾ, ಕಾಲ ಹಾಕುವ ಜೀವನ ಜೀವನವೇ ಅಲ್ಲ ಎಂದು ಅವನು ಅಭಿಪ್ರಾಯಪಡುತ್ತಾನೆ.

ಸಾಕ್ರಟೀಸನಿಗೆ ವಿಷಪಾನ ಮಾಡಿಸುವ ದಿನವೂ ಬಂದಿತು. ಸಾಕ್ರಟೀಸನಲ್ಲಿ ದುಃಖವಾಗಲೀ ಆತಂಕವಾಗಲೀ ಏನೊಂದು ಬದಲಾವಣೆಯಾಗಲೀ ಇಲ್ಲ. ಅವನು ಅಂದಿನ ಸಾಕ್ರಟೀಸೇ! ಮರಣದ ದಿನವೂ ಶಿಷ್ಯರೊಡನೆ ತತ್ವಜಿಜ್ಞಾಸೆಯಲ್ಲಿ ತೊಡಗಿದ್ದ! ಅವನು ಶಿಷ್ಯ ವತ್ಸಲ. ಅವರ ಅಭಿಪ್ರಾಯಗಳನ್ನು ಮೃದು ಸ್ವಭಾವದಿಂದಲೂ, ಮರ್ಯಾದೆಯಿಂದಲೂ ತಾಳ್ಮೆಯಿಂದಲೂ ಕೇಳುತ್ತಿದ್ದ. ಫೀಡೋವಿನ ತಲೆಗೂದಲಿನಲ್ಲಿ ಕೈಯಾಡಿಸುತ್ತಾ ಅವನೊಡನೆ ಸಂಭಾಷಣೆ ಮಾಡುವ ಚಿತ್ರ ಶಿಷ್ಯರಲ್ಲಿದ್ದ ಅವನ ಪಿತೃ–ಮಾತೃಪ್ರೇಮವನ್ನು ಹೊರಸೂಸುತ್ತದೆ. ಕೊನೆಯ ಬಾರಿ ನೋಡಲು ಬಂದಿದ್ದ ಹೆಂಡತಿ ಮಕ್ಕಳನ್ನೂ ಸ್ನೇಹಿತರನ್ನೂ ಸಂತೋಷದಿಂದ ಬೀಳ್ಕೊಂಡನು. ಹೆಣ ತೊಳೆಯುವ ಕಷ್ಟವನ್ನು ಹೆಂಗಸರಿಗೇಕೆ ಕೊಡಬೇಕೆಂದು, ವಿಷಪಾನ ಮಾಡುವ ಮೊದಲು, ತಾನೇ ಸ್ನಾನ ಮಾಡಿ ಬಂದನು. ಸ್ವಲ್ಪ ಹೊತ್ತಾದ ಮೇಲೆ ಸೆರೆಮನೆಯ ಕಾವಲುಗಾರನು ಬಂದು ನಿಂತುಕೊಂಡು ಹೇಳುವ ಮಾತುಗಳು ಸಾಕ್ರಟೀಸನ ಹೃದಯ ವೈಶಾಲ್ಯವನ್ನೂ, ಸಭ್ಯತೆ ಸೌಹಾರ್ದತೆಯನ್ನೂ, ಘನವ್ಯಕ್ತಿತ್ವವನ್ನೂ ತಿಳಿಸುತ್ತವೆ: "ಸಾಕ್ರಟೀಸ್, ಇದುವರೆಗೆ ಈ ಸ್ಥಳಕ್ಕೆ ಬಂದವರಲ್ಲಿ ನಿನ್ನಷ್ಟು ಮೃದು ಸ್ವಭಾವದವರೂ, ಒಳ್ಳೆಯವರೂ ಘನತೆಯುಳ್ಳವರೂ ಮತ್ತೊಬ್ಬರಿಲ್ಲ. ಅಧಿಕಾರಿಗಳ ಅಪ್ಪಣೆಯ ಪ್ರಕಾರ ನಾನು ಅವರಿಗೆ ವಿಷ ಕುಡಿಯಬೇಕೆಂದು ಹೇಳಿದರೆ, ಅವರು ನನ್ನ ಮೇಲೆ ರೇಗಿಬಿದ್ದು ಶಪಿಸುತ್ತಿದ್ದರು. ಆದರೆ ನೀನು ನನ್ನ ಮೇಲೆ ಕೋಪಿಸುವುದಿಲ್ಲವೆಂದು ನಾನು ಬಲ್ಲೆ. ಈ ವಿಷಯದಲ್ಲಿ ತಪ್ಪು ಇತರರದೇ ಹೊರತು ನನ್ನದಲ್ಲವೆಂದು ನಿನಗೆ ತಿಳಿದೇ ಇದೆ. ಅವಶ್ಯಕವಾದುದನ್ನು ಆದಷ್ಟೂ ಶಾಂತಚಿತ್ತವಾಗಿ ಅನುಭವಿಸಲು ಯತ್ನಿಸು. ನಿನಗೆ ಒಳ್ಳೆಯದಾಗಲಿ. ನಾನು ಬಂದಿರುವ ಕೆಲಸವೇನೆಂದು ನಿನಗೇ ಗೊತ್ತೇ ಇದೆ"[11] ಎಂದು ಕಣ್ಣಲ್ಲಿ ನೀರು ಹಾಕಿಕೊಂಡನು. ಸಾಕ್ರಟೀಸನು ಅವನಿಗೆ ಶುಭವನ್ನು ಹಾರೈಸಿ ಹಾಗೆಯೇ ಮಾಡುವುದಾಗಿ ಹೇಳಿದನು.

ಸೇವಕನು ತಂದುಕೊಟ್ಟ ವಿಷದ ಬಟ್ಟಲನ್ನು ರಾಗ–ದ್ವೇಷ ರಹಿತನಾಗಿ ನಿರ್ವಿಕಾರ ಚಿತ್ತದಿಂದ ಅಮೃತರಸಪಾನವೇನೋ ಎಂಬಂತೆ ಸಾಕ್ರಟೀಸ್ ಗಟಗಟನೆ ಕುಡಿದುಬಿಟ್ಟನು. ಸೇವಕನು ಸಾಕ್ರಟೀಸನನ್ನು ಕುರಿತು: "ನೀನು ನಿನ್ನ ಕಾಲು ಭಾರವಾಗುವವರೆಗೂ ತಿರುಗಾಡುತ್ತಿದ್ದರೆ ಸಾಕು; ಅನಂತರ ಮಲಗಿಕೊಂಡರೆ ವಿಷ ತನ್ನ ಕೆಲಸವನ್ನು ಮಾಡುತ್ತದೆ"[12] ಎಂದನು.

ಅದುವರೆಗೂ ಹೇಗೋ ದುಃಖವನ್ನು ತಡೆಹಿಡಿದಿದ್ದ ಸಾಕ್ರಟೀಸನ ಶಿಷ್ಯರ ಕಣ್ಣುಗಳಲ್ಲಿ ನೀರು ಧಾರಾಕಾರವಾಗಿ ಹರಿಯಿತು. ಸಾಕ್ರಟೀಸನು ಶಾಂತಿಯನ್ನು, ನೀರವತೆಯನ್ನೂ ಧೈರ್ಯವನ್ನೂ ತಂದುಕೊಳ್ಳಬೇಕೆಂದು ತನ್ನ ಶಿಷ್ಯರಿಗೆ ವಿನಂತಿಸಿಕೊಂಡನು. ಅಷ್ಟು ಹೊತ್ತಿಗೆ ಆಗಲೇ ಸೊಂಟದವರೆಗೆ ತಣ್ಣಗಾಗಿತ್ತು. ಅವನಾಡಿದ ಕೊನೆಯ ಮಾತುಗಳು ಇಷ್ಟು: "ಕ್ರೈಟೋ, ನಾನು ಈಸ್ಕ್ಯುಲಿಪಿಯುಸ್ಸಿಗೆ ಒಂದು ಹುಂಜವನ್ನು ಸಲ್ಲಿಸಬೇಕಾಗಿತ್ತು. ದಯವಿಟ್ಟು ಅದನ್ನು ಮರೆಯದ ಕೊಡು". ಕ್ರೈಟೋ ಕೊಡುವುದಾಗಿ ಹೇಳಿ 'ನೀನು ಹೇಳಬೇಕಾದುದು ಇನ್ನೇನಾದರೂ ಇದೆಯೆ' ? ಎಂದನು. ಈ ಪ್ರಶ್ನೆಗೆ ಉತ್ತರ ಬರಲಿಲ್ಲ........ ಅದಾದ ಒಂದೆರಡು ನಿಮಿಷಗಳ ಮೇಲೆ ಅವನ ದೃಷ್ಟಿ ನೆಟ್ಟು ಹೋಗಿದ್ದಿತು. ಕ್ರೈಟೋ ಅವನ ಬಾಯನ್ನು ಕಣ್ಣುಗಳನ್ನು ಮುಚ್ಚಿದನು[13]

ಇದು ಪ್ಲೇಟೋ ತನ್ನ ಜನಪ್ರಿಯ ಸಂವಾದದ 'ಫೀಡೋ'ದಲ್ಲಿ ಕೊಟ್ಟಿರುವ ಸಾಕ್ರಟೀಸನ ಅಂತಿಮ ಚಿತ್ರ.

ಸಾಕ್ರಟೀಸ್ ನಿಜವಾಗಿಯೂ ಬಹುದೊಡ್ಡ ವೀರ. ಇಲ್ಲಿ ವೀರನೆಂದರೆ ರಣದಲ್ಲಿ ನೂರಾಳುಗಳನ್ನು ಕೊಂದು ಗೆದ್ದವನಲ್ಲ ; ತನ್ನನ್ನು ತಾನು ಗೆದ್ದವನು ; ಹಿಂದೂ ಋಷಿಗಳು, ತೀರ್ಥಂಕರರು, ಬುದ್ಧ, ಏಸುಕ್ರಿಸ್ತ ಪೈಗಂಬರರಂತೆ. ಸುಮಾರು ಎರಡು ಸಾವಿರದ ಐನೂರು ವರ್ಷಗಳ ಹಿಂದೆಯೇ ಆಗಿಹೋದ ವಿಭೂತಿಪುರುಷ, ಸಂತವರೇಣ್ಯ. ಅವನ ಬೋಧನೆಯಲ್ಲಿ ಎಲ್ಲಾ ಜಾಗತಿಕ ಧರ್ಮಗಳ ಉಪದೇಶ ಸಾರವಿದೆ : "........ ಮತ್ತೊಬ್ಬನಿಗ ಕೆಡುಕು ಮಾಡುವುದು, ಅವನು ಮಾಡಿದ ಅಪಕಾರಕ್ಕೆ ಪ್ರತಿಯಾಗಿಯಾಗಲಿ, ಅಥವಾ ಅವನಿಂದಾಗಬಹುದಾದ ಅಪಾಯವನ್ನು ತಪ್ಪಿಸಿಕೊಳ್ಳುವುದಕ್ಕಾಗಲೀ ನಾವು ಅವನಿಗೆ ಅಪಕಾರ ಮಾಡುವುದು, ಹಗೆಗಳ ಮೇಲೆ ಹಗೆತನ ತೀರಿಸಿಕೊಳ್ಳುವುದು—ಇದು ಯಾವ ಸಂದರ್ಭದಲ್ಲಿಯೂ ಧರ್ಮವಲ್ಲ".[14]

ಜೂಲಿಯನ್ ಚಕ್ರವರ್ತಿಯ ಮಾತುಗಳನ್ನು ಉದ್ಧರಿಸಿ ಈ ಲೇಖನವನ್ನು ಮುಕ್ತಾಯ ಮಾಡಬಹುದು : "ಸಾಫ್ರೊನಿಸ್ಕಸ್ಸಿನ ಮಗನು (ಸಾಕ್ರಟೀಸ್) ಅಲೆಕ್ಸಾಂಡರನಿಗಿಂತ ಮಹತ್ವದ ಕೆಲಸಗಳನ್ನು ಮಾಡಿದ್ದಾನೆ .... ಅಲೆಕ್ಸಾಂಡರನ ವಿಜಯದಿಂದ ಯಾರಿಗೆ ಮೋಕ್ಷ ದೊರೆತಿದೆ ?........ಆದರೆ ಈಗ ತತ್ವಜ್ಞಾನದಿಂದ ಮೋಕ್ಷವನ್ನು ಪಡೆದಿರುವವರೆಲ್ಲರೂ ಸಾಕ್ರಟೀಸ್‌ನ ಋಣಿಗಳು."[15]

ಒಟ್ಟಿನಲ್ಲಿ ಸಾಕ್ರಟೀಸ್ ಪಾಶ್ಚಾತ್ಯ ತಾತ್ವಿಕ ಲೋಕದಲ್ಲಿ ಶಾಶ್ವತವಾಗಿ ಬೆಳಗುವ ಧ್ರುವತಾರೆಯಾಗಿದ್ದಾನೆ.

ಅಡಿ ಟಿಪ್ಪಣಿಗಳು

1. ಕೇನೋಪನಿಷತ್ II. 3
2. ನೋಡಿ : ಸಾಕ್ರಟೀಸನ ಕೊನೆಯ ದಿನಗಳು. ಅನುವಾದ : ಎ. ಎನ್. ಮೂರ್ತಿರಾವ್, (ಮೈಸೂರು ವಿಶ್ವವಿದ್ಯಾನಿಲಯ, 1958) ಪು. 47–48.
3. ಅದೇ ಪು. 63
4. ,, ,, 49
5. ,, ,, 51
6. ,, ,, 63
7. ,, ,, 55
8. ,, ,, 73
9. ,, ,, 58–59 ; ಪು. 93
10. ,, ,, 89
11. ,, ,, 204
12. ,, ,, 206
13. ,, ,, 207
14. ,, ,, 86
15. ಅದೇ, ಅವತರಣಿಕೆ, ಪು. xxvi

ಪಿ. ಆರ್. ತಿಪ್ಪೇಸ್ವಾಮಿ

ಕಲಂಕಾರಿ ಕಲಾವಿದ ಕೋಡೂರು ರಾಮಮೂರ್ತಿ

ಪ್ರಾಚೀನ ದೇಶೀಯ ಸಸ್ಯವರ್ಣದ ಸಮಕಾಲೀನ ಚಿತ್ರಗಳನ್ನು ನೋಡಲು ನಮಗೆ ಯಾವಾಗಲೂ ಅವಕಾಶ ದೊರೆಯುವುದಿಲ್ಲ. ಆದರೆ ಅಂಥ ಒಂದು ಸದವಕಾಶವು 1965 ರ ಜನವರಿಯಲ್ಲಿ 'ಕೋರಾ' ಅವರಿಂದ ದೆಹಲಿಯ ಶ್ರೀಧರಾಣಿ ಗ್ಯಾಲರಿಯಲ್ಲಿ ದೊರೆಯಿತು.

'ಕೋರಾ' ಎಂಬ ಕಾವ್ಯನಾಮದಿಂದ ಮದರಾಸಿನ ಕೋಡೂರು ರಾಮಮೂರ್ತಿಯವರು ಕಲಂಕಾರಿ ಕಲಾಶೈಲಿಯಲ್ಲಿ ಭಾರತದಲ್ಲೇ ಹೆಸರಾಗಿದ್ದರು. 'ಕಲಂಕಾರಿ' ಎಂಬುದು ಪ್ರಾಚೀನವಾದ ಜನಪದ ಕಲೆ. ಚಿತ್ರಗಳನ್ನು ಲೇಖಣಿ (ಕಲಂ) ಸಹಾಯದಿಂದ ಬರೆ (ಕಾರಿ) ಯುವುದನ್ನು 'ಕಲಂಕಾರಿ ಪದ್ಧತಿ' ಎಂದು ಕರೆಯಲಾಗಿದೆ. ಈ ಪದ್ಧತಿಯ ಒಳನೋಟ ಬಹು ಕುತೂಹಲಕಾರಿಯಾದುದು.

ರಚಿಸಬೇಕಾದ ಚಿತ್ರಕ್ಕೆ ಬಟ್ಟೆ, ಬಣ್ಣಗಳ ಸಿದ್ಧತೆಯನ್ನು ತಾವೇ ಮಾಡಿಕೊಳ್ಳುವುದೊಂದು ಈ ಕಲೆಯ ಮುಖ್ಯ ರಹಸ್ಯ. ಚಿತ್ರ ಬರೆಯಲು ಉಪಯೋಗಿಸುವ ಬಟ್ಟೆಯನ್ನು 'ಮೈಲಾಬಲಂ' ಎಂಬ ದ್ರವದಲ್ಲಿ ಮತ್ತೆಮತ್ತೆ ನೆನೆಹಾಕುವುದು, ಹಿಂಡುವುದು, ಬಿಸಿಲಿನ ತಾಪದಲ್ಲಿ ಮರಳ ಮೇಲೆ ಇಡುವುದು - ಹೀಗೆ ಮಾಡಿದ ಬಟ್ಟೆಯ ಮೇಲೆ ವರ್ಣಗಳನ್ನು ಎಮ್ಮೆಯ ಹಾಲಿನೊಂದಿಗೆ ಬೆರೆಸಿದ ದ್ರವರೂಪವೇ 'ಮೈಲಾಬಲಂ'.

ಕಲಂಕಾರಿಯ ಮುಖ್ಯ ಮೂಲವರ್ಣಗಳು ಕಪ್ಪು, ಕೆಂಪು, ಹಳದಿ ಮತ್ತು ನೀಲಿ. ಆಯಾ ವರ್ಣಗಳು ಬಟ್ಟೆಯ ಮೇಲೆ ಸ್ಥಿರವಾಗಿ ನಿಲ್ಲಲು ಸಹಾಯವಾಗುವಂತೆ ಪಟಿಕದ ರಸವನ್ನು ಉಪಯೋಗಿಸಲಾಗುತ್ತದೆ. ಶ್ರೀ 'ಕೋರಾ' ಅವರು ನನಗೆ ಕಲಂಕಾರಿ ತಂತ್ರವನ್ನು ವಿವರಿಸಿದಾಗ ಆಶ್ಚರ್ಯವಾಯಿತು. ನಮ್ಮ ಹಿಂದಿನವರು ಬಣ್ಣಗಳನ್ನು ತಯಾರಿಸಿಕೊಳ್ಳುವ ರೀತಿ, ಇವರಿಂದ ತಿಳಿದೆ. ತಾಟಬೆಲ್ಲ, ಕಬ್ಬಿಣದ ಚೂರುಗಳು ಮತ್ತು ನೀರು ಇವುಗಳ ಮಿಶ್ರಣದಿಂದ ಕಪ್ಪು ವರ್ಣವನ್ನು ದೊರಕಿಸಿಕೊಂಡು ಮೊದಲು ಚಿತ್ರದ ರೇಖೆಗಳನ್ನು ಬಿಡಿಸಿಕೊಳ್ಳುತ್ತಾರೆ. ಮಂಜಿಸ್ಟ (ಬೇರು), ಸುರುಳುಪಟ್ಟೆ (ಮರದ ತೊಗಟೆ), ತಾಮ್ರತೀಗ, ಪಟಿಜಲಗ ಮತ್ತು ನೀರು ಇವುಗಳ ಸಮ್ಮಿಶ್ರಣದಿಂದ ರಕ್ತ (ಕೆಂಪು) ವರ್ಣವನ್ನು ಪಡೆಯುತ್ತಾರೆ. ಕರಕ ಹೂ (ಅಳಲೆಕಾಯಿ] ಗಳಿಂದ

ಹಳದಿ ವರ್ಣವೂ ಮತ್ತು ಪೇಶಿಯ ನೀಲಿಯನ್ನು ಪಡೆಯುತ್ತಾರೆ. ಈ ಸಾಮಾನ್ಯ ಸಸ್ಯಮೂಲಿಕೆಗಳಿಂದಾದ ನಮ್ಮ ವರ್ಣಗಳು ಪ್ರಾಚೀನ ಕಲಾ ಸಂಪ್ರದಾಯವನ್ನು ಮೆರೆಯುತ್ತಿವೆ. ಇವುಗಳ ತಯಾರಿಕೆಯನ್ನು 'ಕೋರಾ' ಅವರಿಂದ ನಾನು ಗಮನಿಸಿದ್ದು ಇಂದಿಗೂ ನೆನಪಾಗುತ್ತದೆ.

'ಕೋರಾ' ಅವರ ಕೃತಿಗಳಲ್ಲಿ ನಾವು ಕಾಣುವುದು ಪ್ರಾದೇಶಿಕತೆಯ ಸಂಪ್ರದಾಯ ನಿಷ್ಠೆ. ಆಂಧ್ರದ ಕಾಪುಜನರಿಂದ ರಾಮಮೂರ್ತಿಯವರು ಈ ಅಪೂರ್ವ ಕಲಾತಂತ್ರವನ್ನು ಕರಗತವಾಡಿಕೊಂಡಿದ್ದಾರೆ. ರಾಮಾಯಣ, ಮಹಾಭಾರತ ಮುಂತಾದ ಪೌರಾಣಿಕ ಹಾಗೂ ಚಾರಿತ್ರಿಕ ಸನ್ನಿವೇಶಗಳನ್ನು ಚಿತ್ರಿಸಲು ತಮ್ಮ ಒಂದು ಕಲಾಶಾಲೆಯನ್ನು ಮದರಾಸಿನಲ್ಲಿ ತೆರೆದು 'ಕೋರಾ ಕಲಂಕಾರಿ' ಎಂದು ಹೆಸರಿಟ್ಟಿದ್ದರು.

ಪ್ರಾಚೀನ ಕಲಾ ಸಂಸ್ಕಾರದಿಂದ ಅವರು ತಮ್ಮಲ್ಲಡಗಿದ್ದ ಸುಪ್ತ ಪ್ರತಿಭೆಯನ್ನು ನೂತನ ಶೈಲಿಯಲ್ಲಿ ಹೊರಹೊಮ್ಮಿಸಿದ 26 ಕಲಾಕೃತಿಗಳನ್ನು ದೆಹಲಿಯಲ್ಲಿ ಪ್ರದರ್ಶಿಸಲಾಗಿತ್ತು. ನವರಸ ಭಾವಕ್ಕೆ ಸೇರಿದ ಕೃತಿಗಳಲ್ಲಿ 'ವಿರಹಿಣಿ', ನೆಹರೂ ಅಸ್ತಮಯ, ಮಯೂರ ತಾಂಡವ, ಶ್ರೀಮಂತಿನಿ, ಚಾಮುಂಡಿ ಸುಪ್ರಭಾತ ಬಹು ಜನಪ್ರಿಯತೆ ಗಳಿಸಿದ ಚಿತ್ರಗಳು.

ನೆಹರೂರವರ ದಹನಕ್ರಿಯೆಯ ಸುದ್ದಿಯನ್ನು ರಾಮಮೂರ್ತಿಗಳು ರೇಡಿಯೋವಿನಿಂದ ಕೇಳಿ ಆಗ ತಮ್ಮಲ್ಲಿ ಉಂಟಾದ ದುಃಖ ಭಾವೋದ್ರೇಕವನ್ನು ಚಿತ್ರದ ಮೂಲಕ ಹೊರಹೊಮ್ಮಿಸಿದ್ದರು. ಚಿತ್ರ ನೆಹರೂ ಅಸ್ತಮಯ–ಎಂಬುದು. ಅದು ಶೋಕರಸಕ್ಕೆ ಸೇರಿದ ಕೃತಿ. ಅಲ್ಲಿ ಕಲಾವಿದರ ಹೃದಯದ ಮೇರೆ ಆದ ಪ್ರತಿಕ್ರಿಯೆಯನ್ನು ಬಹಳ ಸೂಕ್ಷ್ಮವಾಗಿ ಬಹು ದಿಟ್ಟತನದಿಂದ ರಚಿಸಿದ್ದರು. ಅಲ್ಲಿ ಕುಂಚದ ಸೆಳೆತ ಮೆಚ್ಚುವಂತಿತ್ತು. ಚಿತ್ರದಲ್ಲಿ ದಹನಕ್ರಿಯೆಯನ್ನು ಈಕ್ಷಿಸುತ್ತಿರುವ ಲಕ್ಷೋಪಲಕ್ಷ ಜನರು, ಅವರ ಅಚಿ ಪ್ರಜ್ವಲಿಸಿ ಧಗಧಗಿಸುತ್ತಿರುವ ಚಿತೆ. ಚಿತೆಯ ಆ ಮಹಾಜ್ವಾಲೆ ಮುಗಿಲು ಮುಟ್ಟಿರುವುದು - ಎಲ್ಲವೂ ಸ್ವಾಭಾವಿಕವಾಗಿವೆ. ಹಳದಿ ಮಿಶ್ರಿತ ಕೆಂಬಣ್ಣದ ಪ್ರಚಂಡ ಜ್ವಾಲೆ ಆ ಜನರ ಹೃದಯವೇದನೆಯನ್ನು ಸಾಂಕೇತಿಕವಾಗಿ ಪರಿಣಮಿಸಿವೆ. 'ಕೋರಾ' ಅವರು ತಮ್ಮಲ್ಲಿ ಉಂಟಾದ ಭಾವನೆಯನ್ನು ಸಮಗ್ರ ಚಿತ್ರದಲ್ಲಿ ಅಮರಗೊಳಿಸಿದ್ದರು. ಈ ಕಲಾಕೃತಿ ಪ್ರತಿಯನ್ನು ಶ್ರೀಮತಿ ಇಂದಿರಾಗಾಂಧಿ ಅವರಿಗೆ ನೆನಪಿನ ಕಾಣಿಕೆಯಾಗಿ ಕಲಾವಿದರು ಸಮರ್ಪಿಸಿದ್ದಾರೆ.

ರಾಷ್ಟ್ರೀಯ ಪಕ್ಷಿಯಾದ ಮಯೂರದ ನೃತ್ಯವನ್ನು ಚಿತ್ರಿಸಿದ್ದಾರೆ. ಇಲ್ಲಿ ಮಯೂರ ನೃತ್ಯದಲ್ಲಿ ವೀರರಸಭಾವವನ್ನು ಹೊರಹೊಮ್ಮಿಸುವಲ್ಲಿ ಅವರು ಯಶಸ್ವಿಯಾಗಿದ್ದರು. ರಾಧಾಕೃಷ್ಣರ ರೂಪಚಿತ್ರ ಕೇವಲ ಮೂರು ವರ್ಣಗಳಲ್ಲಿ ಸುಂದರವಾಗಿ ಬಂದಿತ್ತು. ಈ ಕೃತಿಯ ಹೆಸರು 'ವೇದಾಂತಿ' ಎಂದಿದ್ದರೂ – ನೋಟಕರ ಬಾಯಿಂದ 'ರಾಧಾಕೃಷ್ಣ' ಎಂದು ಸಹಜವಾಗಿ ಹೊರಬರುತ್ತಿತ್ತು.

ವಿರಹಿಣಿ, ಶೃಂಗಾರಿಣಿ, ಮುಂಗಾರು ಮುಗಿಲು, ಚಾಮುಂಡಿ ಸುಪ್ರಭಾತ – ಮುಂತಾದ ಸುಂದರ ಕೃತಿಗಳನ್ನು ಹೆಸರಿಸಬಹುದಾಗಿತ್ತು.

ದೆಹಲಿಯ ಮಹಾನಗರದಲ್ಲಿ ಕಲೆಗೆ ಕಲಾವಿದರಿಗೆ ಕೊರತೆ ಇಲ್ಲ. ವಿಶ್ವದ ಪ್ರಮುಖ ರಸಿಕ ಜನ ಇಲ್ಲಿ ನೆಲೆಸಿದ್ದಾರೆ. ಕಲಾ ಪ್ರದರ್ಶನಗಳು ಮೇಲಿಂದಮೇಲೆ ಜರುಗುತ್ತಲೇ ಇರುತ್ತವೆ. ಕಲಾಪ್ರೇಮಿಗಳು ವಿಚಾರಧಾರೆಗೆ ಸದವಕಾಶವೂ ಆಗಿಂದಾಗ್ಯೆ ದೊರಕುತ್ತದೆ. ನವ್ಯ ಕಲಾ ಸಂಪ್ರದಾಯದ ಅಂದಿನ ಕಾಲದಲ್ಲಿ ಕೋಡೂರು ರಾಮಮೂರ್ತಿಗಳು ಮದರಾಸಿನಿಂದ ದೆಹಲಿಗೆ ಬಂದು ಅಲ್ಲಿ ತಮ್ಮ ಕೃತಿಗಳನ್ನು ಪ್ರದರ್ಶಿಸಿ ಜಯಗಳಿಸಿದುದು ಒಂದು ವಿಶೇಷವೆನ್ನಬೇಕು. ಅವರ ಕೃತಿಗಳಲ್ಲಿ ಪ್ರಾಚೀನ ಕಲಾ ವಸ್ತುನಿಷ್ಠೆಯ ತಳಹದಿಯ ಮೇಲೆ ನವ್ಯ ಕಲಾತಂತ್ರ ಮೆರೆದಿರುವುದು, ಸಮಕಾಲೀನ ಕಲಾರಂಗದಲ್ಲಿ ಕೋಡೂರು ರಾಮಮೂರ್ತಿಗಳು ಸ್ಥಿರವಾದ ಸ್ಥಾನವನ್ನು ಗಳಿಸಿಕೊಂಡುದು ಹೆಮ್ಮೆ ಎನಿಸಿತು

ಈ ಕಲಾ ಪ್ರದರ್ಶನ ರಾಮಮೂರ್ತಿಗಳಿಗೆ ಹೆಚ್ಚಿನ ಕೀರ್ತಿಯನ್ನು ಕೈತುಂಬ ಹಣವನ್ನು ದೊರಕಿಸಿಕೊಟ್ಟಿತು. ಈ ಕಲಾ ಪ್ರದರ್ಶನದ ಸಲುವಾಗಿ ರಾಮಮೂರ್ತಿಗಳು ನನ್ನನ್ನು ತಮ್ಮ ಜೊತೆಯಲ್ಲಿ ದೆಹಲಿಗೆ ಕರೆದುಕೊಂಡು ಹೋಗಿದ್ದರು. ಕಲಾವಿದ ಸೋದರ ಕಲಾವಿದರ ಬಗ್ಗೆ ಪ್ರೀತಿಯಿಂದ ನಡೆದುಕೊಳ್ಳುವುದು ಅಪರೂಪ. ಆದರೆ ರಾಮಮೂರ್ತಿಗಳು ನನ್ನನ್ನು ನೋಡಿಕೊಂಡ ರೀತಿ ಮರೆಯುವಂತಹದಲ್ಲ. ಸಂಪೂರ್ಣ ವೆಚ್ಚ ಅವರದೇ. ನನಗೆ ದೆಹಲಿಯನ್ನು ಅಲ್ಲಿನ ಕಲಾವಿದರನ್ನು ಕಲಾ ಪರಿಸರವನ್ನು ಪರಿಚಯ ಮಾಡಿಕೊಟ್ಟರು. ರಾಮಮೂರ್ತಿಗಳ ಕಲಾ ಪ್ರದರ್ಶನದ ವ್ಯವಸ್ಥೆ ಇವರ ಕೃತಿಗಳನ್ನು ವೀಕ್ಷಿಸಲು ಬಂದ ಖ್ಯಾತ ಕಲಾವಿದರ ಪರಿಚಯದ ಲಾಭ ನನಗಾಯಿತು. ಒಂದು ದಿನ ಖ್ಯಾತ ಕಲಾವಿದ ಎಫ್. ಎಂ. ಹುಸೇನರು ಬಂದರು. ಮೂರ್ತಿಯವರ ಕೃತಿಗಳನ್ನು ಬಹಳ ಗಮನವಿಟ್ಟು ನೋಡಿದರು. ನಾನು ಒಂದೊಂದು ಚಿತ್ರದ ವಿವರವನ್ನು ನೀಡಿದೆ. ಅವರು ಸಂತೋಷದ ಮಾತಾಡಿದರು. ಕೊಂಕುನುಡಿ ಅವರಿಂದ ಬರಲಿಲ್ಲ. ಫೈನ್....ವಂಡರ್‌ಫುಲ್.... ನೈಸ್ ಎಂಬ ಮೆಚ್ಚಿಗೆ ನುಡಿಗಳು ಅಲ್ಲಿಗೆ ಬರುವ ಕಲಾವಿದರಿಂದ ಕೇಳಿ ನನಗೆ ಸಂತೋಷವಾಯಿತು.

ದೆಹಲಿಯ ಈ ನಮ್ಮ ಕಲಾ ಯಾತ್ರೆಯಲ್ಲಾದ ಒಂದು ಅನುಭವ ಮೆಲುಕು ಹಾಕುವಂತಹದು. ಕೋಡೂರು ರಾಮಮೂರ್ತಿಯವರು ನಾನೂ ಸಸ್ಯಾಹಾರಿಗಳು. ರೈಲಿನಲ್ಲಿ ನಮ್ಮ ಪ್ರಯಾಣ. ರಾಮಮೂರ್ತಿಗಳಿಗೆ ಅಡಿಕೆ ಎಲೆ ತಂಬಾಕು ಎಂದರೆ ಪ್ರಾಣ. ಸದಾ ಬಾಯಲ್ಲಿ ಮೆಲುಕು ಹಾಕುತ್ತಿರಲೇಬೇಕು. ಪ್ರಮುಖ ಸ್ಟೇಷನ್ ಬಂದಾಗಲೆಲ್ಲಾ ರೈಲು ಡಬ್ಬಿಯಿಂದ ಇಳಿದು ಏನಾದರೂ ತಿನಿಸು ಇಲ್ಲವೆ ಹೊಸ ಹೊಸ ಪತ್ರಿಕೆಗಳನ್ನು ಕೊಂಡು ತರುವ ಹವ್ಯಾಸ ಇವರದಾಗಿತ್ತು. ಪ್ರಯಾಣದಲ್ಲಿ ಇವರ ಕಲಾನುಭವ ಕೇಳುವುದರಲ್ಲಿ ಕಾಲ ಕಳೆದದ್ದೇ ಗೊತ್ತಾಗುತ್ತಿರಲಿಲ್ಲ. ಇನ್ನೇನು ಆಗ್ರ ಸಮೀಪಿಸಿತು. ಮುಂಚೆಯೇ ಸಿಗದಿ ಮಾಡಿದಂತೆ ನಮಗೆ ಎರಡು (ಸಸ್ಯಾಹಾರಿಗಳ)

ಊಟದ ತಟ್ಟೆಗಳನ್ನು ನಮ್ಮ ಮುಂದೆ ಇರಿಸಲಾಯಿತು. ಮೂರ್ತಿಗಳು ಸಾರಿನ ಬಟ್ಟಲಿಗೆ ಕೈ ಹಾಕಿದರು. ಚೇಳು ಕಡಿದವರಂತೆ 'ಇದೇನಯ್ಯ ದರಿದ್ರಮುಂಡೇನಮಕ್ಕಳು' ಎಂದು ಗೊಣಗಿಕೊಳ್ಳುತ್ತ ತಮ್ಮ ಊಟದ ತಟ್ಟೆಯನ್ನು ದೂರಸರಿಸಿ ಸೋಪಿನಲ್ಲಿ ಕೈ ತೊಳೆದುಕೊಂಡು ಕುಳಿತರು. ಅವರಿಗೆ ಸಸ್ಯಾಹಾರ ಊಟದ ಬದಲು ಮಾಂಸದ ಸಾರಿನ ಊಟ ದೊರಕಿತ್ತು. ಕೈಗೆ ಮಾಂಸದ ತುಂಡು ತಾಕಿತ್ತು. ಮೂರ್ತಿಗಳಿಗೆ ಎಲ್ಲಿಲ್ಲದ ಕೋಪ ಸ್ಟೇಷನ್ ಹೋಟಲ್ ಸರ್ವರ್ ಮೇಲೆ. ಕಾರಣ "ಹಸಿವು ಒಂದು ಕಡೆ, ಜೀವನದಲ್ಲಿ ಎಂದೂ ಮುಟ್ಟದ ವಸ್ತು ಮುಟ್ಟಿದೆನಲ್ಲಾ" ಎಂಬುದು ಇನ್ನೊಂದು. ಅವರು ಆ ದಿನವೆಲ್ಲಾ ನೀರು ಸಹ ಕುಡಿಯದೆ ಉಪವಾಸ ಮಾಡಿದ ಕಹಿ ಅನುಭವ ನನ್ನ ಮನಸ್ಸಿನಲ್ಲಿ ಸದಾ ಹಸುರಾಗಿ ನಿಂತಿದೆ.

1966ರ ಮಾರ್ಚ್‌ನಲ್ಲಿ ಕೋಡೂರು ರಾಮಮೂರ್ತಿ ಅವರಿಂದ ಬೊಂಬಾಯಿಯ ಜಹಾಂಗೀರ್ ಆರ್ಟ್ ಗ್ಯಾಲರಿಯಲ್ಲಿ ಮತ್ತೊಂದು ಪ್ರದರ್ಶನ ನಡೆಯಿತು. ಜಹಂಗೀರ್ ಆರ್ಟ್ ಗ್ಯಾಲರಿ ಬೊಂಬಾಯಿಯ ಪ್ರಮುಖ ಪ್ರದೇಶದಲ್ಲಿದೆ. ಅದು ಆಧುನಿಕ ಗ್ಯಾಲರಿ ಎಂದು ಹೆಸರಾಗಿದೆ. ದಿನನಿತ್ಯ ಒಂದಲ್ಲ ಒಂದು ಕಲಾ ಪ್ರದರ್ಶನ ಅಲ್ಲಿ ಜರುಗುತ್ತಲೇ ಇರುತ್ತವೆ. ಪ್ರಸಿದ್ಧ ತಾಜ್ ಹೋಟೆಲ್ ಸಮೀಪದಲ್ಲಿರುವ ಆ ಗ್ಯಾಲರಿಗೆ ಅಲ್ಲಿ ಬಂದಿಳಿದಿರುವ ವಿದೇಶಿಯರೂ ಅಲ್ಲಿಯ ಪ್ರದರ್ಶನಗಳಿಗೆ ಬಂದು ಹೋಗುತ್ತಾರೆ. ಅಲ್ಲಿಯ ಎಡಭಾಗದ ಗ್ಯಾಲರಿಯ ಸಭಾಂಗಣದಲ್ಲಿ ಕೋಡೂರು ರಾಮಮೂರ್ತಿಗಳ 32 ಚಿತ್ರಗಳನ್ನು ಪ್ರದರ್ಶಿಸಲಾಗಿದ್ದಿತ್ತು. ಕಲಾ ಪ್ರದರ್ಶನದ ಆರಂಭೋತ್ಸವವನ್ನು ಪ್ರಿನ್ಸ್ ಆಫ್ ವೇಲ್ಸ್ ಮ್ಯೂಜಿಯಂ ಡೈರೆಕ್ಟರ್ ಡಾ|| ಮೋತಿಚಂದ್ರ ಅವರು ನೆರವೇರಿಸಿ ಭಾಷಣ ಮಾಡುತ್ತ ಕಲಂಕಾರಿ ಚಿತ್ರಕಲೆ ನಮ್ಮ ಪ್ರಾಚೀನತೆಯನ್ನು ವ್ಯಕ್ತಪಡಿಸುತ್ತಿವೆ ಎಂದೂ ಅದನ್ನ ಉಳಿಸಿಕೊಂಡು ಬೆಳೆಸಿಕೊಂಡು ಬರುವಲ್ಲಿ ರಾಮಮೂರ್ತಿಯವರು ಭಾರತದಲ್ಲಿ ಹೆಸರಾದ ವ್ಯಕ್ತಿಗಳೆಂದೂ ಅವರು ಪ್ರದರ್ಶಿಸಿದ ನವ್ಯತಂತ್ರದ ಕೃತಿಗಳು ಇಂದಿನ ಯುಗಧರ್ಮಕ್ಕೆ ಹೊಂದಿಕೊಂಡು ಅವರಿಗೆ ಕೀರ್ತಿ ತಂದಿವೆ ಎಂದೂ ನುಡಿದರು. ಅಂದು ರಾಮಮೂರ್ತಿಗಳ ಪರಿಚಯವನ್ನು ಮಾಡಿಕೊಡುವ ಸದವಕಾಶವೂ ನನಗೆ ದೊರೆತಿದ್ದಿತು. ಅವರ ಹಸ್ತಗುಣ ಒಳ್ಳೆಯದು. ಪ್ರದರ್ಶಿತ ಬಹುಪಾಲು ಚಿತ್ರಗಳು ಅಲ್ಲಿ ವಿಕ್ರಯವಾದವು.

'ಕೋರಾ' ಅವರ ಅಲ್ಲಿ ಪ್ರದರ್ಶಿತ ಕೃತಿಗಳಲ್ಲಿ ನಾವು ಕಾಣುವಂತಾದುದು ಪ್ರಾದೇಶಿಕತೆಯ ವೈಖರಿಯನ್ನು. ಆಂಧ್ರದ ಇವರ ನೂತನ ಶೈಲಿಯಲ್ಲಿ ಹೊರಹೊಮ್ಮಿಸಿದ 32 ಕಲಾಕೃತಿಗಳನ್ನು ಅಲ್ಲಿ ಪ್ರದರ್ಶಿಸಲಾಗಿದ್ದಿತು. 'ಬಾಪೂ ಅಸ್ತಮಯ' 'ಗೌರಮ್ಮ' (ಮೈಸೂರು ವನಿತೆ), 'ಮಯೂರ ತಾಂಡವ', ವಿರಹಿಣಿ, ಶ್ರೀಮಂತಿನಿ, ತಿರುಪತಿ ಬೆಟ್ಟ, ನೈಟ್‌ಕ್ಲಬ್ ಮುಂತಾದುವು ಜನಪ್ರಿಯತೆ ಗಳಿಸಿದ ಚಿತ್ರಗಳು.

'ಗೌರಮ್ಮ' ಎಂಬುದು 'ಮೈಸೂರು ವನಿತೆ'ಯ ಸಂಪ್ರದಾಯಶೀಲತೆಯನ್ನು ತೋರುವ ಆಕರ್ಷಕ ಚಿತ್ರವಾಗಿದೆ. ಇಲ್ಲಿಯ ವನಿತೆಯ ಮುಖ ಕೈಗಳಲ್ಲಿ ಬಳಸಿರುವ

ಹಳದಿ ಮಂಗಳಗೌರಿಯ ಬೆಡಗು ಬಿನ್ನಾಣಗಳನ್ನು ಸೂಚಿಸುತ್ತಿದೆ. ಈ ಕೃತಿಯನ್ನು 'ಗೌರಮ್ಮ' ಎಂದಿದ್ದರೂ ನೋಟಕರ ಬಾಯಿಂದ ಸಹಜವಾಗಿ ಆ ಹೆಸರು ಹೊರಬರುವಂತಿತ್ತು.

'ಮಿಥುನ', 'ವಿರಹಿಣಿ', 'ನೈಟ್‌ಕ್ಲಬ್'—ಈ ಕೃತಿಗಳಲ್ಲಿ ಕಂಡುಬರುವ ದೇಹ ಸೌಂದರ್ಯ ಸಹಜ ವರ್ಣಗಳಿಂದ ಕೂಡಿದ್ದು ಆಧುನಿಕ ರಸಿಕರನ್ನು ಸೆಳೆಯುವಲ್ಲಿ ಹೆಸರು ಗಳಿಸಿ ಬೊಂಬಾಯಿಯ ಯುವಕರ ಹೃದಯವನ್ನು ಸೂರೆ ಮಾಡಿದ್ದ ಕೃತಿಗಳೆನ್ನಬಹುದಿತ್ತು.

ಇವರ ಕೃತಿಗಳಲ್ಲಿ ಜಲವರ್ಣ ಬಳಸಲಾಗಿದ್ದರೂ ಎಲ್ಲವೂ ತೈಲವರ್ಣದಂತೆ ತೋರುತ್ತಿದ್ದವು. ನಮ್ಮ ಕಲಾ ಸಂಪ್ರದಾಯದ ಇಂದಿನ ಕಾಲದಲ್ಲಿ ಕೋಡೂರು ರಾಮಮೂರ್ತಿಗಳು ಮದರಾಸಿನಿಂದ ಬೊಂಬಾಯಿಗೆ ಬಂದು ಅಲ್ಲಿ ತಮ್ಮ ಕೃತಿಗಳನ್ನು ಪ್ರದರ್ಶಿಸಿ ಜಯಗಳಿಸಿದುದು ವಿಶೇಷವೆನ್ನಬೇಕು.

ಈ ಪ್ರದರ್ಶನದಲ್ಲಿ ತಾವು ಚಿತ್ರಗಳಿಗೆ ಬಳಸಲಾದ ಸಸ್ಯ ವಸ್ತುಗಳನ್ನು ಇರಿಸಿದ್ದರು. ಪ್ರೇಕ್ಷಕರು ಅವುಗಳಿಂದಾದ ವರ್ಣಕೃತಿಗಳೇ ಇವು ಎಂದು ತಮ್ಮ ಆಶ್ಚರ್ಯವನ್ನು ಸೂಚಿಸುತ್ತಿದ್ದರು. ಕೆಲವರು ವರ್ಣಗಳ ತಂತ್ರವೈವಿಧ್ಯತೆಯನ್ನು ಅರಿತುಕೊಂಡು ಹೋದರು. ಈ ಕಲಾ ಪ್ರದರ್ಶನದ ಕಲಾಕೃತಿಗಳ ಕಲಾಕೌಶಲದ ಬಗ್ಗೆ ಅಭಿಮಾನ ಮೂಡುವಂತೆ ಮಾಡಿದ ಕೋಡೂರು ರಾಮಮೂರ್ತಿ ಅವರ ಬಗ್ಗೆ ಅರಿಯುವುದುಚಿತ.

ರಾಮಮೂರ್ತಿಯವರು ಕಲಾವಿದರು ಮಾತ್ರ ಅಲ್ಲ. ಕಲಾ ವಸ್ತುಗಳ ಸಂಗ್ರಾಹಕರೂ ಆಗಿದ್ದರು. ಹಳೆಯ ಬಾಗಿಲುವಾಡ ಹಾಗೂ ಮರದ ರಥ, ಗೊಂಬೆಗಳ ಕುಸುರಿನ ಕೆಲಸಕ್ಕೆ ಮನಸೋತಿದ್ದರು. ಚರ್ಮದ ಗೊಂಬೆಗಳಿಗೆ ಮಾರುಹೋಗಿದ್ದರು. ತಾಳೆಪತ್ರಗಳ ಸಚಿತ್ರ ಕೃತಿಗಳಿಗೆ ಆಶ್ಚರ್ಯಪಟ್ಟಿದ್ದರು. ದೇವಾಲಯದ ಪುರಾತನವಾದ ಬಟ್ಟೆಯ ಚಿತ್ರಗಳಿಗೆ ಬೆರಗಾಗಿದ್ದರು. ಅಂಥ ಅಪೂರ್ವ ವಸ್ತುಗಳನ್ನು ಸಂಗ್ರಹಿಸುತ್ತಾ ಬಂದಿದ್ದರು. 'ಕೋರಾ' ಅವರು ಬರೀ ಸಂಗ್ರಾಹಕರು ಮಾತ್ರವಲ್ಲ. ನಮ್ಮ ಪ್ರಾಚೀನ ಚಿತ್ರಕಲಾ ಪದ್ಧತಿಯನ್ನು ಉಳಿಸಲು ಒಂದು ಶಾಲೆಯನ್ನು ತೆರೆದು ಅಲ್ಲಿ ಕೇಂದ್ರ ಸರಕಾರದ ಕೈಗಾರಿಕಾ ಸಂಸ್ಥೆಯ ಶಿಕ್ಷಣ ವೇತನ ಪಡೆದ ಕೆಲವು ವಿದ್ಯಾರ್ಥಿಗಳಿಗೆ ಶಿಕ್ಷಣ ಕೊಟ್ಟರು. ಅವರು ಸಂಗ್ರಹಿಸಿದ ಇಲ್ಲವೇ ಬರೆದ ಕಲಾವಸ್ತುಗಳ ಬಗ್ಗೆ ಯಾರಾದರೂ ವಿವರ ಬಯಸಿದಲ್ಲಿ ಈ ಬಗ್ಗೆ ಅವರ ಹಿನ್ನೆಲೆ, ಮೂಲ, ಚರಿತ್ರೆಯನ್ನೆಲ್ಲಾ ನಮ್ಮ ಮನಮುಟ್ಟುವಂತೆ ವಿವರಿಸುವ ರೀತಿಯಿಂದಾಗಿ ರಾಮಮೂರ್ತಿಯವರು ಕವಿಗಳಾಗಿ ಕಾಣುತ್ತಿದ್ದರು.

ರಾಮಮೂರ್ತಿಯವರು ನಮ್ಮಿಂದ ದೂರವಾಗಿ ಆರು ವರ್ಷಗಳಾದವು. ಓರ್ವ ಪುತ್ರ, ಪತ್ನಿಯನ್ನು ಬಿಟ್ಟು ಹೋಗಿದ್ದಾರೆ. ಮದರಾಸಿನ ಅವರ ನಿವಾಸದಲ್ಲಿ ಅವರ ಮಿತ್ರ ಬಾಲಕೃಷ್ಣನ ಸಹಕಾರದಿಂದ ಸಂಗ್ರಹಿಸಿ ಬಿಟ್ಟುಹೋದ ಅಪೂರ್ವ ಜಾನಪದ ಕಲಾವಸ್ತುಗಳು ನಾಡಿನ ಅಪೂರ್ವ ಆಸ್ತಿಯಂತಿವೆ. ಇವು ಸಂಗ್ರಹಾಲಯಗಳಿಗೆ ತಲುಪುವಂತಾಗಬೇಕು. ಇವರ ಸಂಗ್ರಹ ಕಲೆಯನ್ನು ಮೆಚ್ಚಿದವರಲ್ಲಿ ಕಮಲಾದೇವಿ ಚಟ್ಟೋ

ಪಾಧ್ಯಾಯ, ದಿ|| ಜಿ. ವೆಂಕಟಾಚಲಂ, ದಿ|| ಸಿ. ಶಿವರಾಮಮೂರ್ತಿ, ಜಸ್ಟೀಸ್ ರಾಜಮನ್ನಾರ್ ಮುಂತಾದ ಕಲಾ ಪ್ರೋಷಕರು. ರಾಮಮೂರ್ತಿಗಳು ಸುಸಂಸ್ಕೃತ ಮುಲಕನಾಡು (ಬ್ರಾಹ್ಮಣ) ಮನೆತನದಿಂದ ಬಂದವರು.

ರಾಮಮೂರ್ತಿಗಳು ಒಳ್ಳೆಯ ಸ್ವಭಾವದವರಾಗಿದ್ದರು. ಕರುಣಾಮೂರ್ತಿಗಳಾಗಿದ್ದರು. ದಾನ ಧರ್ಮ ಇವರ ರಕ್ತಗತವಾಗಿದ್ದಿತು. ಜಾತೀಯ ಸೋಂಕು ಎಂಬುದಿರಲಿಲ್ಲ ಇವರಲ್ಲಿ. ಅಡಿಗೆ ಮನೆಯಲ್ಲಿ ನನ್ನನ್ನು ಅವರ ಜೊತೆಯಲ್ಲಿ ಕೂರಿಸಿಕೊಂಡು ಎಷ್ಟೋ ಸಾರಿ ಸಹಪಂಕ್ತಿಯಲ್ಲಿ ಭೋಜನ ಮಾಡಿಸಿದ ಅವರ ಹಿರಿಯ ಗುಣ ಮೆಚ್ಚುವಂತಹದು. ಅವರ ಪತ್ನಿ ಆಂಧ್ರದ ತಿಂಡಿ ತಿನಿಸು ಮಾಡಿ ಪ್ರೀತಿಯಿಂದ ಬಡಿಸುತ್ತಿದ್ದ ರೀತಿ ಮರೆಯುವಂತಹವಲ್ಲ. ಸೋದರ ಕಲಾವಿದರ ಬಗ್ಗೆ ಅವರಿಗಿದ್ದ ವಾತ್ಸಲ್ಯ ಆದರಗಳು ಇತರರಲ್ಲಿ ಗುರುತಿಸುವುದು ಅಪರೂಪ. ಮಾನವತಾವಾದಿ ಅವರಾಗಿದ್ದರು. ರಾಮಮೂರ್ತಿಗಳ ನಡೆನುಡಿಗಳು ಇಂದಿನ ಕಲಾವಿದರಿಗೆ ಆದರ್ಶಪ್ರಾಯವಾಗಿದ್ದುವು. ಆಂಧ್ರ ಮತ್ತು ಕರ್ನಾಟಕದ ಸ್ನೇಹದ ಕೊಂಡಿಯಂತಿದ್ದ ಈ ಕಲಾವಿದರನ್ನು ಮರೆಯುವುದಾದರೂ ಹೇಗೆ ?

ಎಚ್. ಎಂ. ನಾಗರಾಜರಾವ್

ಶಾಸನಾನುವಾದ-ಕೆಲವು ಸಮಸ್ಯೆಗಳು

"ಭಾಷಾಂತರ ಮೂಲದ 'ಪೂರ್ಣಾವತಾರ'ವಾಗಿರಬೇಕು. ಅಂದರೆ, ಮೂಲದ ಭಾವನೆಗಳೆಲ್ಲ ಭಾಷಾಂತರದಲ್ಲಿ ಸಂಪೂರ್ಣವಾಗಿ ಮೈದಳೆದಿರಬೇಕು ; ರೀತಿ ಮತ್ತು ಶೈಲಿಗಳ ದೃಷ್ಟಿಯಿಂದಲೂ ಅದು ಮೂಲವನ್ನು ಹೋಲಬೇಕು ; ವಾಚನೀಯತೆಯ ದೃಷ್ಟಿಯಿಂದ ಮೂಲದಂತೆಯೇ ಸಲೀಲವಾಗಿ ಓದಿಸಿಕೊಳ್ಳಬೇಕು."

ಇದು ಎ. ಎಫ್ ಟೈಟ್ಲರ್ ಎಂಬಾತನ ಹೇಳಿಕೆ. ಆದರೆ ಮೂಲದಲ್ಲಿನ 'ಸರ್ವಸ್ವ'ವನ್ನೂ ಸರ್ವಸಮರ್ಪಕ ರೀತಿಯಲ್ಲಿ ಸೆರೆಹಿಡಿದು ಬೇರೊಂದು ಭಾಷೆಯಲ್ಲಿ 'ಮೆಚ್ಚ್ ಕಿಡಲೀಯದೆ' ಅನುಸೃಷ್ಟಿ ಮಾಡುವುದು ಅಸಾಧ್ಯವೆಂಬುದು ಭಾಷಾಂತರ ಕ್ಷೇತ್ರವನ್ನು ಪ್ರವೇಶಿಸಿದ ಅಥವಾ ಆ ಕ್ಷೇತ್ರದ ಪರಿಚಯವಿರುವ ಯಾರಿಗಾದರೂ ತಿಳಿದಿರುವ ವಿಚಾರವೇ ಆಗಿದೆ. ಇದಕ್ಕೆ ಸ್ಥೂಲವಾಗಿ ಎರಡು ವಿಧದ ಕಾರಣಗಳನ್ನು ಸೂಚಿಸಬಹುದು : ಭಾಷಿಕ ಮತ್ತು ಸಾಂಸ್ಕೃತಿಕ. ಮೂಲಭಾಷೆಯ ಶಬ್ದಕೋಶ, ವಾಕ್ಯಸರಣಿ, ವ್ಯಾಕರಣ ವಿಶೇಷಗಳು ಉದ್ದಿಷ್ಟ ಭಾಷೆಯ ಅಂಥವೇ ಅಂಶಗಳ ದೃಷ್ಟಿಯಿಂದ ಬೇರೆಯಾಗಬಹುದು. ಮೂಲ ಮತ್ತು ಉದ್ದಿಷ್ಟ ಭಾಷೆಗಳು ಹೆಚ್ಚು ಹೆಚ್ಚು ಪರಕೀಯವಾದಷ್ಟೂ ಅವುಗಳ ನಡುವಣ ಅಂತರ ಹೆಚ್ಚುತ್ತ ಹೋಗುತ್ತದೆ. ಎರಡನೆಯ ಕಾರಣ ಸಂಸ್ಕೃತಿಗೆ ಸಂಬಂಧಿಸಿದುದು ; ಹೆಚ್ಚು ಆಗಲಾಳಗಳನ್ನು ಹೊಂದಿರುವಂಥದು. ಮೂಲ ಮತ್ತು ಉದ್ದಿಷ್ಟ ಭಾಷೆಗಳನ್ನಾಡುವ ಜನರು ಒಂದೇ ಸಾಂಸ್ಕೃತಿಕ ವಲಯದೊಳಗೆ ಇದ್ದಾಗ ಈ ಸಮಸ್ಯೆ ಅಷ್ಟಾಗಿ ಕಾಡಿಸುವುದಿಲ್ಲ. ಆದರೆ ಮೂಲ ಮತ್ತು ಉದ್ದಿಷ್ಟ ಭಾಷೆಗಳನ್ನಾಡುವ ಜನರ ಆಚಾರ ವ್ಯವಹಾರ ಹಾಗೂ ಸಾಂಸ್ಕೃತಿಕ ಹಿನ್ನೆಲೆ ಪರಿಸರಗಳು ತೀರ ಬೇರೆಯಾದಾಗ ಉಂಟಾಗುವ ತೊಡಕುಗಳು ಅಪಾರ. ವಾಸ್ತವವಾಗಿ, 'ಅನುವಾದವನ್ನು ಅನುಸರಿಸಿಕೊಂಡು ಬರುವ ಎರಡು ಪ್ರಮುಖ ಸಂಗತಿಗಳೆಂದರೆ, ಮೂಲಕೃತಿಯ ಕೆಲವು ಅಂಶಗಳ ನಷ್ಟ ಮತ್ತು ಹಲವು ಸಮಸ್ಯೆಗಳ ಸೃಷ್ಟಿ.'

ವಿಜ್ಞಾನಕ್ಕೆ ಸಂಬಂಧಿಸಿದ ಕೃತಿಗಳ ಅನುವಾದದಲ್ಲಿ ಎರಡನೆಯ ಎಂದರೆ ಸಾಂಸ್ಕೃತಿಕ ಸ್ವರೂಪದ ಸಮಸ್ಯೆ ಉದ್ಭವಿಸುವುದು ಅತಿವಿರಳ ಎನ್ನಬಹುದು. ಆದರೆ ಕಲೆಗೆ, ಸಾಹಿತ್ಯಕ್ಕೆ, ಸಂಬಂಧಿಸಿದ ಕೃತಿಗಳ ಅನುವಾದ ಕಾರ್ಯದಲ್ಲಿ ಎರಡೂ ವಿಧದ—

ಭಾಷಿಕ ಮತ್ತು ಸಾಂಸ್ಕೃತಿಕ—ತೊಡಕುಗಳುಂಟಾಗಿ ಭಾಷಾಂತರಕಾರರನ್ನು ಎಷ್ಟೋ ಸಲ ಅನಿವಾರ್ಯವಾದ ಪೇಚಿಗೆ ಸಿಲುಕಿಸುತ್ತವೆ. ಪ್ರಸ್ತುತ ಲೇಖನದಲ್ಲಿ ಶಾಸನಾನುವಾದದಲ್ಲಿ ಉಂಟಾಗುವ ಸಮಸ್ಯೆಗಳಲ್ಲಿ ಕೆಲವನ್ನಾದರೂ ಪರಿಚಯಿಸುವ ಪ್ರಯತ್ನವನ್ನು ಮಾಡಲಾಗಿದೆ.

ಶಾಸನಗಳು ಬೇರೆ ಬೇರೆ ಕಾಲಗಳಲ್ಲಿ, ಬೇರೆ ಬೇರೆ ಲಿಪಿ, ಭಾಷೆ ಹಾಗೂ ಶೈಲಿಗಳಲ್ಲಿ ರಚಿತವಾದ ಸಾಂಸ್ಕೃತಿಕ ದಾಖಲೆಗಳು. ಇವುಗಳ 'ಪಠ್ಯ'ವನ್ನು ಒಂದು ಭಾರತೀಯ ಭಾಷೆಯಿಂದ ಇನ್ನೊಂದು ಭಾರತೀಯ ಭಾಷೆಗೆ ಅನುವಾದಿಸುವುದು, ಕೆಲವೊಮ್ಮೆ ಕಷ್ಟಸಾಧ್ಯವಾದರೂ ಅಸಾಧ್ಯವೇನಲ್ಲ. ಏಕೆಂದರೆ ಅವು ಬಿಂಬಿಸುವ ಸಂಸ್ಕೃತಿಯಲ್ಲಿ, ಆಂತರಿಕ ವ್ಯತ್ಯಾಸಗಳಿದ್ದರೂ, ಬಹುಮಟ್ಟಿಗೆ ಏಕರೂಪತೆ ಕಂಡುಬರುತ್ತದೆ. ಭಾಷಿಕ ತೊಡಕುಗಳನ್ನು ನಿವಾರಿಸಿಕೊಳ್ಳುವಲ್ಲಿ ಸಂಸ್ಕೃತದ ಸಹಾಯ ಪಡೆದುಕೊಳ್ಳುವ ಸೌಲಭ್ಯ ಎಲ್ಲ ಭಾರತೀಯ ಭಾಷೆಗಳಿಗೆ ಇದೆ. ಆದರೆ ಈ ಶಾಸನಗಳನ್ನು ಇಂಗ್ಲಿಷಿಗೆ ಅನುವಾದಿಸುವಾಗ ವಿವಿಧ ತೆರನ ಸಮಸ್ಯೆಗಳು ಉದ್ಭವಿಸುತ್ತವೆ.

ಶಾಸನಗಳ ಭಾಷೆ ಸುಲಭಗ್ರಾಹ್ಯವಲ್ಲ. ಅದರ ಜಾಡು ಹಿಡಿದು ಅರ್ಥ ಮಾಡಿಕೊಳ್ಳುವುದೇ ಒಂದು ಸಾಹಸವಾಗುತ್ತದೆ; ಅನುವಾದಿಸುವ ಮಾತು ಹಾಗಿರಲಿ. ಉದಾಹರಣೆಗೆ, ಹತ್ತನೆಯ ಶತಮಾನದ ಕನ್ನಡ ಶಾಸನವೊಂದರ ಪಾಠ ಹೀಗಿದೆ :

ಮಣ್ಣಾಜೊ ರಾನ್ನ ದಿಯುರಣಿಜರಾಟ್ಟ ದಿಕ್ಕದಾಯದ
ಇವಕ್ಕೆ ಈ ಮಗ್ಗ ಬರಸಿಟ್ಟ ಕಿನಟಿದಮ ರವ ದುರ್ಗೋ
....ಗ್ಗದ[1]

ಭಾಷೆಯ ಪ್ರಾಚೀನತೆಯಿಂದಾಗಿ ಅರ್ಥವಾಗುವುದಿಲ್ಲ ಎಂದು ಭಾವಿಸುವುದಾದರೆ ಹದಿನಾರನೆಯ ಶತಮಾನದಷ್ಟು ಈಚಿನ ಈ ಶಾಸನ ಪಾಠವನ್ನು ನೋಡಬಹುದು :

ಸ್ವಸ್ತಿ ಲನಾಗತೀತಪಗೆಯಳಿನು ಶ್ರೀಕೆಭಸಫಕೆಳೊಪೊಂದು
ಸುಜಕತ್ತಾರ್ಜಿಪಂದು ದೇವರಿಗೆಲ್ವದ ಕಳಿವಾಸವ ಆ ಪೂವಿನ
ಸವಸಂ[2]

ಬಹುಶಃ ಲಿಪಿಕಾರನ ತಪ್ಪಿನಿಂದಾಗಿ ಭಾಷಾಸ್ವರೂಪ ತೀರ ವಿಕೃತವಾಗಿದ್ದಿರಬಹುದು. ವಾಸ್ತವವಾಗಿ, ಇದರಲ್ಲಿ ಭಾಷಾಂತರ ವಹಿಸಬಹುದಾದ ಪಾತ್ರವೇನಿಲ್ಲವೆಂಬುದು ನಿಜ. ಏಕೆಂದರೆ, ಅರ್ಥ ಮೂಡಿದ ಅನಂತರವೇ ತಾನೆ ಅನುವಾದದ ಪ್ರಶ್ನೆ ಉದ್ಭವಿಸುವುದು ?

ಕೆಲವೊಮ್ಮೆ ಭಾಷಾಂತರಕಾರರು ಶಾಸನ ಪಾಠದಲ್ಲಿ ಅನ್ವಯವನ್ನು ಸರಿಯಾಗಿ ಮಾಡಿಕೊಳ್ಳದೆ ತೀವ್ರ ಸ್ವರೂಪದ ಪ್ರಮಾದ ಎಸಗುವುದುಂಟು. ಇದಕ್ಕೆ ಭಾಷಾಂತರಕಾರರ 'ತೂಕಡಿಕೆ'ಯಷ್ಟೇ ಭಾಷಾ ಸ್ವರೂಪವೂ ಕಾರಣವಾಗಿರುವುದುಂಟು. ಆದರೂ ದೋಷ ಭಾಷಾಂತರಕಾರನದಾಗುತ್ತದೆಯೇ ಹೊರತು ಭಾಷೆಯದಾಗುವುದಿಲ್ಲ ! ಉದಾಹರಣೆಗೆ, ಈ ಶ್ಲೋಕವನ್ನು ನೋಡಬಹುದು :

ಬೇಲೂರು ಕೃಷ್ಣಭೂಪಸ್ತು ಆಹೂಯ ಯತಿಕುಂಜರಂ।
ಮೂದ್ರವಳ್ಳೀ ಚ ಗ್ರಾಮಸ್ತು ದತ್ತಂ ಕೃಷ್ಣಾರ್ಪಣಂ ಶುಭಂ ॥[3]

ಇದರ ಅನುವಾದ ಹೀಗೆ ಕೊಟ್ಟಿದೆ: Belur king Krishna gave him an elephant, sending for him and the Mudravalli village as an auspicious offering to Krishna.[4] ಶ್ಲೋಕದ ಯತಿಕುಂಜರ ಎಂಬುದರ ಅರ್ಥ ಯತಿಶ್ರೇಷ್ಠ ಎಂದು. ಆದರೆ ಅನುವಾದಿಸುವಾಗ ಕುಂಜರ ಮತ್ತು ಮೂದ್ರವಳ್ಳಿಗಳನ್ನು ಸೇರಿಸಿಕೊಂಡುದು ಇಂಥ ಅಪಾರ್ಥಕ್ಕೆ ಕಾರಣ ವಾಯಿತು. ಹಾಗೆಯೇ 'ತನ್ನಯ ಕೀರ್ತಿ ನಾಕಮೊಳ್ ಪಸೆದಿರೆ' ಎಂಬುದನ್ನು ತತ್ಸಂದರ್ಭಾನುಸಾರ 'her fame having spread over the heaven' ಎಂದು ಅನುವಾದಿಸಬೇಕೇ ಹೊರತು ಈಗ ಅನುವಾದಿಸಿರುವಂತೆ 'On Nayakirtti going to the sky'[5] ಎಂದಲ್ಲ.

ಹಳೆಯ ಭಾಷೆ ಹಾಗೂ ಹಳೆಯ ಶೈಲಿಯನ್ನು ಹೊಸ ರೂಪಕ್ಕೆ ತಿರುಗಿಸಬಹುದೆ? ಹಾಗೆ ತಿರುಗಿಸಿದರೆ ಭಾಷಾಂತರದ ಪರಿಣಾಮವೇನು? ಈ ಪ್ರಶ್ನೆಗಳು ವಾದಗ್ರಸ್ತವಾಗಿಯೇ ಉಳಿದಿವೆ. ಅಲ್ಲದೆ "ಭಾಷೆಗೆ ಸಂಬಂಧಪಟ್ಟ ಸಮಸ್ಯೆಗಳೇ ಭಾಷಾಂತರದ ಸಮಸ್ಯೆಗಳಲ್ಲ. ಭಾಷೆಗಿಂತ ಹೊರಗಿರುವ ಅನೇಕ ಸಮಸ್ಯೆಗಳು ಎದುರಾಗುತ್ತವೆ. ವಾಸ್ತವವಾಗಿ ಭಾಷೆ ಒಂದು ಜನಾಂಗದ, ಸಮುದಾಯದ ಸಂಸ್ಕೃತಿಯನ್ನು ಜೀವನ ವಿಧಾನವನ್ನೂ ಮಾತುಗಳಲ್ಲಿ ಹೊರಗೆಡವುತ್ತದೆ....ಒಂದು ಜನಾಂಗದ ಆಟಪಾಟಗಳು, ತಿಂಡಿತಿನಿಸುಗಳು, ಬಟ್ಟೆ, ಬರೆ, ಸಸ್ಯ ಮತ್ತು ಪ್ರಾಣಿವಿಶೇಷಗಳು, ನಡೆವಳಿಕೆಗಳು, ನಂಬಿಕೆಗಳು, ಹಬ್ಬಹರಿದಿನಗಳು, ಆಚರಣೆಗಳು, ಸಾಮಾಜಿಕ ಸಂಬಂಧಗಳು, ಗಾದೆಗಳು, ನುಡಿಗಟ್ಟುಗಳು, ನಾಣ್ಣುಡಿಗಳು, ಆಡುನುಡಿ, ಬೈಯ್ಗಳು, ಅಸಂಸ್ಕೃತ ಬಳಕೆ ಇವುಗಳ ಬಗ್ಗೆ ಸಾಕಷ್ಟು ಪರಿಚಯವಿಲ್ಲದೆ ಸಾಂಸ್ಕೃತಿಕ ಲೇಪನವುಳ್ಳ ಒಂದು ಕೃತಿಯನ್ನು ಇನ್ನೊಂದು ಭಾಷೆಗೆ ಸಮರ್ಥವಾಗಿ, ಸಮರ್ಪಕವಾಗಿ ಭಾಷಾಂತರ ಮಾಡಲು ಸಾಧ್ಯವಿಲ್ಲ."

ಶಾಸನಾನುವಾದದಲ್ಲಿ ಎದುರಾಗುವ ಇನ್ನೊಂದು ಬಗೆಯ ಸಮಸ್ಯೆ, ಎಂದರೆ ಶ್ಲೇಷೆ. "ಪ್ರತಿಯೊಂದು ಭಾಷೆಯಲ್ಲೂ ಎರಡರ್ಥ, ಮೂರರ್ಥ, ಇಲ್ಲವೆ ನಾನಾರ್ಥ ಕೊಡುವ ಪದಗಳಿರುತ್ತವೆ. ಆ ಪದಗಳನ್ನು ಕವಿ (ಅಥವಾ ವ್ಯಕ್ತಿ) ಶ್ಲೇಷಾರ್ಥ ಬರುವಂತೆ ಚಮತ್ಕಾರವಾಗಿ ಬಳಸುತ್ತಾನೆ. ಉದ್ದೇಶಪೂರ್ವಕವಾಗಿ ಅವನು ಹಾಗೆ ಬಳಸಿರುತ್ತಾನೆ. ಆ ನಾನಾರ್ಥ ಶಬ್ದಗಳನ್ನು ಉದ್ದಿಷ್ಟ ಭಾಷೆಯಲ್ಲಿ ಹಾಗೆಯೇ ಅನುವಾದಿಸಲು ಅನೇಕ ವೇಳೆ ಸಾಧ್ಯವಾಗುವುದಿಲ್ಲ." ಸಂಸ್ಕೃತ ಭಾಷೆಯಲ್ಲಿ ರಚಿತವಾದ ಶಾಸನಗಳ ಕೆಲವು ಪದ್ಯಗಳಲ್ಲಿ ಎರಡು ಅಥವಾ ಅದಕ್ಕೂ ಹೆಚ್ಚಿನ ಅರ್ಥಗಳಿರುತ್ತವೆ. ಈ ಭಾಷೆಯಲ್ಲಿ ಪದ ವಿಭಾಗ ಸೌಕರ್ಯವಿರುವುದರಿಂದ ವಿವಿಧ ರೀತಿಯಲ್ಲಿ ಪದ ವಿಭಾಗ ಮಾಡಿ ಅರ್ಥ ಹೇಳಬಹುದು. ಇಂಥ ಸಂದರ್ಭಗಳಲ್ಲಿ ಇವುಗಳಲ್ಲಿನ ಒಂದು ಅರ್ಥವನ್ನು

ಕೊಟ್ಟು ಇನ್ನೊಂದು ಅರ್ಥವನ್ನು ಅಥವಾ ಉಳಿದ ಅರ್ಥಗಳನ್ನು ಆವರಣದೊಳಗೆ ಕೊಡಬೇಕಾಗುತ್ತದೆ ; ಎಂದರೆ ವಿವರಣ ವಿಧಾನದ ಮೂಲಕ ಮೂಲದ ಆಶಯವನ್ನು ತಿಳಿಸಬೇಕಾಗುತ್ತದೆ. ಹಾಗೆ ಮಾಡಿದಾಗ ಸ್ವಾಭಾವಿಕವಾಗಿಯೇ ಮೂಲದ ಸ್ವಾರಸ್ಯ ಮಾಯವಾಗುತ್ತದೆ ಇಲ್ಲವೇ ಕುಂದುತ್ತದೆ. ಉದಾಹರಣೆಗೆ, ಹರಿಹರದೇವರ ಒಂದು ಸ್ತುತಿ ಪದ್ಯವನ್ನು ನೋಡಬಹುದು. ಹರಿಹರಮೂರ್ತಿ ಕಲ್ಪನೆಯೇ ವಿಶಿಷ್ಟ ಬಗೆಯದು. ಎರಡು ದೇವತೆಗಳ ಲಕ್ಷಣಗಳನ್ನು 'ಕಸಿ' ಮಾಡಿ ಒಂದು ದೇವತೆಯನ್ನು ಪರಿಭಾವಿಸಿರುವಂಥದು. ಹರಿಹರರಿಬ್ಬರಿಗೂ ಅನ್ವಯವಾಗುವಂತೆ ವರ್ಣನೆ ಇರುವ ಸ್ತುತಿ ಪದ್ಯವಿದು :

ಶ್ರೀ ಮಹಿಮಾಸ್ಪದಂ ಭುಜಗಚಕ್ರಧರಂ ದ್ವಿಜರಾಜಭೂಷಣಂ
ಕಾಮದನರ್ಜುನೋಜ್ವಲರುಚಿರ್ಗೋಪಮನೋಹರಮೂರ್ತಿ ಭಾಸ್ವದ
ಬ್ಜಾಮಳನೇತ್ರನಾದಿಪುರುಷಂ ಪರಮೇಶ್ವರನೊಲ್ದು ದೇವಚೂ
ಡಾಮಣಿ ಸಂತತಂ ಹರಿಹರಂ ಪರಿರಕ್ಷಿಸುತಿರ್ಕೆ ಧಾತ್ರಿಯಂ ||[6]

ಇದರ ಅನುವಾದ :

The abode of the greatness of Sri (otherwise poison) and of *mahima* (otherwise one of the attributes of Siva), bearer in his arm of the discus (otherwise serpent race), adorned with the king of birds *i. e.*, Garuda (or the king of the stars *i. e.*, the moon), the granter of desires (or the destroyer of Kama), filled with affection for Arjuna (or brilliant with white lustre), of a form beloved by the cowherds (or by the bull), of lustrous pure lotus eyes (or with the sun and moon as his pure eyes), the original male, the supreme lord (Paramesvara), the crowning ornament of the gods, Harihara —may he with affection ever protect the earth.[7]

ಮೂಲಭಾಷೆಯ 'ವಸ್ತು'ವನ್ನು ಇನ್ನೊಂದು ಭಾಷೆಗೆ ಪರಿವರ್ತಿಸಬಹುದಾದರೂ ಅದರ 'ರೀತಿ'ಯನ್ನು ಹಾಗೆಯೇ, ಅಷ್ಟೇ ಪರಿಣಾಮಕಾರಿಯಾಗಿ, ಬೇರೊಂದು ಭಾಷೆಯಲ್ಲಿ ತರುವುದು ಸಾಧ್ಯವಾಗುವುದಿಲ್ಲ. ಕಾವ್ಯದ ವಿಚಾರದಲ್ಲಿ ಇದು ಇನ್ನಷ್ಟು ಸ್ಪಷ್ಟವಾಗಿ ಅನುಭವಕ್ಕೆ ಬರುತ್ತದೆ. ಕಾವ್ಯದ ಸ್ವಾರಸ್ಯ ಇರುವುದು ಅದರ ಧ್ವನಿಯಲ್ಲಿ ; ಅದರ ನಿರೂಪಣಾ ಶೈಲಿಯ ಬೀಸು ಬಳುಕುಗಳ ಸೊಬಗಿನಲ್ಲಿ. ಅನುವಾದದಲ್ಲಿ

ಇವನ್ನು ತರುವುದು ಕಷ್ಟ. ಇಲ್ಲಿ ದಿವಂಗತ ಡಿ.ವಿ.ಜಿ. ಯವರ ಈ ಮಾತನ್ನು ನೆನಪಿಗೆ ತಂದುಕೊಳ್ಳಬಹುದು :

ಹಗುರಾದ ಮಾತುಗಳು, ನವುರಾದ ಭಾವಗಳು
ಚೈತ್ರಸಂಜೆಯಲಿ ತೋಟದಲಿ ಮೆಲುಮೆಲನೆ
ಸುಳಿಸುಳಿದು ಸೋಕುವೆಲರಿನ ಲಘುವಿಲಾಸಗಳು
ತರ್ಜುಮೆಗೆ ಸಿಲುಕುವುವೆ ಬೇರೆ ಭಾಷೆಯಲಿ ?

(ಉಮರನ ಒಸಗೆಯ 'ಸಮಾಪನೆ'ಯಲ್ಲಿ)

"ಏಕೆಂದರೆ ಕಾವ್ಯದ ಅನುವಾದಗಳಲ್ಲಿ ಮೂಲದ ಭಾವ, ಲಯ, ಅರ್ಥಗಳನ್ನೆಲ್ಲ ಇಡಿಯಾಗಿ ಅನಾಮತ್ತಾಗಿ ತರುವುದು ಕಷ್ಟ ; ಒಂದು ತರಲು ಹೋದರೆ ಇನ್ನೊಂದು ಕೈಬಿಟ್ಟುಹೋಗುತ್ತದೆ ; ಕೆಲವೆಡೆ ಮೂಲದ ಭಾವವನ್ನು ಬೇಕಾದರೆ ತರಬಹುದು, ಪ್ರಾಸಲಯಗಳನ್ನು ತರುವುದು ಸಾಧ್ಯವಾಗುವುದಿಲ್ಲ. ಪ್ರಾಸವೇ ಒಂದು ಪದ್ಯದ ಜೀವಾಳವಾಗಿರಬಹುದು, ಅಥವಾ ಶ್ಲೇಷೆಯೇ ಅದರ ಜೀವಾಳವಾಗಿರಬಹುದು, ಇಲ್ಲವೇ ಎಲ್ಲವೂ ಸೇರಿ ಮೂಲ ಪದ್ಯಕ್ಕೆ ಒಂದು ಶೋಭೆ ಬಂದಿರಬಹುದು. ಇದರಲ್ಲಿ ಯಾವುದೊಂದನ್ನು ಬಿಟ್ಟರೂ ಭಾಷಾಂತರ ಊನವಾಗುವುದರಲ್ಲಿ ಸಂಶಯವಿಲ್ಲ". ಆದ್ದರಿಂದಲೇ ಭಾಷಾಂತರದಲ್ಲಿ ಕವಿತೆ ನಷ್ಟವಾಗುತ್ತದೆ ಎನ್ನುತ್ತಾನೆ ರಾಬರ್ಟ್ ಫ್ರಾಸ್ಟ್. ಕೆಲವು ಶಾಸನಗಳಂತೂ ಖಂಡಕಾವ್ಯಗಳೇ ಆಗಿವೆ. ಕಾವ್ಯಾಂಶಗಳು, ಕಾವ್ಯಲಕ್ಷಣಗಳು ದಟ್ಟವಾಗಿ ಕಂಡುಬರುವ ಶಾಸನಗಳು ಬಹುಸಂಖ್ಯೆಯಲ್ಲಿ ಲಭ್ಯವಾಗಿವೆ. ಉದಾಹರಣೆಗೆ ಈ ಪದ್ಯದ ಏರಿಳಿತದ ಓಟವನ್ನು ನೋಡಿ :

ಹರಿದೆಯ್ದೋಡಟ್ಟಿ ಮುಟ್ಟಿತ್ತಡಸಿ ಹಿಡಿಮೊಡೊತ್ತಿತ್ತು ಸುತ್ತಿತ್ತು ಕುತ್ತಿ
ತ್ತೊರಸಿತ್ತೆತ್ತಿತ್ತು ಬೀಸಿತ್ತೊಗೆದುದೊಪೆದುದೀದಾಡಿತೌಂಕಿತ್ತುರುಳ್ಚಿ
ತ್ತುರಮಂ ಮೆಟ್ಟಿತ್ತು ಮಾಜಾಂತರನಡಿಯಿಡೆ ಪೊಯ್ದೊಕ್ಕಲಿಕ್ಕಿತ್ತು
ಕಾಯ್ಪಿಂ
ಧುರದೊಳ್ಪ್ರಾಮಂತ ಲಕ್ಷ್ಮೀಧರನ ಮಯಿದುನಂ ಚೌಡನೆಂಬಾ ಮದೇಭಂ||8

ಮೂಲದ ಭಾವ, ಅರ್ಥ ಬಂದರೂ ಮೂಲವನ್ನು ಓದುವಾಗ ಉಂಟಾಗುವ ಪರಿಣಾಮ ಅನುವಾದದಲ್ಲಿ ನಷ್ಟವಾಗಿಬಿಡುತ್ತದೆ. ಈ ಸಮಸ್ಯೆ ಕೇವಲ ಪದ್ಯಕ್ಕಷ್ಟೇ ಸೀಮಿತವಾಗಿಲ್ಲ, ಗದ್ಯದಲ್ಲೂ ಇದೆ. ಸಂಸ್ಕೃತಭೂಯಿಷ್ಠವಾದ ಗದ್ಯದ ಸಾಲೊಂದು :

ಸೇವಾಗಮನಸಮಯಸಮದಕಾಮಿನೀಕದಂಬಚಳನಚಳಸಿಂಜಿನೀ
ಸಂಜಾತಮಂಜುನಾದೋಪ್ಬುದ್ಧಕುಸುಮಬಳಶಬಳಮಧುಕರ
ನಿಕರಝುಂಕಾರಮುಖರಿತಾಸ್ಥಾನರಂಗನುಂ |9

ಅಥವಾ ಒಂದೇ ಅಕ್ಷರದಿಂದ ಆರಂಭವಾಗುವ ಬಿರುದಾವಳಿ :

ಊರೀಕೃತಸೇಳಪರ್ವತನುಂ | ಉರರೀಕೃತಕೋಳಾಳಪುರನುಂ |

ಉನ್ಮೀಳಿತಕೋಪತೋರಣಮುಂ | ಉತ್ತರಳಿತಶಿರೋಪೂರಣಮುಂ |
ಉಲ್ಲಂಘಿತವಲ್ಲೂರಣಮುಂ | ಉದ್ಘಾಟಿತನಂಗಲಿಪುರಣಮುಂ |
ಉತ್ಪಾಟಿತಘಟ್ಟಕಪಾಟಮುಂ | ಉತ್ಕಂಪಿತಕಾಂಚೀಪುರಮುಂ |[9]

ಹೀಗೇ ಸಾಗುತ್ತದೆ. ಈ ಶಬ್ದಗಳ ಸರ್ಕಸ್ಸನ್ನು ಭಾಷಾಂತರದಲ್ಲಿ ತರುವುದು ಹೇಗೆ ? ಸಂಸ್ಕೃತದಲ್ಲಿ ಇಂಥ ಚಾತುರ್ಯ ಚಮತ್ಕಾರಗಳು ಅಧಿಕ. ಕೆಲವೊಮ್ಮೆ ಓದುವಾಗ ಅಥವಾ ಕೇಳುವಾಗ ಅನುಭವವೇದ್ಯವಾಗುವಂಥ ಲಯವನ್ನು, ವಿನ್ಯಾಸವನ್ನು, ಮಾಂತ್ರಿಕ ಪರಿಣಾಮವನ್ನು ಅನುವಾದದಲ್ಲಿ ಮೂಡಿಸಲು ಸಾಧ್ಯವಾಗುವುದಿಲ್ಲ. ಉದಾಹರಣೆಗೆ :

ತೇನಾಪೇಕ್ಷ್ಯ ರಮಾಭಾತೇ ತೇ ಭಾಮಾ ರಮತೇ ಮತೇ
ತೇಮತೇ ನಿರ್ಭಯಾ ಜಾತೇ ತೇ ಜಾಯಾ ಮಮತೇ ಮತೇ ||[10]

ಎಂಬ ಶ್ಲೋಕದಲ್ಲಿ ಅಕ್ಷರಗಳನ್ನು ತಿರುಪು ಮುರುವು ಮಾಡಿ ಲಯವನ್ನು ಸಾಧಿಸಲಾಗಿದೆಯೇ ಹೊರತು ಅರ್ಥದಲ್ಲಿ ವಿಶೇಷವೇನಿಲ್ಲ. ಅನುವಾದದಲ್ಲಿ ಅರ್ಥಕ್ಕಾಗಿ ಲಯವನ್ನು ಬಲಿಗೊಡಬೇಕಾಗುತ್ತದೆ. ಹಾಗೆಯೇ 'ಅಪ್ಪಂ ಪರವನಿತೆಯರಪ್ಪಂ' ಎಂಬಲ್ಲಿ ಮೊದಲನೆಯ ಅಪ್ಪಂ ನಾಮಪದವಾಗಿಯೂ, ಎರಡನೆಯ ಅಪ್ಪಂ ಕ್ರಿಯಾಪದವಾಗಿಯೂ ಬಂದು ಒಂದೇ ಪದದ ಚತುರ ಪ್ರಯೋಗ ಕಂಡುಬರುತ್ತದೆ. ಇದನ್ನು Appa does not embrace others' wives ಎಂದು ಅನುವಾದಿಸಿದಾಗ ಸಹಜವಾಗಿಯೇ ಮೂಲದಲ್ಲಿ ಇರುವ ಸ್ವಾರಸ್ಯ ನಾಶವಾಗಿಬಿಡುತ್ತದೆ.

ಮೂಲ ಭಾಷಾಶೈಲಿಯಲ್ಲಿ ಸುಲಲಿತವಾಗಿ ಹೊಮ್ಮಿದ ನಾಟಕೀಯತೆಯನ್ನು ಅನುವಾದದಲ್ಲಿ ತರುವುದು ಕಷ್ಟವಾಗುತ್ತದೆ ಎಂಬುದಕ್ಕೆ ಒಂದು ದೃಷ್ಟಾಂತವನ್ನು ಕೊಡುವುದು ಉಚಿತ.

ಅರಿಪುರದೊಳ್ ಧಗಿಲ್ಧಗಿಧಗಿಲ್ಧಗಿಲೆಂಬುದರಾತಿ ಭೂಮಿಪಾ
ಳರ ಶಿರದೊಳ್ ಗರಿಲ್ಗರಿಗರಿಲ್ಗರಿಲೆಂಬುದು ವೈರಿಭೂತಳೇ
ಶರ ಕರುಳೊಳ್ ಚಿಮಿಲ್ಚಿಮಿಚಿಮಿಲ್ಚಿಮಿಲೆಂಬುದು ಕೋಪವಹ್ನಿದು
ರ್ಧರ ತರಮೊಂದೊದಳ್ವುದಿದೆ ಕಾದುವರಾರ್ಮಲೆರಾಜರಾಜನೊಳ್ ||[11]

ಬೆಂಕಿ ಧಗಧಗನೆ ಉರಿಯಿತು ಎಂಬುದು ಕನ್ನಡ ಭಾಷೆಯ ಜಾಯಮಾನಕ್ಕೆ ಸಹಜ. ಈ ಪದ್ಯವನ್ನು ಇಂಗ್ಲಿಷಿಗೆ ಅನುವಾದಿಸಿದಾಗ ಮೂಲದ ನಾಟಕೀಯ ಪರಿಣಾಮ ನಾಶವಾಗಿ ಅನುವಾದ ಎಷ್ಟು ನೀರಸವಾಗುತ್ತದೆ ನೋಡಿ :

In the city of his enemies *dhagil-dhagi-dhagil-dhagil*, on the heads of the hostile kings *garil-gari-garil-garil*, in the bowels of opposing *chimil-chimi-chimil-chimil*—thus do the flames of his irresistible anger burn : Who can boldly fight with Malerajaraja ?[12]

ಶಾಸನ ಪಾಠದ ಪ್ರತಿಯೊಂದು ಶಬ್ದ ಅರ್ಥವಾದರೂ ಒಟ್ಟ ಅರ್ಥ – ಆಶಯ ಸ್ಪಷ್ಟಪಡದಿರುವ ನಿದರ್ಶನಗಳೂ ಇಲ್ಲದಿಲ್ಲ. ಉದಾಹರಣೆಗೆ, ಈ ಚಿಕ್ಕ ಶಾಸನವನ್ನು ನೋಡಬಹುದು :

ವೊಡೆಯರ ಹೆಂಡತಿಯ ಗಂಡ
ಬೊಯಸೆಟ್ಟಿಯ ಮದ ಕೊಡ[13]

ಇದನ್ನು The husband of the wife of ? Odeyar, the pot of intoxication of Boya-seti[14] ಎಂದು ಅನುವಾದಿಸಿದೆ. ಇದು ಗೊಂದಲವನ್ನು ಉಂಟುಮಾಡುತ್ತದೆಯೇ ಹೊರತು ಬೇರೇನನ್ನೂ ಸಾಧಿಸುವುದಿಲ್ಲ. ಮೂಲವೂ ಸಂದಿಗ್ಧ, ಆದ್ದರಿಂದ ಅನುವಾದವೂ ಅಸ್ಪಷ್ಟ ಎಂದು ತೃಪ್ತಿಪಟ್ಟುಕೊಳ್ಳಬೇಕು ಅಷ್ಟೆ. ಕೆಲವೊಮ್ಮೆ ಪದಕ್ಕೆ ಪದ ಇಟ್ಟು ಭಾಷಾಂತರ ಮಾಡುವುದು ತೀರ ಕೃತಕವಾಗುವುದಷ್ಟೇ ಅಲ್ಲ, ಹಾಸ್ಯಾಸ್ಪದವೂ ಆಗುವುದು.

ಶಾಸನಗಳಲ್ಲಿ ರಾಮಾಯಣ, ಮಹಾಭಾರತ, ಭಾಗವತ, ಪುರಾಣ, ಪಂಚತಂತ್ರ ಮತ್ತು ಜಾನಪದ ನಂಬಿಕೆಗಳು ಇತ್ಯಾದಿಗಳ ಉಲ್ಲೇಖವಿರುವುದು ಕಂಡುಬರುತ್ತದೆ. ಬೇರೊಂದು ಸಾಂಸ್ಕೃತಿಕ ಪರಿಸರದ ವಾಚಕನಿಗೆ ಸಂದರ್ಭಗಳ ಮಹತ್ವ ಅರಿವಾಗಬೇಕಾದರೆ ಅನುವಾದದಲ್ಲಿ ಅಡಿಟಿಪ್ಪಣಿಯ ಮೂಲಕ ವಿವರಿಸುವುದು ಅವಶ್ಯಕವಾಗುತ್ತದೆ. ತೀರಾ ಸರಳ ಉದಾಹರಣೆಗಳನ್ನು ತೆಗೆದುಕೊಳ್ಳುವುದಾದರೆ 'ಸಂಗ್ರಾಮ ರಾಮ', 'ಕಲಿಯುಗ ಭೀಮ', 'ಸತ್ಯ ರಾಧೇಯ' ಮುಂತಾದ ಬಿರುದುಗಳು ಶಾಸನಗಳಲ್ಲಿ ಪದೇ ಪದೇ ಎದುರಾಗುತ್ತವೆ ರಾಮ, ಭೀಮ, ರಾಧೇಯರ ವ್ಯಕ್ತಿತ್ವದ ಸಾಮಾನ್ಯ ಪರಿಚಯವೂ ಇಲ್ಲದ ವಾಚಕನಿಗೆ ಬಿರುದುಗಳ ಅರ್ಥ ಮನದಟ್ಟಾಗುವುದಿಲ್ಲ. ಈ ಅಂಶವನ್ನು ಈ ದೃಷ್ಟಾಂತ ಹೆಚ್ಚು ಸ್ಪಷ್ಟಪಡಿಸುತ್ತದೆ :

ಎತ್ತೊಂದು ವಾಮನಭಟ್ಟ ಎಂಬಾತನಿಗೆ ಸೇರಿದ ಜಮೀನಿನಲ್ಲಿ ಬೆಳೆದು ನಿಂತಿದ್ದ ಪೈರನ್ನು ತಿನ್ನತೊಡಗಿದಾಗ, ಕೋಪಗೊಂಡ ಆತ 'ಮೊಜಿಕೋಲಿ'ನಿಂದ ಹೊಡೆಯುತ್ತಾನೆ. ಅವನ ಹೊಡೆತದಿಂದ ಎತ್ತು ಸತ್ತು ಹೋದಾಗ ಪಶ್ಚಾತ್ತಾಪಗೊಂಡ ವಾಮನಭಟ್ಟನಿಗೆ ಅದು ಶಿವನ ವಾಹನವೇ ಎನ್ನಿಸುತ್ತದೆ. ಅಲ್ಲದೆ,

ಪರಿಕಿಸದಾ ಪಾರ್ವೆ ನಡೆದು ಪರಮಾರ್ತಂ ಕೊಂದಳಿನ್ನು
ಮುಂಗುರಿಯ ತಾನೆರಡಿಲ್ಲದೆಂಬ ನಾಳ್ನುಡಿ[15]

ನೆನಪಾಗುತ್ತದೆ. ಈ ಭಾಗವನ್ನು Vāmana-bhatta felt that "his position was like that of the Brahmana woman in the fable who not understanding the true state of the affairs foolishly killed the mungoose[16] ಎಂದು ಸಮರ್ಪಕವಾಗಿ ಅನುವಾದಿಸಿದರೂ ಅದು ಅಪೂರ್ಣವಾಗಿಯೆ ಉಳಿಯುತ್ತದೆ. ಪಂಚತಂತ್ರದ,

ಹಾವನ್ನು ಕೊಂದು ಮಗುವನ್ನು ರಕ್ಷಿಸಿಯೂ ಒಡತಿಯ ಕೋಪಕ್ಕೆ ಬಲಿಯಾದ ಮುಂಗುಸಿಯ, ಕಥೆಯನ್ನು ಸಂಕ್ಷಿಪ್ತವಾಗಿಯಾದರೂ ಸೂಚಿಸಬೇಕಾಗುತ್ತದೆ. ಹಾಗೆಯೇ 'ತ್ರ್ಯಭಿಮಾನಿಯ ತನಸ್ಥನುಂ ಎರಡುಂ ಶ್ರೀಯುಕ್ತೈಳಿಯೊಳಿರ್ದ್ದಪುದೆಂಬನ್' ಎಂಬ ಶಾಸನಪಂಕ್ತಿಯನ್ನು ಅನುವಾದಿಸುವಾಗ ಪಂಪನ 'ಆದಿಪುರಾಣ'ದಲ್ಲಿ ಉಲ್ಲೇಖಗೊಂಡಿರುವ ಭರತ-ಬಾಹುಬಲಿಯರ ಕಥೆಯ ಹಿನ್ನೆಲೆಯನ್ನು ಗ್ರಹಿಸುವುದು ಅವಶ್ಯವಾಗುತ್ತದೆ.[17] ಅಡಿಗಡಿಗೆ ಇಂಥ ಸಮಸ್ಯೆಗಳು ಬರುವುದರಿಂದ ಶಾಸನಾನುವಾದ ಕ್ಲಿಷ್ಟವಾಗುತ್ತದೆ. ಅಡಿಟಿಪ್ಪಣಿಗಳನ್ನು ಕೊಡುವುದಾದಲ್ಲಿ ಅನುವಾದ ಭಾಗಕ್ಕಿಂತ ಅಡಿಟಿಪ್ಪಣಿಗಳಿಗೇ ಸಿಂಹಪಾಲು ಸಲ್ಲಬೇಕಾಗುತ್ತದೆ!

ಶಾಸನಾನುವಾದಕರಿಗೆ ಮೂಲಭಾಷೆಯ ಪರಿಚಯವಿದ್ದರಷ್ಟೇ ಸಾಲದು; ಶಾಸನಗಳು ಉಲ್ಲೇಖಿಸುವ ಪ್ರಾಕೃತಿಕ ಪರಿಸರದ, ಸ್ಥಳಪೇಶಗಳ ಭೌಗೋಳಿಕ ಸನ್ನಿವೇಶದ, ಅರಿವೂ ಬೇಕಾಗುತ್ತದೆ ಎಂಬುದಕ್ಕೆ ಒಂದು ಉದಾಹರಣೆಯನ್ನು ಕೊಡಬಹುದು. ಪ್ರೊ. ಕೀಲ ಹಾರ್ನ್ ಐಹೊಳೆ ಶಾಸನವನ್ನು ಅನುವಾದಿಸುವಾಗ ಬನವಾಸಿಗೆ ಸಂಬಂಧಪಟ್ಟ ಭಾಗವನ್ನು 'ವರದಾನದಿಯಿಂದಾವೃತವಾದ ಸ್ಥಳದುರ್ಗವಾದ ವನವಾಸಿ ಚಾಲುಕ್ಯ ಸೈನ್ಯಸಾಗರದಿಂದ ಜಲದುರ್ಗವಾಯಿತು' ಎಂದು ಅನುವಾದಿಸಿದರು. ಆದರೆ ವಾಸ್ತವವಾಗಿ ವನವಾಸಿ ಒಂದು ಜಲದುರ್ಗ; ಆ ಸ್ಥಳದ ಬಹುಭಾಗವನ್ನು ವರದಾನದಿ ಸುತ್ತುವರಿದಿದೆ. ಚಾಲುಕ್ಯ ಸೈನ್ಯ ಅಲ್ಲಿಗೆ ಬಂದು ಬೀಡುಬಿಟ್ಟಿದ್ದರಿಂದ ಅದು ಸ್ಥಲದುರ್ಗವಾಗಿ ಪರಿಣಮಿಸಿತೆಂಬುದು ನೈಜಾರ್ಥ. ಪ್ರೊ. ಕೀಲ್‌ಹಾರ್ನ್ ಕೊಟ್ಟ ಅರ್ಥ ವ್ಯತಿರಿಕ್ತವಾದದ್ದು.[18] ಸಂಸ್ಕೃತ ರಚನೆಗಳಲ್ಲಿ ಕೆಲವೆಡೆ ಅನ್ವಯವನ್ನು ಹೇಗೂ ಮಾಡಬಹುದಾದ ಸಾಧ್ಯತೆ ಇರುತ್ತದೆಯಾದ್ದರಿಂದ ಇಂಥ ಪ್ರಮಾದಗಳು ಉಂಟಾಗುತ್ತವೆ. ಇಂಥಲ್ಲಿ ಅನುವಾದಕನ ಭೌಗೋಳಿಕ ಪರಿಜ್ಞಾನ ನೆರವಿಗೆ ಬರುವುದುಂಟು.

ಒಂದು ಸಂಸ್ಕೃತಿಗೆ ಸಂಬಂಧಿಸಿದ ಕೆಲವು ಶಬ್ದಗಳನ್ನು ಅನುವಾದಿಸಲು ಸಾಧ್ಯವಾಗುವುದೇ ಇಲ್ಲ; ಬದಲಾಗಿ ವಿವರಿಸಬಹುದಷ್ಟೆ. ಅಭಾಷಾಂತರಣೀಯತೆಗೆ ಭಾಷಿಕ-ಸಾಂಸ್ಕೃತಿಕ ಕಾರಣಗಳಿರುತ್ತವೆ. ಮಂಗಳಾರತಿ ಎಂಬ ಪದವನ್ನು ನೋಡಬಹುದು. ಇದನ್ನು waving of the lamp ಎಂದು ಅನುವಾದಿಸಿದ್ದರೂ ಅದು ಪೂರ್ಣಾರ್ಥ ನೀಡುವಲ್ಲಿ ಸಫಲವಾಗುವುದಿಲ್ಲ; waving of the lamp clockwise ಎಂದಾಗಲೀ encircling of the lamp vertically from left to right ಎಂದಾಗಲೀ ವಿವರಿಸಬಹುದೇನೋ. Lamp ಎಂಬುದು ದೀಪವೂ ಆಗುತ್ತದೆ, ಆರತಿಯೂ ಆಗುತ್ತದೆ! 'ಧರ್ಮ' ಎಂಬುದು ಅತ್ಯಂತ ಅಗಲಾಳಗಳಿಂದ ಕೂಡಿದ untranslatable ಪದ.[19] ಅಂತೆಯೇ 'ಅಂಗರಂಗಭೋಗ'ದ decoration, services and worship ಎಂಬ ಭಾಷಾಂತರ[20] ಮೂಲದ ಭಾವಸಂಪತ್ತನ್ನು ಬಿಂಬಿಸದು. ಭಾಷಾಂತರದಲ್ಲಿ ಪರ್ಯಾಯ ಪದಗಳು ವಹಿಸುವ

ಪಾತ್ರ ತುಂಬ ಮಹತ್ವದ್ದು. ಬಾಳ್ಗಳ್ಚು, ಸಳ್ಬಂಗ, ಕೀಳ್ಗುಂಟೆ ಮುಂತಾದ ಹತ್ತು ಹಲವು ಪಾರಿಭಾಷಿಕ ಶಬ್ದಗಳು ಶಾಸನಗಳಲ್ಲಿ ಕಂಡುಬರುತ್ತವೆ. ವಿದ್ವಾಂಸರು ಇಂಥವಕ್ಕೆ ಭಿನ್ನ ಭಿನ್ನ ಅರ್ಥಗಳನ್ನು ನೀಡುವ ಪ್ರಯತ್ನ ಮಾಡಿದ್ದಾರೆ. ಅನುವಾದಕನಿಗೆ ಯಾವ ಅರ್ಥವನ್ನು ಸ್ವೀಕರಿಸಬೇಕೆಂಬ ಸಮಸ್ಯೆ ಉದ್ಭವಿಸುತ್ತದೆ. ಅಂತೆಯೇ, ತೆರಿಗೆಯ, ಆಡಳಿತಾತ್ಮಕ, ಪರಿಸರಾತ್ಮಕ, ಧಾರ್ಮಿಕ[21] ಹಾಗೂ ಸಾಮಾಜಿಕ[22] ಪಾರಿಭಾಷಿಕ ಶಬ್ದಗಳ ಅನುವಾದ ಕೂಡ.

ಶಬ್ದಕೋಶದಲ್ಲಿ ಕೊಟ್ಟಿರುವ ಹಲವಾರು ಅರ್ಥಗಳಲ್ಲಿ ಅತ್ಯಂತ ಸೂಕ್ತವಾದ ಪದವನ್ನು ಅನುವಾದಕ ಆರಿಸಿಕೊಳ್ಳಬೇಕು; ಸಂವಾದಿ ಶಬ್ದ ಸಿಗದಿದ್ದಾಗ ಸಮಾನಾರ್ಥಕಗಳನ್ನು ಅನ್ವೇಷಿಸಬೇಕು ; ಹಾಗೂ ಕೆಲವೊಮ್ಮೆ ಆತ ಶಬ್ದಬ್ರಹ್ಮನೂ ಆಗಬೇಕಾಗುತ್ತದೆ ! ಶಬ್ದ ಸೃಷ್ಟಿಯಲ್ಲಿ ಆತನ ಜಾಣ್ಮೆ, ಪ್ರತಿಭೆ ವ್ಯಕ್ತವಾಗುವುದು. ಅನುವಾದಕ ಶಬ್ದಕೋಶಕ್ಕೆ ಶರಣಾಗಿ 'ಕನ್ನೆಗೆರೆ' ಎಂಬುದನ್ನು *virgin* tank ಎಂದು ಅನುವಾದಿಸಿದರೆ ಆಭಾಸವೆನ್ನಿಸುತ್ತದೆ ; ಅದು *new* tank ಎಂದು ಅನುವಾದಗೊಂಡರೆ ಸಾಕು. 'ಪುರವರಾಧೀಶ್ವರ' ಎಂದರೆ *boon* lord of the city ಅಲ್ಲ, lord of the *excellent* city. ಕನ್ನೆವಸದಿಗೆ ಮೊದಲ ಬಸದಿ (?) ಎಂಬರ್ಥವೂ[23] ಸಮಂಜಸವೆನಿಸದು. 'ಏಕಾಂಗವೀರ' ಎಂಬುದು the *sole* hero ಎಂದಾಗಬೇಕೇ ಹೊರತು hero even with a *single limb*[24] ಎಂದಲ್ಲ. 'ಎಳೆಮಕ್ಕಳ್' ಎಂಬುದನ್ನು 'ಎಳೆಯ ಮಕ್ಕಳೆಂದೇ'[25] ಭಾವಿಸಬೇಕಾಗಿಲ್ಲ ! ಇಂಥ ಅನುವಾದಗಳಿಗೆ ಅನುವಾದಕನ ಅಜಾಗರೂಕತೆಯೇ ಕಾರಣವಾಗುತ್ತದೆ.

ಒಂದೊಂದು ಭಾಷೆಗೂ ತನ್ನದೇ ಆದ ವೈಶಿಷ್ಟ್ಯವಿರುತ್ತದೆ ; ಅದನ್ನು ಬೇರೊಂದು ಭಾಷೆಯಲ್ಲಿ ತರಲು ಸಾಧ್ಯವಾಗುವುದಿಲ್ಲ. ಭಾಷಾಂತರದಲ್ಲಿ ಉಂಟಾಗುವ ಭಾಷಿಕ ಸಮಸ್ಯೆಗಳಿಗೆ ಉತ್ತರ ಕಂಡುಕೊಳ್ಳಲು, ಕೆಲವೊಮ್ಮೆ ಕಷ್ಟವಾದರೂ, ಸಾಧ್ಯ. ಆದರೆ ಒಂದು ಭಾಷೆ ಬಿಂಬಿಸುವ ಸಂಸ್ಕೃತಿಯನ್ನು ಬೇರೊಂದು ಭಾಷೆಗೆ ವಿಕೃತವಾಗದಂತೆ ಕೊಂಡೊಯ್ಯುವ ಸಮಸ್ಯೆ ಗಂಭೀರ ಸ್ವರೂಪದ್ದು. ಈ ಮಾತು ಶಾಸನಾನುವಾದಕ್ಕೂ ಅನ್ವಯವಾಗುತ್ತದೆ.

ಶಾಸನಾನುವಾದಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಸಂಕ್ಷಿಪ್ತವಾಗಿ ಹೀಗೆ ಸೂಚಿಸಬಹುದು.

1. ಶಾಸನಗಳ ಭಾಷೆಯನ್ನು ಸರಿಯಾಗಿ ಗ್ರಹಿಸಿ ಅರ್ಥಮಾಡಿಕೊಳ್ಳುವುದು ; ಪದಗಳನ್ನು ಬಿಡಿಸಿ ಸರಿಯಾಗಿ ಅನ್ವಯವನ್ನು ಮಾಡಿಕೊಳ್ಳುವುದು.
2. ಶಾಸನ ಬಿಂಬಿಸುವ ಸಂಸ್ಕೃತಿಯನ್ನು ಅದರ ಹಿನ್ನೆಲೆ ಸಹಿತವಾಗಿ ತಿಳಿದುಕೊಳ್ಳುವುದು ; ಅನುವಾದದಲ್ಲಿ ಅದೇ ಸಾಂಸ್ಕೃತಿಕ ಚಿತ್ರವನ್ನು ಮೂಡಿಸುವುದು.
3. ಪಾರಿಭಾಷಿಕ ಪದಗಳಿಗೆ ಸೂಕ್ತ ಸಂವಾದಿಯನ್ನು ಬಳಸುವುದು ; ಸಾಧ್ಯವಾಗದೆಡೆ ಸಮಾನಾರ್ಥಕಗಳನ್ನು ನೀಡುವುದು ; ಇಲ್ಲವೇ ವಿವರಿಸುವುದು (ಇದೂ ಸಾಧ್ಯ

ವಾಗದ ಸಂದರ್ಭಗಳಲ್ಲಿ ಮೂಲವನ್ನೇ ಲಿಪ್ಯಂತರಿಸಿ ಕೊಡಬೇಕಾಗುತ್ತದೆ.)

4. ಶೈಲಿ ಆಯಾ ಭಾಷೆಗೆ ಸಿದ್ಧವಾಗಿರುವಂಥದು. ಮೂಲ ಪದ್ಯಗಳಲ್ಲಿರುವ ಭಾಷೆ, ವಸ್ತು, ಛಂದಸ್ಸು, ಕಲಾನೈಶಿಷ್ಟ್ಯಗಳನ್ನು ಅನುವಾದದಲ್ಲಿಯೂ ತರಲು ಪ್ರಯತ್ನಿಸುವುದು ; ಎಷ್ಟು ಸಾಧ್ಯವೋ ಅಷ್ಟರಮಟ್ಟಿಗಾದರೂ ಮೂಲ ಗದ್ಯ ಪದ್ಯಗಳಲ್ಲಿರುವ ಚಮತ್ಕಾರವನ್ನು ಶ್ಲೇಷೆಯನ್ನು ಅನುವಾದದಲ್ಲಿ ಹೊಮ್ಮಿಸಲು ಯತ್ನಿಸುವುದು.
5. ಮೂಲದ ಯಥಾರ್ಥತೆ, ವಾಚನೀಯತೆ, ಶೈಲಿ, ಅವಧಾರಣೆ ಅಥವಾ ಒತ್ತು ಇವುಗಳನ್ನು ಅನುವಾದದಲ್ಲಿ ತರುವುದು.
6. ಒಟ್ಟಿನಲ್ಲಿ ಅನುವಾದದಲ್ಲಿ ಮೂಲ ಭಾಷೆ, ವಸ್ತು, ಸಂಸ್ಕೃತಿಯಲ್ಲಿರುವ ಎಲ್ಲ ಪ್ರಧಾನಾಂಶಗಳನ್ನು ಆದಷ್ಟು ಪರಿಣಾಮಕಾರಿಯಾಗಿ ತರುವುದು, ಇತ್ಯಾದಿ.

ಶಾಸನಗಳು ಕೇವಲ ಐತಿಹಾಸಿಕ ದಾಖಲೆಗಳಷ್ಟೇ ಅಲ್ಲ. ಆದ್ದರಿಂದ ಅವುಗಳ ಅನುವಾದಗಳಲ್ಲಿ ಇತಿಹಾಸಕ್ಕೆ ಸಂಬಂಧಪಟ್ಟ ಅಂಶಗಳು ಮಾತ್ರ ಬಂದರೆ ಸಾಕು ಎಂಬ ಅಲ್ಪತೃಪ್ತಿ ಸಾಧುವಲ್ಲ. ಶಾಸನಗಳು ಜನತೆಯ ಸಾಹಿತ್ಯಿಕ-ಸಾಂಸ್ಕೃತಿಕ ಸಂಪತ್ತು ಸಹ. ಆದ್ದರಿಂದ ಅನುವಾದಕ bilingual ಅಷ್ಟೇ ಆಗಿದ್ದರೆ ಸಾಲದು bicultural ಕೂಡ ಆಗಿರಬೇಕಾಗುತ್ತದೆ. ಎಂದರೆ ಶಾಸನಾನುವಾದದ ಗುಣಮಟ್ಟ, ಯಶಸ್ಸು ಅನುವಾದಕನ ಸಾಹಿತ್ಯಿಕ ಧೋರಣೆ, ಭಾಷಾ ಸಂಪತ್ತು, ವಿಷಯ ಜ್ಞಾನ[26] ಹಾಗೂ ಪ್ರತಿಭೆ ಪಾಂಡಿತ್ಯಗಳನ್ನು ಅವಲಂಬಿಸಿರುತ್ತವೆ.

ಅಡಿ ಟಿಪ್ಪಣಿಗಳು

1 ಎ. ಕ. III ನಂಜನಗೂಡು 219

2 ಅದೇ, ನಂಜನಗೂಡು 286

3 ಎ. ಕ. I (ರೈಸ್ ಅವರ ಪರಿಷ್ಕೃತ ಆವೃತ್ತಿ)–ಶಾಸನಸಂಖ್ಯೆ 66

4 ಅದೇ, ಭಾಷಾಂತರ, ಪುಟ 71

5 ಎ. ಕ. V ಚನ್ನರಾಯಪಟ್ಟಣ 198

6 ಎ.ಕ. X ದಾವಣಗೆರೆ 25

7 ಅದೇ ಭಾಷಾಂತರ, ಪುಟ 33

8 ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಷನ್ಸ್, IV ಶಾಸನಸಂಖ್ಯೆ 260

9 ಎ.ಕ. V (ರೈಸ್ ಆವೃತ್ತಿ), ಬೇಲೂರು 58

10 ಎ.ಕ. VII, ಮದ್ದೂರು 16

11 ಎ.ಕ. XII, ಚಿಕ್ಕನಾಯಕನಹಳ್ಳಿ 21

12 ಅದೇ, ಭಾಷಾಂತರ ಪುಟ 77

13 ಎ.ಕ. II, ಶ್ರವಣಬೆಳಗೊಳ 420

14 ಅದೇ, ಭಾಷಾಂತರ, ಪುಟ 496

15 ಎಂ.ಎ.ಆರ್. 1927—ಶಾಸನಸಂಖ್ಯೆ 34

16 ಅದೇ, ಪುಟ 33

17 ಎ.ಕ. II (ರಾ. ನರಸಿಂಹಾಚಾರ್ಯರ ಆವೃತ್ತಿ), ಶಾಸನಸಂಖ್ಯೆ 234

18 ಈ ಅಂಶದತ್ತ ನನ್ನ ಗಮನ ಸೆಳೆದವರು ಶ್ರೀ ಎಸ್.ಎಸ್. ಜಾಗೀರದಾರರು.

19 ಡಾ. ಬಾ.ರಾ. ಗೋಪಾಲ : ಶಾಸನಗಳ ಭಾಷಾಂತರ–ವಿಶಿಷ್ಟ ಸಮಸ್ಯೆಗಳು, ನಾಗವಲ್ಲಿ, ಭಾಗ ೩, ಪುಟ ೧೩೮

20 ಅದೇ ; ಹಾಗೆಯೇ ತುಳಸೀ ಶಬ್ದ

21 ಧರ್ಮಕ್ಕೆ ಸಂಬಂಧಿಸಿದ ಹೆಸರುಗಳು, ದೈವದ ಹೆಸರುಗಳು ಇತ್ಯಾದಿ. ಉದಾಹರಣೆಗೆ ವಿಶಿಷ್ಟ ಅರ್ಥವುಳ್ಳ ಮಾಡಿ ಮೈಲಿಗೆ, ಪಾಪ ಪುಣ್ಯ, ಮಾಯೆ, ಲೀಲೆ ಇತ್ಯಾದಿ, ತತ್ವಶಾಸ್ತ್ರ ಅಥವಾ ವೇದಾಂತಕ್ಕೆ ಸಂಬಂಧಿಸಿದ ಶಬ್ದ ಸಮುದಾಯಗಳು.

22 ವರ್ಣಾಶ್ರಮ ಜಾತಿ ವ್ಯವಸ್ಥೆ ಇತ್ಯಾದಿಗಳಿಗೆ ಸಂಬಂಧಿಸಿದ ಶಬ್ದಗಳು, ಬಾಂಧವ್ಯ ಸೂಚಕ ಶಬ್ದಗಳು ಮುಂತಾದವು ಉದಾಹರಣೆಗೆ ಅಣ್ಣ–ತಮ್ಮ ಇತ್ಯಾದಿ.

23 ಡಾ. ಎಂ. ಚಿದಾನಂದಮೂರ್ತಿ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಪುಟ 88

24 Derret : The Hoysalas, P. 77

25 ಎ.ಕ. III (ರೈಸ್ ಆವೃತ್ತಿ), ನಂಜನಗೂಡು 97, ಭಾಷಾಂತರ ಪುಟ 104

26 "ಏಕೆಂದರೆ ಭಾಷಾ ಪ್ರಭುತ್ವವಿಲ್ಲದೆ ಭಾಷಾಂತರಿಸತೊಡಗುವುದೆಂದರೆ ಈಜಲು ಗೊತ್ತಿಲ್ಲದವರು ನೀರಿಗಿಳಿದಂತೆ ; ಹಾಗೆಯೇ ವಿಷಯ ಜ್ಞಾನವಿಲ್ಲದೆ ಭಾಷಾಂತರಕ್ಕೆ ತೊಡಗುವುದೆಂದರೆ ನೀರೇ ಇಲ್ಲದಿರುವ ಪ್ರದೇಶದಲ್ಲಿ ಈಜಲು ಯತ್ನಿಸಿದಂತೆ ಆಗುತ್ತದೆ."—ನಾಗವಲ್ಲಿ, ಭಾಗ ೩, ಪುಟ ೬೪

ಆಧಾರಗಳು

1) ನಾಗವಲ್ಲಿ, ಭಾಗ 3 (1979)
2) ನಲವತ್ತೊಂಬತ್ತನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಭಾಷಾಂತರ ಗೋಷ್ಠಿಯಲ್ಲಿ ಡಾ. ಸಿ. ಪಿ. ಕೃಷ್ಣಕುಮಾರ್ ಮಾಡಿದ ಅಧ್ಯಕ್ಷ ಭಾಷಣ (1976)

3) ಶ್ರೀ ಎಸ್. ಶ್ರೀಧರಮೂರ್ತಿ : ಭಾಷಾಂತರದಲ್ಲಿ ಸಾಂಸ್ಕೃತಿಕ ತೊಡಕುಗಳು, ಮಾನವಿಕ ಕರ್ಣಾಟಕ, ೭ ; ೪
4) ಶ್ರೀ ಎನ್. ಎಸ್. ಶಾರದಾಪ್ರಸಾದ್ : ಕಾದಂಬರಿಯ ಅನುವಾದ ; ಕೆಲವು ಸಮಸ್ಯೆಗಳು, ಮಾನವಿಕ ಕರ್ಣಾಟಕ, ೮ ; ೧
5) ಶ್ರೀ ಎಚ್.ಎಸ್. ಹರಿಶಂಕರ್ : ಸಂಸ್ಕೃತಿಯಿಂದ ಸಂಸ್ಕೃತಿಗೆ, ಮಾನವಿಕ ಕರ್ಣಾಟಕ, ೮ ; ೪
6) ಶ್ರೀ ಎಚ್. ಎಂ. ನಾಗರಾಜರಾವ್ : ಭಾಷಾಂತರಕಾರನ ಪಾಕಶಾಲೆಯಲ್ಲಿ, ಮಾನವಿಕ ಕರ್ಣಾಟಕ, ೯ ; ೪
7) ಶ್ರೀ ಎಚ್.ಎಸ್. ಹರಿಶಂಕರ್ : ಭಾಷಾಂತರದಲ್ಲಿ ಪರ್ಯಾಯ ಪದಗಳು ಮಾನವಿಕ ಕರ್ಣಾಟಕ, ೧೨ ; ೧

ಕೆ. ಕೇಶವಮೂರ್ತಿ

ಧರ್ಮಗಳಲ್ಲಿ ಯೋಗ

ಯೋಗೇನ ಚಿತ್ತಸ್ಯ ಪದೇನ ವಾಚಾಂ ।
ಮಲಂ ಶರೀರಸ್ಯತು ವೈದ್ಯಕೇನ ।
ಯೋಪಾಕರೋತ್ತಂ ಪ್ರವರಂ ಮುನೀನಾಂ ।
ಪತಂಜಲಿಂ ಪ್ರಾಂಜಲಿರಾನತೋಸ್ಮಿ ॥

ಪುರಾಣೇತಿಹಾಸಗಳ ಕಾಲವಾದ ಮೇಲೆ ನಾವು 'ಮತ'ಗಳ ಕಾಲಕ್ಕೆ ಪ್ರವೇಶಿಸುತ್ತೇವೆ. ಆ ಕಾಲದಲ್ಲಿ ಜೈನ ಮತ್ತು ಬೌದ್ಧ ಮತಗಳು ಜನತೆಯ ಮೇಲೆ ಹೆಚ್ಚು ಪ್ರಭಾವ ಬೀರಿದ್ದವು.

ಜೈನಧರ್ಮದಲ್ಲಿ ಯೋಗ

'ಯೋಗ' ಶಬ್ದಕ್ಕೆ ಜೈನಧರ್ಮದಲ್ಲಿ 'ಜೋಡಿಸು' ಎಂಬ ಅರ್ಥವಿದೆ. ಉದಾಹರಣಾರ್ಥವಾಗಿ ಹರಿಭದ್ರಸೂರಿಯು 'ಯೋಗವಿಂಶಕಾ' ಗ್ರಂಥದಲ್ಲಿ "ಮುಕ್ಖೇಣ ಜೋಯಣಾಂ ಓ ಜೋಗೋ' ಎಂದಿದೆ. ಪ್ರಾಕೃತದಲ್ಲಿ 'ಜೋಯಣಾಂ' ಎಂದರೆ 'ಜೋಡಿಸುವುದು' ಎಂದರ್ಥ. ಅಂತೆಯೇ ಯಶೋವಿಜಯಕೃತವಾದ 'ದ್ವಾತ್ರಿಂಶಿಕಾ' ಗ್ರಂಥದಲ್ಲಿ, "ಮೋಕ್ಷೇಣ ಯೋಜನಾದೇವ ಯೋಗೋಹ್ಯತ್ರ ನಿರುಚ್ಯತೇ" ಎಂದು ಹೇಳಿದೆ. ಇಲ್ಲಿ 'ಯೋಜನಾ' ಎಂದರೆ 'ಜೋಡಿಸುವುದು' ಎಂದೇ ಅರ್ಥ.

ಜಿನಾಗಮದಲ್ಲಿ ಕೆಲವೆಡೆ 'ಯೋಗ ಶಬ್ದಕ್ಕೆ' 'ಧ್ಯಾನ' ವೆಂಬ ಅರ್ಥವನ್ನು ಕಲ್ಪಿಸಲಾಗಿದೆ. ಸಾಮಾನ್ಯವಾದ ಧರ್ಮಾನುಷ್ಠಾನಗಳೆಲ್ಲವನ್ನೂ ಯೋಗಾಂಗಗಳೆಂದು ಭಾವಿಸಿದ್ದರೂ ಮೋಕ್ಷ ಪ್ರಾಪ್ತಿಗೆ ಸಮೀಪವಾದ ಪೂರ್ವಕಾಲಿಕ ಧ್ಯಾನವನ್ನು 'ಯೋಗ' ಎಂದು ಭಾವಿಸಲಾಗಿದೆ.

"ಅತಸ್ತು ಯೋಗೋಯೋಗಾನಾಂ ಯೋಗಃ ಪರ ಉದಾಹೃತಃ ।
ಮೋಕ್ಷಯೋಜನ ಭಾವೇನ ಸರ್ವಸಂನ್ಯಾಸಲಕ್ಷಣಃ ॥"

ಅಂದರೆ 'ಜೀವನ್ಮುಕ್ತ'ರಾದ ಯೋಗಿಗಳು ದೈಹಿಕ, ವಾಚಿಕ ಹಾಗೂ ಮಾನಸಿಕ ಕ್ರಿಯೆ

ಗಳೆಲ್ಲವನ್ನೂ ಸಂಕ್ಷುಬ್ಧಪಡಿಸಿಕೊಂಡು ಬಾಹ್ಯ ಸಂಬಂಧವನ್ನು ಕಡಿದು ಸರ್ವಸಂನ್ಯಸ್ತರಾಗಬೇಕು.

ಜಿನಾಗಮದಲ್ಲಿ ಉಕ್ತವಾಗಿರುವ ಈ ಧ್ಯಾನವು ಆರ್ತ, ರೌದ್ರ, ಧರ್ಮ ಮತ್ತು ಶುಕ್ಲ ಎಂದು ನಾಲ್ಕು ಬಗೆಯಾಗಿದೆ. ಆರ್ತ ಹಾಗೂ ರೌದ್ರ ಧ್ಯಾನಗಳು ರಜಸ್ತಮೋಗುಣಾನ್ವಿತಗಳಾದ್ದರಿಂದ ಅಭ್ಯಸಿಸಲು ಇವು ಯೋಗ್ಯವಲ್ಲ. ಧರ್ಮ ಮತ್ತು ಶುಕ್ಲ ಧ್ಯಾನಗಳು ಯೋಗೋಪಯುಕ್ತವಾದವು. ಮೋಕ್ಷಪ್ರಾಪ್ತಿಯಲ್ಲಿ ಅ, ಇ, ಉ, ಋ, ಲೃ–ಈ ಪಂಚ ಹ್ರಸ್ವಾಕ್ಷರ ಉಚ್ಚಾರ ಪ್ರಮಾಣದ ಕಾಲವಿದೆಯೆನ್ನುವಾಗ ಮಾಡುವ ಧ್ಯಾನಯೋಗವನ್ನು 'ಶುಕ್ಲಧ್ಯಾನ'ವೆಂದು ಕರೆಯಲಾಗಿದೆ. ಇದೇ ನಿಜವಾದ ಮೋಕ್ಷಸಾಧನಯೋಗ. ಈ ಅವಸ್ಥೆಯಲ್ಲಿರುವ ಯೋಗಿಯು ಅತ್ಯಂತ ಶುದ್ಧನೂ, ಸಂಕಲ್ಪ ವಿಕಲ್ಪರಹಿತನೂ ಆಗಿರುತ್ತಾನೆ.

ಈ ಧ್ಯಾನವು ಅತ್ಯಂತ ಪರಿಶುದ್ಧವೂ, ಮೋಕ್ಷಸಾಧನವೂ ಆಗಿದೆ. ಅಲ್ಲದೆ ಇದು "ಸರ್ವದುಃಖ ವಿನಾಶಕ". ಸಮಾಧಿಶತಕ, ಧ್ಯಾನಶತಕ, ಧ್ಯಾನದೀಪಿಕಾ ಮೊದಲಾದ ಅನೇಕ ಗ್ರಂಥಗಳು ಈ ಧ್ಯಾನದ ಬಗ್ಗೆ ವಿವರವಾಗಿ ಹೇಳಿವೆ.

ಜೈನದರ್ಶನದಲ್ಲಿ ಮೋಕ್ಷಕ್ಕಿರುವ ಮೂರು ಸಾಧನಗಳು—(೧) ಸಮ್ಯಗ್ದರ್ಶನ (೨) ಸಮ್ಯಕ್ ಜ್ಞಾನ ಮತ್ತು (೩) ಸಮ್ಯಕ್ಚಾರಿತ್ರ

'ದರ್ಶನ' ಎಂಬ ಶಬ್ದಕ್ಕೆ ಶ್ರದ್ಧಾ ಎಂದು ಅರ್ಥ. 'ತತ್ತ್ವಾರ್ಥಸೂತ್ರ'ದಲ್ಲಿ, "ತತ್ತ್ವಾರ್ಥಶ್ರದ್ಧಾನಂ ಸಮ್ಯಗ್ದರ್ಶನಂ" (೧–೨) ಎಂದು ಹೇಳಿದೆ. ಸಮ್ಯಗ್ದರ್ಶನವೆಂದರೆ ತನ್ನ ಆತ್ಮದಲ್ಲಿ ದೃಢವಿಶ್ವಾಸ. ಸಮ್ಯಕ್ ಜ್ಞಾನವೆಂದರೆ ಆತ್ಮಜ್ಞಾನ, ಆತ್ಮಶಕ್ತಿಯಲ್ಲಿ ವಿಶ್ವಾಸ, ಆತ್ಮಶಕ್ತಿಯ ಜ್ಞಾನ; ಇವುಗಳಿಗನುಗುಣವಾದ ನಡತೆಯೇ ಸಮ್ಯಕ್ಚಾರಿತ್ರ. ಈ ಮೂರು ಬಗೆಯ ಸಾಧನಗಳನ್ನು 'ತ್ರಿವಿಧಯೋಗ'ವೆಂದು ಪರಿಗಣಿಸಲಾಗಿದೆ. ತತ್ತ್ವಾರ್ಥಸೂತ್ರವೆಂಬ ಗ್ರಂಥದಲ್ಲಿ,

ಸಮ್ಯಗ್ದರ್ಶನ ಜ್ಞಾನ ಚಾರಿತ್ರಾಣಿ ಮೋಕ್ಷಮಾರ್ಗಃ (೧–೧)

ಎಂದು ಹೇಳಿದೆ. ಅಂದರೆ ಈ ಮೂರೂ ಮೋಕ್ಷಕ್ಕೆ ಕಾರಣ. ಇವುಗಳನ್ನು ಜೈನಧರ್ಮದಲ್ಲಿ 'ರತ್ನತ್ರಯ'ವೆಂಬ ಸಂಜ್ಞೆಯಿಂದ ವ್ಯವಹರಿಸುತ್ತಾರೆ.

ತತ್ತ್ವಾರ್ಥಸೂತ್ರವಲ್ಲಿ ಶರೀರ, ವಚನ ಮತ್ತು ಮನಸ್ಸು ಇವುಗಳ ಕ್ರಿಯೆಗೆ 'ಯೋಗ'ವೆಂಬ ಹೆಸರು ಕೊಟ್ಟಿದ್ದಾರೆ. ಸಮ್ಯಕ್ಚಾರಿತ್ರದ ಸಿದ್ಧಿಗಾಗಿ ಹೇಳಿರುವ ಪ್ರಮುಖವಾದ ಪಂಚಮಹಾವ್ರತಗಳಾದ – ಅಹಿಂಸಾ, ಸತ್ಯ, ಅಸ್ತೇಯ, ಬ್ರಹ್ಮಚರ್ಯ ಹಾಗೂ ಅಪರಿಗ್ರಹ—ಇವು ಪಾತಂಜಲಯೋಗದರ್ಶನದ 'ಯಮ'ಕ್ಕೆ ಸಂವಾದಿಯಾದುದು. ಇವನ್ನು 'ಅಣುವ್ರತ'ಗಳೆಂದೂ ಕರೆಯುತ್ತಾರೆ. ಉಳಿದ ಸಪ್ತಾಂಗಗಳು ಜೈನಾಗಮಪ್ರೋಕ್ತವಾದ ಮಿಥ್ಯಾತ್ವ, ಸಾಸ್ವಾದನ. ಮಿಶ್ರ, ಸಮ್ಯಗ್ದರ್ಶನ, ದೇಶವಿರತಿ, ಪ್ರಮತ್ತ, ಅಪ್ರಮತ್ತ, ಅಪೂರ್ವಕರಣ, ಅನಿವೃತ್ತಿಕರಣ, ಸೂಕ್ಷ್ಮಸಾಂಪರಾಯ, ಉಪಶಾಂತ ಮೋಹ, ಕ್ಷೀಣಮೋಹ, ಸಂಯೋಗ ಕೇವಲ ಹಾಗೂ ಅಯೋಗ ಕೇವಲ—ಎಂಬ

ಹದಿನಾಲ್ಕು ಗುಣಗಳಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಸಮಾವೇಶಗೊಳ್ಳುವುವು. ಇವುಗಳ ವಿವರಣೆ 'ಗುಣಸ್ಥಾನ ಕ್ರಮಾರೋಹ', 'ಕರ್ಮಗ್ರಂಥ', 'ಕರ್ಮಪ್ರಕೃತಿ' ಮೊದಲಾದ ಗ್ರಂಥಗಳಲ್ಲಿದೆ.

"ಮಿತ್ರಾತಾರಾ ಬಲಾ ದೀಪ್ರಾಸ್ಥಿರಾ ಕಾಂತಾ ಪ್ರಭಾ ಪರಾ |
ನಾಮಾನಿ ಯೋಗದೃಷ್ಟೀನಾಂ ||"

ಎಂಬ ಅಷ್ಟವಿಧ ಯೋಗದೃಷ್ಟಿಯು ಜೈನಧರ್ಮದಲ್ಲಿ ಕಾಣುತ್ತದೆ. ಅಲ್ಲದೆ,

ಅಧ್ಯಾತ್ಮಂ ಭಾವನಾಧ್ಯಾನಂ ಸಮತಾ ವೃತ್ತಿ ಸಂಕ್ಷಯಃ |
ಯೋಗಃಪಂಚವಿಧಃ ಪ್ರೋಕ್ತಃ ಯೋಗಮಾರ್ಗವಿಶಾರದೈಃ ||

ಎಂಬ ವಚನದಲ್ಲಿ ಐದು ವಿಧವಾದ ಅಧ್ಯಾತ್ಮಾದಿ ಅವಾಂತರ ಯೋಗಗಳ ಸ್ಪಷ್ಟವಾದ ಉಲ್ಲೇಖವಿದೆ. ಅಲ್ಲದೆ ಹರಿಭದ್ರ ಯಶೋವಿಜಯಾದಿ ಕೆಲವು ಗ್ರಂಥಗಳಲ್ಲಿ,

"ಇಚ್ಛಾಂ ಶಾಸ್ತ್ರಂ ಸಾಮರ್ಥ್ಯಮಾಶ್ರಿತ್ಯ ತ್ರಿವಿಧೋಪ್ಯಯಂ |
ಗೀತಯೋ ಯೋಗಶಾಸ್ತ್ರಜ್ಞೈರ್ನಿರ್ವ್ಯಾಜಂ ಯೋ ವಿಧೀಯತೇ ||"

ಎಂದು ಇಚ್ಛಾಶಾಸ್ತ್ರ ಸಾಮರ್ಥ್ಯ ಆಶ್ರಿತವಾದ ತ್ರಿವಿಧ ಯೋಗದ ವರ್ಣನೆಯಿದೆ.

ಜಿನಾಗಮದಲ್ಲಿ ಆತ್ಮನನ್ನು—ಬಹಿರಾತ್ಮಾ, ಅಂತರಾತ್ಮಾ ಮತ್ತು ಪರಮಾತ್ಮಾ—ಎಂದು ಮೂರು ವಿಧವಾಗಿ ವಿಭಾಗಿಸಿದ್ದಾರೆ. ಪರಮಾತ್ಮ ಪದವನ್ನು ಪಡೆಯುವ ಸಾಧನವೇ ಯೋಗವೆಂಬುದು ಜೈನಸಿದ್ಧಾಂತ.

ಬೌದ್ಧಧರ್ಮದಲ್ಲಿ ಯೋಗ

ಐತಿಹಾಸಿಕ ಸಂಶೋಧನೆಯ ರೀತ್ಯಾ ಜೈನಧರ್ಮದ ನಂತರವೇ ಬೌದ್ಧ ಧರ್ಮದ ಉದಯವಾಯಿತು. ಕ್ರಿ.ಶ. ಮೂರನೇ ಶತಮಾನದಲ್ಲಿ ರಚಿತವಾಯಿತೆಂದು ಹೇಳಲಾದ 'ಗುಹ್ಯಸಮಾಜ'ವೆಂಬ ತಾಂತ್ರಿಕ ಗ್ರಂಥದಲ್ಲಿ ಬೌದ್ಧಯೋಗದ ವಿವರಣೆಯಿದೆ. ಇದರ ಹದಿನೆಂಟನೇ ಅಧ್ಯಾಯದಲ್ಲಿ ಕೆಲವು ಪಾರಿಭಾಷಿಕ ಪದಗಳನ್ನು ಉಲ್ಲೇಖಿಸುವಾಗ 'ಉಪಾಯ'ವೆಂಬ ಶಬ್ದವಿದೆ. 'ಯೋಗ'ದ ದೃಷ್ಟಿಯಿಂದ ಈ ಶಬ್ದವು ಗಮನಾರ್ಹವಾದುದು. ಮುಂದೆ ವಿವರಿಸುವ ಬೌದ್ಧಯೋಗವು ಬಹುತೇಕ ಈ ಗ್ರಂಥವನ್ನು ಕುರಿತದ್ದಾಗಿದೆ.

'ಉಪಾಯ' ಶಬ್ದವನ್ನು ವಿವರಿಸುತ್ತಾ ಅದರ ನಾಲ್ಕು ಪ್ರಭೇದಗಳಾದ–ಸೇವಾ, ಉಪಸಾಧನ, ಸಾಧನ ಮತ್ತು ಮಹಾಸಾಧನ—ಗಳನ್ನು ಹೇಳಲಾಗಿದೆ. ಇದರಲ್ಲಿನ 'ಸೇವಾ'ವನ್ನು 'ಸಾಮಾನ್ಯ ಸೇವಾ' ಮತ್ತು 'ಉತ್ತಮ ಸೇವಾ' ಎಂದು ವಿಭಾಗಿಸಲಾಗಿದೆ. ಈ 'ಉತ್ತಮ ಸೇವಾ'ವನ್ನೇ 'ಜ್ಞಾನಸುಧಾ' ಎಂದು ಕರೆಯಲಾಗಿದೆ. ಈ ಸೇವೆಯಲ್ಲಿ ಸಿದ್ಧನಾಗಲು ಸಾಧಕನಿಗೆ ಪ್ರತ್ಯಾಹಾರ, ಧ್ಯಾನ, ಪ್ರಾಣಾಯಾಮ,

ಧಾರಣಾ, ಅನುಸ್ಮೃತಿ ಮತ್ತು ಸಮಾಧಿಗಳೆಂಬ ಯೋಗಾಂಗಗಳ ಅಭ್ಯಾಸ ಅಗತ್ಯವೆಂದು ವಿವರಿಸಲಾಗಿದೆ.

'ಪ್ರತ್ಯಾಹಾರ'ವೆಂದರೆ ಇಂದ್ರಿಯ ನಿಗ್ರಹ. ಐದು ಧ್ಯಾನೀ ಬುದ್ಧರ ಮೂಲಕ ಐದು ಇಷ್ಟ ವಿಷಯಗಳ ಮೇಲೆ ಮನಸ್ಸನ್ನು ಸ್ಥಿರಗೊಳಿಸುವಿಕೆಯೇ ಧ್ಯಾನ. ಈ ಧ್ಯಾನದಲ್ಲಿ ವಿತರ್ಕ, ವಿಚಾರ, ಪ್ರೀತಿ, ಸುಖ ಮತ್ತು ಏಕಾಗ್ರತೆಗಳೆಂಬ ಐದು ಭೇದಗಳನ್ನು ಹೇಳಲಾಗಿದೆ.

ಪ್ರಾಣವಾಯು ನಿರೋಧವೇ ಪ್ರಾಣಾಯಾಮ. ಪಂಚಭೂತಾತ್ಮಕ ಅಥವಾ ಪಂಚವಿಧ ಜ್ಞಾನ ಸ್ವರೂಪವೇ 'ಪ್ರಾಣವಾಯು'. ಜೈನಯೋಗವು ಪ್ರಾಣಾಯಾಮವು ಅನಗತ್ಯವೆಂದು ಹೇಳಿದರೆ ಬೌದ್ಧಯೋಗವು ಅದನ್ನು ಅಗತ್ಯವೆಂದು ಸಾರಿದೆ.

ನಾಲ್ಕನೇ ಅಂಗವೇ ಧಾರಣೆ. ಉಪಾಸಕನು ತನಗೆ ಪ್ರಿಯವಾದ ಮಂತ್ರವನ್ನು ಹೃದಯ ಕಮಲದಲ್ಲಿ ಧ್ಯಾನ ಮಾಡುವುದೇ ಧಾರಣೆ. ಇದು ಇಂದ್ರಿಯ ನಿಗ್ರಹಕ್ಕೆ ಕಾರಣವಾಗುತ್ತದೆ. ಧಾರಣಾಂಗವನ್ನು ಶ್ರದ್ಧಾಪೂರ್ವಕವಾಗಿ ಅಭ್ಯಸಿಸುವುದರಿಂದ 'ನಿಮಿತ್ತ' ಅಥವಾ 'ಚಮತ್ಕಾರಪೂರ್ಣ' ಎಂಬ ಚಿಹ್ನವು ದೃಗ್ಗೋಚರವಾಗುತ್ತದೆ. ದೃಷ್ಟಿಗೋಚರವಾಗಬಹುದಾದ ಈ ಚಿಹ್ನೆಗೆ ಐದು ಪ್ರಕಾರಗಳಿವೆ. ಮೊದಲು ಮರೀಚಿಕಾ ಚಿಹ್ನವು ಚಿತ್ತಾಕಾಶದ ಮುಂದೆ ಪ್ರಕಟವಾಗುವುದು. ಎರಡನೆಯ ಹಂತದಲ್ಲಿ ಧೂಮಾಕಾರವಾಗಿಯೂ, ಮೂರನೆಯ ಹಂತದಲ್ಲಿ ಮಿಣುಕು ಹುಳುವಿನ ರೂಪವಾಗಿಯೂ, ನಂತರ ನಾಲ್ಕನೆಯ ಚಿಹ್ನವು ಪ್ರಕಟವಾಗಿ ಕೊನೆಯಲ್ಲಿ ಮೇಘ ರಹಿತವಾದ ಶುಭ್ರಾಕಾಶದಂತಹ ಸ್ಥಿರ ಪ್ರಕಾಶವುಳ್ಳ ಚಿಹ್ನವು ಗೋಚರಿಸುವುದು.

ನಂತರ ಅನುಸ್ಮೃತಿ. ಯಾವ ಪದಾರ್ಥದ ನಿಮಿತ್ತವಾಗಿ ಯೋಗಸಾಧನೆಯು ಪ್ರಾರಂಭವಾಗುವುದೋ ಅಂತಹ ಪದಾರ್ಥದ ಅನವಚ್ಛಿನ್ನವಾದ ಧ್ಯಾನವೇ 'ಅನುಸ್ಮೃತಿ.' ಈ ಅನುಸ್ಮೃತಿಯು ಅನಂತಾಭ್ಯಾಸದಿಂದ ಪ್ರತಿಭಾಸದ ಉತ್ಪತ್ತಿಯಾಗುತ್ತದೆ. 'ಪ್ರಜ್ಞಾ' ಮತ್ತು 'ಉಪಾಯ' ಈ ಉಭಯ ತತ್ತ್ವಗಳ ಸಂಯೋಗದಿಂದ ಸೃಷ್ಟಿಯಲ್ಲಿರುವ ಸಮಸ್ತ ವಸ್ತುಗಳೂ ಒಂದು ಪಿಂಡದಂತೆ ಭಾಸವಾಗುವುವು. ಆ ಪಿಂಡರೂಪವಾದ ಸಮಸ್ತ ವಸ್ತುಗಳೂ ಬಾಹ್ಯ ಪ್ರಪಂಚವನ್ನು ಧ್ಯಾನ ಮಾಡುವುದರಿಂದ ಸಮಾಧಿರೂಪವಾದ ಅಲೌಕಿಕ ಜ್ಞಾನದ ಉಪಲಬ್ಧಿಯು ಶೀಘ್ರವಾಗಿ ಆಗುವುದು.

ಇದಾದನಂತರ 'ಉಪಸಾಧನ'ಗಳೇ ದೈವ ಸಾಕ್ಷಾತ್ಕಾರಕ್ಕೆ ಕಾರಣವೆಂದು ಹೇಳಲಾಗಿದೆ. ಷಣ್ಮಾಸಗಳು ಏಕಪ್ರಕಾರವಾಗಿ ಈ ಉಪಸಾಧನೆಗಳನ್ನು ಸಾಧಕನು ಉಪಾಸಿಸಬೇಕು. ಈ ಅವಧಿಯಲ್ಲಿ ದೈವ ಸಾಕ್ಷಾತ್ಕಾರವಾಗದಿದ್ದಲ್ಲಿ ಸಾಧಕನು ಮತ್ತೆ ಮತ್ತೆ ಮೂರುಬಾರಿ ಇದರ ಅನುಷ್ಠಾನವನ್ನು ಮುಂದುವರಿಸಬೇಕು. ಇದರಿಂದಲೂ ಬೋಧಿ ಲಾಭವಾಗದಿದ್ದಲ್ಲಿ ಸಾಧಕನು 'ಹಠಯೋಗ'ವನ್ನು ಕೈಗೊಳ್ಳಬೇಕು.

ಹಠಯೋಗದಲ್ಲಿ ಸಾಧಕನು ಸಿದ್ಧಿಯನ್ನು ಪಡೆಯಲು ದೀರ್ಘಕಾಲ ಬೇಕಾಗುವುದು. ಆದರೆ ಈ ವಿಷಯದಲ್ಲಿ ಸಿದ್ಧನು ಇತರರಿಗೆ ಅಸಾಧ್ಯವಾದ ಅನೇಕ ಪವಾಡಗಳನ್ನು ಮಾಡಲು ಸಮರ್ಥನಾಗುತ್ತಾನೆ. ಇದಕ್ಕಿಂತಲೂ ಶ್ವಾಸಧಾರಣೆಯ ಸಾಮರ್ಥ್ಯ, ರಕ್ತಚಲನೆಯ ನಿಯಂತ್ರಣ, ಭೂಮಿಯ ಒಳಭಾಗದಲ್ಲಿ ಬಹಳ ಕಾಲ ಅನ್ನಾದ್ಯಾಹಾರಗಳಿಲ್ಲದೆ ಬದುಕುವ ಸಾಮರ್ಥ್ಯ ಇತ್ಯಾದಿಗಳು ಈ ಹಠಯೋಗಿಯ ಇತರ ಸಾಧಾರಣ ಕಾರ್ಯಗಳಾಗಿರುತ್ತವೆ.

ತಂತ್ರದ ಪ್ರಮುಖಾಂಗವೇ 'ಸಾಧನ'. ಸಾಧನವೆಂದರೆ ತನ್ನ ಇಷ್ಟದೇವತೆಯ ಸಂದರ್ಶನ ಮಾಡಿ ತನ್ನ ಅಭೀಷ್ಟವನ್ನು ಹೊಂದುವ ಕ್ರಿಯೆ. ಸಾಧಕನು ಮೊಟ್ಟಮೊದಲು ಬಹುಕಾಲ ಶೂನ್ಯೋಪಾಸನೆಯನ್ನು ಸಾಧಿಸಬೇಕಾಗುವುದು. ಹೀಗೆ ಸಾಧಿಸುತ್ತ ಹೋದಾಗ ತನ್ನ ಇಷ್ಟದೇವತೆಯ ಬೀಜಮಂತ್ರವು ತಾನಾಗಿಯೇ ಮನಸ್ಸಿಗೆ ಗೋಚರವಾಗುವುದು. ಕ್ರಮೇಣ ಆ ಮಂತ್ರವು ಅಸ್ಪಷ್ಟವಾದ ಒಂದು ರೂಪ ತಾಳುವುದು. ಸಿದ್ಧಿಯ ವೇಳೆಯಲ್ಲಿ ತೇಜೋಮಯವಾದ, ದಿವ್ಯಾಲಂಕೃತವಾದ ಒಂದು ದೇವತಾ ಸ್ವರೂಪ ಕಣ್ಣು ಮುಂದೆ ನಿಲ್ಲುವುದು. ಒಮ್ಮೆ ಪ್ರತ್ಯಕ್ಷವಾದ ಈ ದೇವತೆ ಸಾಧಕನನ್ನು ಎಂದೂ ಕೈ ಬಿಡದೆ ಬಾರಿಬಾರಿಗೂ ಈತನಿಗೆ ಅನುಗ್ರಹಮಾಡುತ್ತಾ ಹೋಗುವುದು. ಆ ದೇವತೆಯ ಕೃಪಾಕಟಾಕ್ಷಕ್ಕೆ ಪಾತ್ರನಾದವನು ಸರ್ವಸಿದ್ಧಿಗಳನ್ನೂ ಪಡೆಯುತ್ತಾನೆ. ಆದರೆ ಇಂತಹ ಸಿದ್ಧಿ ಕೇವಲ ತಾಂತ್ರಿಕ ಸಾಧನೆಯಿಂದ ಲಭಿಸತಕ್ಕದ್ದಲ್ಲ. ಉಪಾಸಕನಿಗೆ ಇದರೊಂದಿಗೆ ರಾಜಯೋಗ ಹಾಗೂ ಹಠಯೋಗಗಳ ಜ್ಞಾನವೂ ಅತ್ಯಗತ್ಯ.

ಬೌದ್ಧಮತದಲ್ಲಿ ಉಕ್ತವಾಗಿರುವ ಯೋಗ ಸೋಪಾನಗಳು ಹೀಗಿವೆ :

(೧) ಸ್ರೋತಾಪನ್ನ (ಮನಸ್ಸಿಗೆ ಅತೀತವಾದ ಬುದ್ಧಿಪ್ರಜ್ಞೆಯೆಂಬ ಪ್ರವಾಹವನ್ನು ಸೇರಿದವನು)

(೨) ಸಕೃದಾಗಮಿ (ಜೀವನ್ಮುಕ್ತನಾಗಲು ಒಮ್ಮೆ ಜನ್ಮವೆತ್ತಬೇಕಾದವನು)

(೩) ಅನಾಗಮಿ (ಪುನರ್ಜನ್ಮವಿಲ್ಲದವನು)

(೪) ಅರ್ಹತ (ನಿರ್ವಾಣ ಲೋಕ ಪ್ರಜ್ಞೆಯನ್ನು ಪ್ರವೇಶಿಸಲು ಅರ್ಹತೆ ಪಡೆದವನು)

(೫) ಅಶೇಖ (ವ್ಯಕ್ತಿತ್ವವನ್ನು ದಾಟಿ ಜೀವನ್ಮುಕ್ತನಾದವನು)

ಹೀಗೆ ಬೌದ್ಧಮತದಲ್ಲಿ ವರ್ಣಿತವಾದ ಯೋಗ ಸಂಪ್ರದಾಯ ಆಳ ಹಾಗೂ ವಿಸ್ತಾರವುಳ್ಳದ್ದು. ಕೇವಲ ಅದರ ರೂಪರೇಷೆಗಳನ್ನು ಮಾತ್ರ ಇಲ್ಲಿ ಪರಿಚಯಿಸಿದೆ.

ವೀರಶೈವಧರ್ಮದಲ್ಲಿ ಯೋಗ

ಶಿವಾಗಮಗಳಲ್ಲಿ ಶಿವನು ನಾದಸ್ವರೂಪನೆಂದೂ, ಶಕ್ತಿಯು ಬಿಂದುಸ್ವರೂಪ

ವೆಂದೂ ಉಕ್ತವಾಗಿದೆ. ಬಿಂದುವೆಂದರೆ ಚಿತ್ಕಳೆ ಅಥವಾ ಕೇಂದ್ರಸ್ಥಾನ. ನಮ್ಮ ಶರೀರದ ಕೇಂದ್ರಸ್ಥಾನವೇ ಬಿಂದು. ಇಲ್ಲಿರುವ ಗ್ರಂಥಿಯೇ ಪೀಯೂಷ (ಪೀನಿಯಲ್) ಗ್ರಂಥಿ. ಇದು ಚಿತ್ಕಳೆಯ ಪ್ರಜ್ಞಾನಸ್ಥಾನ. ಈ ಚಿತ್ಕಳೆಯನ್ನು ಪ್ರತಿನಿಧಿಸುವ ಜ್ಞಾನದ ಪ್ರಭೆಗೆ 'ಪರಶಿವ' ಅಥವಾ 'ಪರವಸ್ತು' ಎಂದು ಹೆಸರು. ಇಂದ್ರಿಯಗಳು ತಮಗೆ ಸಂಬಂಧಿಸಿದ ವಿಷಯಗಳನ್ನು ಗ್ರಹಿಸಿದಾಗ ಈ ಬಿಂದುವಿನಿಂದ ಶಕ್ತಿಯು ಹೊರಹೊಮ್ಮುತ್ತದೆ. ಇದರಿಂದಾಗಿ ವಸ್ತುಗಳ ರೂಪವನ್ನು ಮನಸ್ಸು ಗ್ರಹಿಸುತ್ತದೆ. ಈ ಬಿಂದುವಿನಿಂದ ಶಕ್ತಿಯು ಪ್ರಕಿರಣವಾಗದಿದ್ದರೆ ಮನಸ್ಸು ಯಾವ ವಸ್ತುವನ್ನೂ ಗ್ರಹಿಸಲು ಸಾಧ್ಯವಿಲ್ಲ.

ಶಿವಯೋಗದ ಅದ್ವಂತ ಸಾಧನೆಯು ಈ ಪೀಯೂಷ ಗ್ರಂಥಿಯಲ್ಲಿ ಸುಪ್ತವಾದ ಸಾಮರ್ಥ್ಯವನ್ನು ಜಾಗ್ರತಗೊಳಿಸುವುದೇ ಆಗಿದೆ. ಇದು ಜಾಗ್ರತವಾದ ಯೋಗಿಯು ಭೂತ–ವರ್ತಮಾನ–ಭವಿಷ್ಯಗಳೆಂಬ ಕಾಲಗಳಿಗೆ ಅತೀತನಾಗುತ್ತಾನೆ. ಆದ್ದರಿಂದಲೇ ಈ ಪೀಯೂಷ ಗ್ರಂಥಿಯನ್ನು ಶಿವಯೋಗದಲ್ಲಿ ತೃತೀಯ ನೇತ್ರವೆಂದು ಕರೆಯುವರು.

ಇಂತಹ ಸರ್ವೋತ್ಕೃಷ್ಟವಾದ ಪೀಯೂಷ ಗ್ರಂಥಿಯನ್ನು ಜಾಗ್ರತಗೊಳಿಸುವ ಸಲುವಾಗಿ ವೀರಶೈವ ಧರ್ಮವು 'ಇಷ್ಟಲಿಂಗ' ಪೂಜೆಯನ್ನು ಹೇಳಿದೆ. ಗುರುವು ಶಿಷ್ಯನ ಚಿತ್ಕಳೆಯನ್ನೇ ತನ್ನ ಯೋಗಶಕ್ತಿಯ ಮೂಲಕ ಆಕರ್ಷಿಸಿ ಕರಸ್ಥಲಕ್ಕೆ ತಂದು ಕೊಡುತ್ತಾನೆ. ಇದೇ ಇಷ್ಟಲಿಂಗ. ಇಷ್ಟಲಿಂಗವನ್ನು ಅರ್ಚಿಸಿದ ನಂತರ ಸಾಧಕನು 'ಅನುಸಂಧಾನ'ಕ್ಕೆ ಇಳಿಯಬೇಕು. ಇದು ಎರಡನೆಯ ಹಂತ. ಅರ್ಚನೆಯಲ್ಲಿ ಸ್ಥಾವರ ರೂಪವನ್ನು ಎದುರಿಗಿಟ್ಟುಕೊಂಡು ಪೂಜಿಸಿದರೆ ಸೂಕ್ಷ್ಮರೂಪವನ್ನು ಭಾವನಾರೂಪದಿಂದ ಧ್ಯಾನಿಸುವುದೇ ಅನುಸಂಧಾನವೆನಿಸಿಕೊಳ್ಳುತ್ತದೆ. ಯೋಗ ಶಾಸ್ತ್ರೋಕ್ತವಾದ ಖೇಚರೀ, ಷಣ್ಮುಖೀ, ಶಾಂಭವೀ— ಈ ಮೂರು ಮುದ್ರೆಗಳಲ್ಲಿ ಯಾವ ಮುದ್ರೆಯಲ್ಲಿ ಬೇಕಾದರೂ ಧ್ಯಾನಿಸಬಹುದು.

ಈ ಅನುಸಂಧಾನದಿಂದ ದೇಹದಲ್ಲಿ ಒಂದು ಬಗೆಯ ತಪಸ್ಸು (ಕಾವು) ಉಂಟಾಗುವುದು. ಇದರಿಂದಾಗಿ ಪೀಯೂಷ ಗ್ರಂಥಿಯು ಜಾಗ್ರತವಾಗುವುದು. ಶರೀರದಲ್ಲಿ ಉಂಟಾಗುವ ಕಾವು ಧ್ಯಾನಕ್ಕೆ ಅನುಗುಣವಾಗಿರುವುದು. ಸೂಕ್ಷ್ಮ ಶರೀರದ ವಿವಿಧ ಶಕ್ತಿಯ ಕೇಂದ್ರಗಳಲ್ಲಿ ಅಡಗಿರುವ ಕಾವೆಲ್ಲ ಒಂದುಗೂಡಿ ತೇಜಸ್ಸಾಗಿ ಪರಿವರ್ತನೆಯಾಗುವುದು. ಇದರಿಂದ ಪೀಯೂಷ ಗ್ರಂಥಿಯ ವಿಮರ್ಶ ಶಕ್ತಿಯು ಹೆಚ್ಚು ಪರಿಸ್ಫುಟವಾಗುವುದು. ಇದರ ಪರಿಣಾಮವಾಗಿ ವಿಚಾರ ಸಾಮರ್ಥ್ಯವು ಉಚ್ಚಾಯಸ್ಥಿತಿಯನ್ನು ಪಡೆಯುವುದು. ಕಡೆಗೆ ತಪಸ್ಸು ಹಾಗೂ ತೇಜಸ್ಸುಗಳು ಅನ್ಯೋನ್ಯವಾಗಿ ಬೆರೆತು ಓಜಸ್ಸಾಗಿ ಹೊರಹೊಮ್ಮುವುದು. ಈ ಓಜಸ್ಸು ಆತ್ಮನ ಕರ್ತೃತ್ವ ಶಕ್ತಿಯಾಗಿ ಪ್ರಕಾಶಗೊಳ್ಳುವುದು. ಈ ಪ್ರಜ್ಞೆಯು ಪೂರ್ಣಾವಸ್ಥೆಯಲ್ಲಿ ಶಿವಯೋಗದ ಸಾಧಕನನ್ನು ಒಯ್ದು ನಿಲ್ಲಿಸುವುದು. ಇದೇ ಅತಿ ಸಂಕ್ಷಿಪ್ತವಾಗಿ ಶಿವಯೋಗದ ಸಾರಸರ್ವಸ್ವ.

ಶಿವಯೋಗದ ಕಡಲಿನಷ್ಟು ಅಪಾರ; ಬಾನಿನಷ್ಟು ಎತ್ತರ. ಧರ್ಮಗಳಲ್ಲಿ ಯೋಗದ ವಿಚಾರವನ್ನು ಹೇಳಹೊರಟಿದ್ದರಿಂದ ಅದನ್ನಿಲ್ಲಿ ಹೇಳಬೇಕಾಯಿತು. ಶಿವಯೋಗವೊಂದೇ ಗ್ರಂಥದ ಗ್ರಾಸವಾದೀತು.

ಕ್ರೈಸ್ತಧರ್ಮದಲ್ಲಿ ಯೋಗ

"ಏಕತ್ವ ಭಾವನಾ ಏವ ಯೋಗಃ" ಎಂಬುದು 'ಯೋಗ' ಶಬ್ದಕ್ಕೆ ವಾಸ್ತವಿಕ ವಿವರಣೆಯಾದರೂ 'ಏಕತ್ವ' ಎಂಬ ಪದಕ್ಕೆ ಎರಡು ರೀತಿಯ ಅರ್ಥವನ್ನು ಕಲ್ಪಿಸಿದ್ದಾರೆ. ಮೊದಲನೆಯದು ತನ್ನ ಅಸ್ತಿತ್ವವನ್ನು ಪರಮಾತ್ಮನಲ್ಲೇ ಲೀನಗೊಳಿಸಿ ತಾನು ಪರಮಾತ್ಮನ ಒಂದು ಅಂಗವಾಗಿ ಪರಿಣಮಿಸುವುದು. ಈ ಸ್ಥಿತಿಯನ್ನು 'ಏಕತೆಯ ಪರಾಕಾಷ್ಠೆ' ಎನ್ನಬಹುದು. ಇದಕ್ಕಿಂತ ಭಿನ್ನವಾದ ಮತ್ತೊಂದು ಏಕತೆಯನ್ನು ಸಹ ಕಾಣಬಹುದು. ಇದು ಮೊದಲನೆಯದಕ್ಕಿಂತ ಸ್ವಲ್ಪ ಕೆಳಮಟ್ಟದ್ದಾದರೂ ಕನಿಷ್ಠವಾದುದೇನೂ ಅಲ್ಲ. ಈ ದಿಶೆಯಲ್ಲಿ ಸಾಧಕನು ತಾನು ಬೇರೆಯಾಗಿಯೇ ಉಳಿದು ಪರಮಾತ್ಮನ ಸರ್ವಶಕ್ತಿ, ಆತನ ದಯಾಮಯತೆಗಳನ್ನು ಗುರುತಿಸಿ ತನ್ನ ದೃಷ್ಟಿಯನ್ನೂ ಹಾಗೂ ಸ್ವಭಾವವನ್ನೂ ಬದಲಾಯಿಸಿಕೊಂಡು ಪ್ರೇಮಪೂರ್ವಕವಾಗಿ ಆತನಲ್ಲಿ ಆತ್ಮ ಸಮರ್ಪಣೆಯಿಂದ ಆತನ ಚಿತ್ತದಲ್ಲಿ ಭಗವಂತನ ದಿವ್ಯಜ್ಯೋತಿಯು ಸ್ಫುರಿಸುವುದು. ಇದರಿಂದಾಗಿ ಆತನಲ್ಲಿ ಕ್ಷಮೆ, ತಾಳ್ಮೆ, ಕರುಣೆ, ನಯ ವಿನಯಾದಿ ಸದ್ಗುಣಗಳು ಮೂರ್ತೀಭವಿಸಿ ತನ್ನವರೊಂದಿಗೆ ಹೇಗೆ ವ್ಯವಹರಿಸಬೇಕೆಂಬ ಜ್ಞಾನವು ಸ್ಫುರಣೆಯಾಗುವುದು.

ಕ್ರೈಸ್ತ ಮತಾವಲಂಬಿಯಾದವನು ಭಗವಂತನೊಡನೆ ಮೇಲೆ ಹೇಳಿದ ಸಂಬಂಧವನ್ನು ಬೆಳೆಯಿಸಿಕೊಳ್ಳಬೇಕೆಂಬುದೇ ಏಸುಕ್ರಿಸ್ತನ ಬೋಧೆ. ಆತನ ಹಲವಾರು ಉಪದೇಶಗಳಲ್ಲಿ ಇದರ ಸ್ಪಷ್ಟ ಉಲ್ಲೇಖವಿದೆ. ಉದಾಹರಣೆಗಾಗಿ,

"I and my Father are one."

ಇಲ್ಲಿ 'ನಾನು' ಮತ್ತು 'ನನ್ನ ತಂದೆ' ಎಂಬ ಎರಡು ಪ್ರತ್ಯೇಕವಾಗಿಯೇ ಉಳಿಯುತ್ತವೆ ಎಂಬುದು ಗಮನಾರ್ಹ. ನಾನು, ಅವನಾಗಲು ಪ್ರಯತ್ನಿಸುತ್ತಿದ್ದೇನೆಯೇ ವಿನಃ 'ನಾನು ಅವನಲ್ಲ' ಎನ್ನುವ ದ್ವಂದ್ವಭಾವ ಇಲ್ಲಿ ಒಡೆದು ಕಾಣುತ್ತದೆ.

ಕ್ರಿಶ್ಚಿಯನ್ನರ ಪವಿತ್ರಗ್ರಂಥವಾದ ಬೈಬಲ್‌ನಲ್ಲಿ ಎಲ್ಲಿಯೂ "ಕ್ರಿಶ್ಚಿಯನರ ಧ್ಯೇಯ ಪರಮಾತ್ಮನಲ್ಲಿ ಸೇರುವುದು" ಎಂಬುದನ್ನು ಯಾವ ರೀತಿಯಲ್ಲಿಯೂ ಉಲ್ಲೇಖಿಸಿಲ್ಲ. ಇಲ್ಲಿ ಹೇಳಿರುವ ಏಕತೆಯೆಂದರೆ ಪರಮಾತ್ಮನ ಇಚ್ಛೆಯನ್ನು ಜೀವನದ ಮಾರ್ಗದರ್ಶನವೆಂದು ಭಾವಿಸಿಕೊಳ್ಳುವುದೇ ಆಗಿದೆ. ಅಂತೆಯೇ ತನ್ನ ಮನಸ್ಸನ್ನು ಪೂರ್ಣವಾಗಿ ಪರಮಾತ್ಮನ ಮನಸ್ಸು ಹಾಗೂ ಅಭಿಸಂಧಿಯಲ್ಲಿ ಸೇರಿಸುವುದು. ಇದನ್ನೇ ಮಾನವನ ಪರಮ ಧ್ಯೇಯವೆಂದು ಭಾವಿಸಿ ಆನಂದಮಗ್ನನಾಗುವುದು ಮಹಾತ್ಮಾ ಪಾಲ್‌ನ ಒಂದು ಆಖ್ಯಾನದಲ್ಲಿ "I live and yet no longer I, but Christ liveth in me" ಎಂಬ ಉಕ್ತಿಗಳಿವೆ.

ಪರಮಾತ್ಮನಲ್ಲಿ ಐಕ್ಯಗೊಳ್ಳುವುದು ಕ್ರೈಸ್ತ ಜೀವನದ ಪರಮಪುರುಷಾರ್ಥವೆಂದು ಕೆಲವು ಅಧ್ಯಾತ್ಮ ವಾದಿಗಳು ಒಪ್ಪುತ್ತಾರೆಯಾದರೂ ಈ ವಾದಕ್ಕೆ ಕ್ರೈಸ್ತಮತದಲ್ಲಿ ಪುಷ್ಟಿ ದೊರೆತಂತಿಲ್ಲ. ಕ್ರೈಸ್ತಮತಾನುಯಾಯಿಗಳ ಜೀವನದ ಸಫಲತೆ ಪರಮಾತ್ಮನ ಸಾಹಚರ್ಯವೇ ವಿನಃ ಆತನಲ್ಲಿ ಐಕ್ಯತೆಯಲ್ಲ. ಈ ದಿಶೆಯಲ್ಲಿ ಮತಭೇದವುಂಟಾಗಿರುವುದರಿಂದ 'ಇದನಿತ್ಥಂ' ಎಂದು ಹೇಳಲು ಬರುವುದಿಲ್ಲ.

ಪರಮಾತ್ಮನ ಸಾಹಚರ್ಯ ಪ್ರಾಪ್ತಿಗೆ ಅನುಕೂಲವಾದ ಸಾಧನೆಗಳಾವುವು ಎಂಬುದು ಬೈಬಲ್‌ನಲ್ಲಿ ವರ್ಣಿತವಾಗಿಲ್ಲ. ತನ್ನ ಉಪದೇಶಕ್ಕೆ ಮೊದಲು ಏಸುವು ನಲವತ್ತು ದಿನ ಉಪವಾಸ ಮಾಡಿದ ಎಂಬ ವರ್ಣನೆಯೊಂದು ಅಲ್ಲಿ ಸಿಕ್ಕುತ್ತದೆಯೇ ಹೊರತು, ಯಾವ ಸಾಧನೆಯ ಅಂಗವಾಗಿ ಅದನ್ನು ಮಾಡಿದನು ಎಂಬ ವಿವರಣೆ ದೊರೆಯುವುದಿಲ್ಲ. ಏಸುವಿನ ದೃಷ್ಟಿಯಲ್ಲಿ 'ಧ್ಯಾನ'ವೆಂಬುದು ಒಂದು ಬಾಹ್ಯಸಾಧನೆಯಲ್ಲ. ಅದು ಭಗವಂತನ ಕಡೆಗೆ ಸಮೀಪಿಸುವಂತೆ ಮಾಡುವ ಒಂದು ಮಾನಸಿಕ ವ್ಯಾಪಾರ. ಇದರಿಂದ ಜೀವನದಲ್ಲಿ ಅವ್ಯಕ್ತ ಜಗತ್ತಿನ ಸನಾತನ ತತ್ತ್ವವನ್ನು ಹತ್ತಿರದಿಂದ ಅನುಭವಿಸಲು ಸಾಧ್ಯ ಎಂಬುದು ಆತನ ಭಾವನೆ.

ಪ್ರಾರ್ಥನೆ, ನಿರ್ಭರತೆ ಪ್ರೇಮ—ಇವುಗಳೇ ಏಸುವಿನ ದೃಷ್ಟಿಯಲ್ಲಿ ಯೋಗ ಸಾಧನೆಗಳು. ಇವು ಪರಮಾತ್ಮನ ಸಾಹಚರ್ಯಕ್ಕೆ ಸಹಾಯಕಗಳು.

ಈ ಮತದಲ್ಲಿ ಯೋಗದ ಐದು ಹಂತಗಳು :

(೧) ಜನನ (Birth) [ಬುದ್ಧಿ ಪ್ರಜ್ಞೆಯ ಜನನ]

(೨) Baptism [ಮನಸ್ಸಿಗೆ ಬುದ್ಧಿ ಪ್ರಜ್ಞೆಯ ಸ್ನಾನ ಮಾಡಿಸುವುದು]

(೩) ದೇಹಾತ್ಮ ವಿನಾಶ (Annihilation) [ದೇಹಾತ್ಮಭಾವವಾದ ಅಹಂಕಾರಭಾವವನ್ನು ತ್ಯಜಿಸುವುದು]

(೪) ದಮನ (Crucifixion) [ಲೋಕಹಿತಕಾರ್ಯವನ್ನು ಮಾಡಲು ತನ್ನ ಸ್ವಂತ ಹಿತಗಳನ್ನು ದಮನ ಮಾಡುವುದು]

(೫) ಪುನರುಜ್ಜೀವನ (Resurrection) [ಮಾನವ ಜೀವನವನ್ನು ಕೊನೆಗೊಳಿಸಿ ಜೀವನ್ಮುಕ್ತನ ಜೀವನವನ್ನು ಪ್ರಾರಂಭಿಸುವುದು ಅಥವಾ ಮನುಷ್ಯತ್ವದಿಂದ ದೈವತ್ವಕ್ಕೇರುವುದು]

ಇಸ್ಲಾಂಧರ್ಮ ಮತ್ತು ಯೋಗ

ಅರೇಬಿಯಾದಲ್ಲಿ ಸುಮಾರು ೧೩೦೦ ವರ್ಷಗಳ ಹಿಂದೆ ಪ್ರವಾದಿ ಮಹಮದ್ ಬೋಧಿಸಿದ ಧರ್ಮಕ್ಕೆ 'ಇಸ್ಲಾಂ' ಎಂದು ಹೆಸರು. ಇದು ಪ್ರಪಂಚದ ಕಡೆಯ ಆದರೆ ಕನಿಷ್ಠವಲ್ಲದ ಧರ್ಮ. 'ಇಸ್ಲಾಂ' ಎಂಬ ಪದ 'ಸ್ಲಾಂ' ಎಂಬ ಪರ್ಷಿಯನ್ ಮೂಲಪದದಿಂದ ಬಂದಿದೆ. ಇದಕ್ಕೆ ಎರಡು ಅರ್ಥಗಳಿವೆ. ಒಂದು 'ಶಾಂತಿ' ಮತ್ತೊಂದು

'ದೈವಸಂಕಲ್ಪಕ್ಕರ್ಪಿಸುವುದು' ಯಾವನು ಶಾಂತಿಪ್ರಿಯನೋ ಮತ್ತು ದೈವಸಂಕಲ್ಪಕ್ಕೆ ತನ್ನನ್ನು ತಾನು ಅರ್ಪಿಸಿಕೊಳ್ಳುವನೋ ಅವನು 'ಮುಸಲ್ಮಾನ' ಎಂದರ್ಥ.

ಇವರ ಪವಿತ್ರವಾದ 'ಕೊರಾನ್' ಗ್ರಂಥದಲ್ಲಿ ಹೀಗೆ ಹೇಳಿದೆ.

೧) ಯಾರನ್ನೂ ಕೊಲ್ಲಬೇಡ ; ದೇವರು ಕೊಲ್ಲುವುದನ್ನು ಬಹಿಷ್ಕರಿಸಿದ್ದಾನೆ.
೨) ಅಸತ್ಯವಚನಗಳನ್ನು ನುಡಿಯಬೇಡ.
೩) ಹೆಂಗಸರಾಗಲಿ, ಗಂಡಸರಾಗಲಿ ಕದ್ದರೆ ಶಿಕ್ಷೆಗೆ ಗುರಿಯಾಗಿ ಕೈಗಳನ್ನು ಕಳೆದುಕೊಳ್ಳುತ್ತಾರೆ.
೪) ಮಾದಕ ವಸ್ತುಗಳೆಲ್ಲ ರಾಕ್ಷಸ ಗುಣಗಳಿಗೆ ಮೂಲ ಮತ್ತು
೫) ಯಾರು ಧರ್ಮಕ್ಕೆ ವಿರುದ್ಧವಾದ ವಿಷಯ ಸುಖವನ್ನು ಬಯಸುವುದಿಲ್ಲವೋ ಮತ್ತು ಅಂತರಂಗದ ಎಚ್ಚರಿಕೆಯಿಂದ ಮತ್ತು ದೃಢತೀರ್ಮಾನದಿಂದ ತಮ್ಮ ಇಂದ್ರಿಯಗಳನ್ನು ಗೆಲುವರೋ ಅಂತಹವರು ಮಾತ್ರ ಜೀವನದಲ್ಲಿ ವಿಜಯಿಗಳು.

ಇವುಗಳು ಪಾತಂಜಲ ಯೋಗದರ್ಶನದ ಯಮನಿಯಮಗಳಿಗೆ ಸಂವಾದಿಯಾದುದಾಗಿವೆ. ಇಸ್ಲಾಂನ ನಾಲ್ಕು ಮೂಲಭೂತ ಅಂಗಗಳಲ್ಲಿ ಪ್ರಾರ್ಥನೆಯೇ ಮೊದಲನೆಯದು. ಇದನ್ನು ಅವರು 'ನಮಾಜ್' ಎನ್ನುತ್ತಾರೆ. ನಮಾಜ್ ಹೃದಯದ ಭಾವಗಳ ಒಂದು ಅಭಿವ್ಯಕ್ತಿ. ದೇವರೆದುರು ಭಕ್ತಿಯುತ ಕೋರಿಕೆಗಳನ್ನು ಆತ್ಮದ ಪ್ರಾಮಾಣಿಕ ಆಸೆಗಳನ್ನು ತೋಡಿಕೊಳ್ಳುವ ಪೂಜ್ಯಭಾವದ ಪ್ರಕಟರೂಪ. ನಮಾಜ್ ಹೃದಯ ಶುದ್ಧಿಯ ಉತ್ತಮ ಸಾಧನ. ದೈವ ಸಂಯೋಗಕ್ಕೆ ಮುಖ್ಯಮಾರ್ಗ. ಮುಸ್ಲಿಮರು ನಿತ್ಯವೂ ಐದುಬಾರಿ ಈ ರೀತಿಯ ಪ್ರಾರ್ಥನೆ ಸಲ್ಲಿಸುತ್ತಾರೆ. ಅವು ಹೀಗಿವೆ.

೧) ಸಲತ್—ಉಲ್—ಫಜ್ರ್ : ಸೂರ್ಯೋದಯಕ್ಕೆ ಮೊದಲು ಸಲ್ಲಿಸುವ ಪ್ರಾರ್ಥನೆ.
೨) ಸಲತ್—ಉಲ್—ಜುಹ್ರ್ : ಪೂರ್ವಾಹ್ನ ಮಾಡುವ ಪ್ರಾರ್ಥನೆ.
೩) ಸಲತ್—ಉಲ್—ಮೋಗ್ರಿಬ್ ; ಸೂರ್ಯಾಸ್ತ ಸಮಯದ ಪ್ರಾರ್ಥನೆ.
೪) ಸಲತ್—ಉಲ್—ಅಸ್ರ್ : ಅಪರಾಹ್ನ ಸಲ್ಲಿಸುವ ಪ್ರಾರ್ಥನೆ.
೫) ಸಲತ್—ಉಲ್—ಇಶಾ : ಸಂಜೆಯ ಪ್ರಾರ್ಥನೆ.

ಈ ನಮಾಜ್ ಎಂಬುದು ಯೋಗದ ಸರಳ ಹಾಗೂ ಸಂಕ್ಷಿಪ್ತರೂಪವೆಂಬುದು ಜನಾಬ್ ನಿಜಾಮಿಯವರ ಅಭಿಪ್ರಾಯವಾಗಿದೆ. "Namaz, the Yoga of Islam" ಎಂಬ ಗ್ರಂಥದಲ್ಲಿ ನಿಜಾಮಿಯವರು ಹೇಳಿರುವ ವಿಚಾರವನ್ನೇ ಇಲ್ಲಿ ಪ್ರಸ್ತಾಪಿಸಲಾಗಿದೆ. ಒಂದು ರಕಾತ್‌ನಲ್ಲಿ ಏಳು ವಿವಿಧ ಭಂಗಿ (ಆಸನ) ಗಳಿವೆ. ಇಂತಹ ಹದಿನೇಳು ರಕಾತ್‌ಗಳು ಒಂದು ದಿನದ ನಮಾಜ್‌ನಲ್ಲಿ ಸಮಾವೇಶಗೊಳ್ಳುತ್ತವೆ.

ಆದ್ದರಿಂದ ದಿನಕ್ಕೆ ಐದುಬಾರಿ ನಮಾಜ್ ಮಾಡುವ ಒಬ್ಬ ಮುಸಲ್ಮಾನನು $17 \times 7 = 199$ ಸರಳ ಆಸನಗಳನ್ನು ಮಾಡುತ್ತಾನೆ. ಇಲ್ಲಿಯ ಆಸನಗಳು ಪುನರಾವರ್ತಿತವಾಗುತ್ತವೆ. ನಿಲ್ಲುವುದು, ಮಂಡಿಯೂರಿ ನಮಸ್ಕರಿಸುವುದು, ಭದ್ರಾಸನದಲ್ಲಿ ಕುಳಿತುಕೊಳ್ಳುವುದು ಇತ್ಯಾದಿ, ಇವು ಯೋಗಶಾಸ್ತ್ರದ ಆಸನಗಳಿಂದ ವಜ್ರಾಸನ, ಅರ್ಧಶೀರ್ಷಾಸನ ಮತ್ತು ಉತ್ಕಟಾಸನಗಳ ಸರಳೀಕೃತ ರೂಪಗಳೆಂದು ಗ್ರಂಥಕರ್ತರ ಅಭಿಪ್ರಾಯವಾಗಿದೆ.

ನಮಾಜ್‌ಗೆ ಮೊದಲು ಶುಚಿಯಾಗಲು ಮುಖ ಮಾರ್ಜನ ಹಸ್ತಪಾದ ಪ್ರಕ್ಷಾಲನೆಗಳನ್ನು ಮಾಡಿಕೊಂಡು ಸಿದ್ಧನಾಗಬೇಕು. ಇದೂ ಸಹ ನಮಾಜ್‌ನ ಒಂದು ಅಂಗ. ಪ್ರಾರ್ಥನೆಯ ಸಮಯದಲ್ಲಿ ಅಲ್ಲಾನ ಮೇಲೆ ಮನಸ್ಸನ್ನು ಕೇಂದ್ರೀಕರಿಸಬೇಕು. ನಮಾಜ್ ಮಾಡುವುದರಿಂದ ಮನಶ್ಶಾಂತಿ, ಆರೋಗ್ಯ ಲಭಿಸುತ್ತವೆ. ನಮಾಜ್‌ನ ಪ್ರಮುಖ ಉದ್ದೇಶ ದೇಹ ಮತ್ತು ಮನಸ್ಸುಗಳ ಸಾಮರಸ್ಯವನ್ನು ಸಾಧಿಸುವುದೇ ವಿನಃ ಕೇವಲ ಶಾರೀರಿಕ ಶಕ್ತಿ ಸಂವರ್ಧನೆಯಲ್ಲ. ಈ ಕಾರಣಕ್ಕೋಸ್ಕರವೇ ಕಠಿಣವಾದ ಆಸನಗಳನ್ನು ಅಲ್ಲಿ ಅನುಮೋದಿಸಿಲ್ಲವೆಂದು ಪೂರ್ವೋಕ್ತ ಗ್ರಂಥದಲ್ಲಿ ಹೇಳಲಾಗಿದೆ.

ಪವಿತ್ರ ಖೊರಾನಿನ ಹನ್ನೆರಡನೆಯ ಅಧ್ಯಾಯದ ಐವತ್ತೂರನೇ ಸಂದೇಶದಲ್ಲಿ ಹೀಗೆ ಬರೆದಿದೆ. ಖಂಡಿತವಾಗಿಯೂ ನನ್ನ ಪ್ರಭು (ದೇವರು) ರಕ್ಷಕ ಮತ್ತು ದಯಾಮಯ. ಇವನು ನನ್ನನ್ನು ಮೃಗದರ್ಜೆಯಿಂದ (Amamarh) ಮನುಷ್ಯದರ್ಜೆಗೆ (Lawwamah) ಮತ್ತು ಮನುಷ್ಯ ದರ್ಜೆಯಿಂದ ದೈವತ್ವಕ್ಕೆ (Mutmaimah) ಕರೆದೊಯ್ಯುತ್ತಾನೆ."

"ಸರ್ವದೇವ ನಮಸ್ಕಾರಂ ಕೇಶವಂ ಪ್ರತಿಗಚ್ಛತಿ" ಎಂಬಂತೆ ಎಲ್ಲ ಧರ್ಮಗಳ ಸಾರವೂ ದೈವತ್ವವನ್ನು ಪಡೆಯುವುದೇ ಆಗಿದೆ.

ಪುಸ್ತಕ ಲೋಕ

ಭಗವತ್ಸಮುಖದ ಅನುಷ್ಠಾನ :- ಮೂಲ : ಬ್ರದರ್ ಲಾರೆನ್ಸ್ ; ಕನ್ನಡಾನುವಾದ : ಶ್ರೀಮತಿ ಸೇತೂಬಾಯಿ; ಪ್ರಕಟಣೆ : ಕ್ರೈಸ್ತ ಸಾಹಿತ್ಯ ಸಂಘ, ಮದರಾಸು. ಪುಟಗಳು 42+V, ಬೆಲೆ 3–50 ರೂಪಾಯಿಗಳು.

ಹದಿನೇಳನೆಯ ಶತಮಾನದಲ್ಲಿದ್ದ ಬ್ರದರ್ ಲಾರೆನ್ಸ್‌ರವರ ನಾಲ್ಕು ಸಂವಾದಗಳು ಮತ್ತು ಅವರೇ ಬರೆದ ಹದಿನೈದು ಕಾಗದಗಳನ್ನು ಒಟ್ಟುಗೂಡಿಸಿ Practice of the Presence of God ಎಂಬ ಪುಸ್ತಿಕೆಯನ್ನು ಲಂಡನ್ನಿನ Epworth Press ನವರು ಬಹಳ ಹಿಂದೆಯೇ ಪ್ರಕಟಿಸಿದ್ದರು. ಅದನ್ನು ಈಗ ಶ್ರೀಮತಿ ಸೇತೂಬಾಯಿಯವರು ಭಗವತ್ಸಮುಖದ ಅನುಷ್ಠಾನ ಎಂಬ ಹೆಸರಿನಲ್ಲಿ ಕನ್ನಡಕ್ಕೆ ಅನುವಾದಿಸಿದ್ದು ಈ ಕಿರು ಪುಸ್ತಕವನ್ನು ಮದರಾಸಿನ Christian Literature Society ಯವರು ಪ್ರಕಟಿಸಿದ್ದಾರೆ.

ಸಂತರು ವಿಶ್ವದ ಮತ–ಧರ್ಮಗಳು ಮಾನವ ಕುಲಕ್ಕೆ ನೀಡಿದ ಅಮೂಲ್ಯ ಕಾಣಿಕೆಗಳು. ಅವರು ತಮ್ಮ ತಮ್ಮ ಮತ–ಧರ್ಮಗಳ ಪ್ರವಾದಿಗಳು ಸಾರಿದ ಸಂದೇಶವನ್ನು ಕಾಲಕಾಲಕ್ಕೆ ಜೀವಂತಗೊಳಿಸಿ ಅವುಗಳ ಸರ್ವಕಾಲಿಕ ಸತ್ಯಗಳನ್ನು ಪುನಶ್ಚೇತನಗೊಳಿಸಿದ್ದಾರೆ. ದೈವಾರಾಧನೆಯನ್ನು ಕೇವಲ ಒಂದು ಯಾಂತ್ರಿಕ ದೈನಂದಿನ ಕಾರ್ಯಕ್ರಮವಾಗಿ ಮಾಡಿರುವ ಪೂಜಾರಿಗಳೊಂದಿಗೆ ಸಂತರನ್ನು ಹೋಲಿಸಿದರೆ ಸಂತರ ಧಾರ್ಮಿಕ ಮಹತ್ವದ ಪರಿಚಯವಾಗುತ್ತದೆ. ಅಂತಹ ಸಂತರ ಸಾಲಿಗೆ ಸೇರಿದವರು ಸಹೋದರ ಲಾರೆನ್ಸ್‌ರವರು.

ಲಾರೆನ್ಸ್‌ರವರ ವೈಯುಕ್ತಿಕ ಜೀವನದ ಎಲ್ಲ ವಿವರಗಳೂ ತಿಳಿಯದು. ಅವರು ಫ್ಲ್ಯುಬರ್ಟ್ ಎಂಬ ಖಜಾಂಚಿಗೆ ಸೇವಕರಾಗಿ ಮುಟ್ಟಿದ್ದೆಲ್ಲಾ ಮುರಿದು ಹಾಕುವ ವಕ್ರ ಸ್ವಭಾವದವರಾಗಿದ್ದರೆಂದೂ ನಂತರ ಕ್ರೈಸ್ತ ಮಠವೊಂದರಲ್ಲಿ ಅಡುಗೆಯವರಾಗಿ ಸೇರಿ ಅಡುಗೆಯ ಕೆಲಸವನ್ನು ಮಾಡುತ್ತಿದ್ದರೆಂದೂ ಅವರೊಡನೆ ನಡೆಸಿದ ಸಂವಾದಗಳಿಂದ ತಿಳಿದಿದೆ.

ದೇವರ ಸಾನ್ನಿಧ್ಯದಲ್ಲಿ ಸದಾ ನೆಲೆಸಿದ್ದು ಅದನ್ನು ಅನುಭವಿಸುವುದು ಹೇಗೆ ಎಂಬುದನ್ನು ತಿಳಿಸುವುದೇ ಈ ಪುಸ್ತಿಕೆಯ ತಿರುಳು. ಭಗವದನುಭವ, ಸಾನ್ನಿಧ್ಯಗಳು ಸಂತರಿಗೆ ಆರೋಗ್ಯವಂತ ಮನುಷ್ಯರಿಗೆ ನಿರಾತಂಕ ಉಸಿರಾಡಿಸುವಷ್ಟೇ ಸಹಜ. ತಮ್ಮ ಜನನ, ಇರುವಿಕೆ ಎಲ್ಲ ದೈವ ಸಾಕ್ಷಾತ್ಕಾರಕ್ಕಾಗಿಯೇ ಎಂದು ಭಾವಿಸುವ ಸಂತರು ತಮ್ಮ

ದೈನಂದಿನ ಚಟುವಟಿಕೆಗಳೆಲ್ಲದರಲ್ಲಿಯೂ ದೇವರ ಪ್ರತ್ಯಕ್ಷ ಇರುವಿಕೆಯನ್ನು ಕಾಣುತ್ತಾರೆ.

ಶ್ರೀಮತಿ ಸೇತೂಬಾಯಿಯವರ ಭಾಷಾಂತರ ಇಂಗ್ಲಿಷ್ ಮೂಲವನ್ನು ಕಟ್ಟುನಿಟ್ಟಾಗಿ ಅನುಸರಿಸಿದ್ದರೂ ಮೂಲದ ಸ್ವಾರಸ್ಯವನ್ನು ಉಳಿಸಿಕೊಂಡಿದೆ. ಲಾರೆನ್ಸ್‌ರವರ 18ನೆಯ ವಯಸ್ಸಿನಲ್ಲಿ ಕಂಡುಬಂದ ಪರಿವರ್ತನೆಯ ವಿವರಣೆ ಕನ್ನಡದಲ್ಲಿ ಚೆನ್ನಾಗಿ ಮೂಡಿಬಂದಿದೆ. “ಚಳಿಗಾಲದಲ್ಲಿ ಒಂದು ವೃಕ್ಷ ಪತ್ರರಹಿತವಾಗಿದ್ದುದನ್ನು ಕಂಡು ಅಲ್ಪಾವಧಿಯಲ್ಲಿಯೇ ಪುನಃ ಚಿಗುರಿ ನವಪತ್ರಗಳೂ, ನಂತರ ಪುಷ್ಪಗಳೂ ಫಲಗಳೂ ಅದರಲ್ಲಿ ಕಾಣಿಸಿಕೊಳ್ಳುವುವೆಂದು ಯೋಚಿಸಿದಾಗ ಭಗವಂತನ ಒಂದು ದಿವ್ಯ ಯೋಜನೆಯ ಮತ್ತು ಶಕ್ತಿಯ ಉನ್ನತ ದರ್ಶನವಾಗಿ ಅದು ಅವರ ಆತ್ಮದಿಂದ ಎಂದಿಗೂ ಅಳಿಸಲಾಗಲಿಲ್ಲವಂತೆ” ಎಂಬುದು ಗಂಭೀರ ಆದರೂ ಭಾವಭರಿತವಾದ ಅನುವಾದ.

ಲಾರೆನ್ಸ್‌ರವರು “I did not engage in a religious life but for the love of God, and I have endeavoured to act only for him ; Whatever becomes of me, whether I be lost or saved, I will always continue to act purely for the love of God. I shall have this good atleast, that till death, I shall have done all that is in me to love Him” ಎಂಬುದಾಗಿ ಭಗವತ್ಪ್ರೇಮವನ್ನು ಕುರಿತು ಹೇಳಿದ್ದಾರೆ ಈ ಮಾತುಗಳು ಕನ್ನಡದಲ್ಲಿ “ನಾನು ಭಗವತ್ಪ್ರೇಮದ ಸಲುವಾಗಿ ಹೊರತು ಬೇರೆ ಯಾವ ಕಾರಣದಿಂದಲೂ ಧಾರ್ಮಿಕ ಜೀವನದಲ್ಲಿ ಪ್ರವೇಶಿಸಲಿಲ್ಲ. ಆತನ ಸಲುವಾಗಿಯೇ ಕರ್ಮ ಮಾಡುವುದರಲ್ಲಿ ಶ್ರಮಿಸಿದೆ. ನನಗೆ ಆತ್ಮನಾಶವಾಗಲಿ, ಆತ್ಮೋದ್ಧಾರವಾಗಲಿ, ಕೇವಲ ಭಗವತ್ಪ್ರೇಮಕ್ಕಾಗಿಯೇ ಕರ್ಮ ಮಾಡುವುದನ್ನು ಮುಂದುವರಿಸುವೆ. ನಾನು ಮಡಿಯುವವರೆಗೆ ನನ್ನ ಕೈಲಾದ್ದನ್ನೆಲ್ಲಾ ಆತನನ್ನು ಪ್ರೀತಿಸುವುದಕ್ಕಾಗಿಯೇ ಮಾಡಿವೆ ಎಂಬ ಉತ್ತಮ ಫಲವಾದರೂ ಕೊನೆಯ ಪಕ್ಷ ನನಗೆ ದೊರಕುವುದು.” ಎಂಬ ಮಾತುಗಳಲ್ಲಿ ಅನುವಾದ ಭಾವಪೂರ್ಣವಾಗಿ ಮೂಡಿಬಂದಿದೆ. ಲಾರೆನ್ಸ್‌ರ ಮಾತುಗಳಲ್ಲಿನ ಸಂವೇದನೆ, ಉದ್ವೇಗ ಸೇತೂಬಾಯಿಯವರ ಭಾಷಾಂತರದಲ್ಲಿ ಧ್ವನಿತವಾಗಿದೆ.

ಲಾರೆನ್ಸ್‌ರವರು ಬರೆದಿರುವ ಪತ್ರಗಳು ಸಹ ಮಹತ್ವಪೂರ್ಣವಾಗಿವೆ. ಉನ್ನತ ಮಟ್ಟದ ಭಾವನೆಗಳು ಅವುಗಳಲ್ಲಿವೆ ಭಗವತ್ಸಮ್ಮುಖದ ಅನುಷ್ಠಾನವನ್ನು ಸರಿಯಾಗಿ ನಡೆಸಲು ಹೃದಯದಲ್ಲಿ ಭಗವಂತ ಏಕಸ್ವಾಮ್ಯ ಪಡೆಯಬೇಕು : the heart must be empty of all other things ; because God will possess the heart *alone* ; and as He cannot possess it *alone*, without emptying it of all besides, so neither can He act there and do in it what He pleases, unless it be left vacanr to Him. ಇದು ಕನ್ನಡದಲ್ಲಿ “ಹೃದಯವು ಅನ್ಯವಿಷಯ

ರಹಿತವಾಗಿರಬೇಕು. ಏಕೆಂದರೆ ಭಗವಂತನು ಅಲ್ಲಿ ಏಕಸ್ವಾಮ್ಯವನ್ನು ಪಡೆಯಬೇಕು. ಇತರ ವಿಷಯಗಳನ್ನೆಲ್ಲಾ ಅಲ್ಲಿಂದ ತೆಗೆದು ಹೊರಗೆ ಹಾಕಿದ ಹೊರತು ಆತನು ಏಕಸ್ವಾಮ್ಯದಿಂದ ಅಲ್ಲಿದ್ದು ತನ್ನ ಆಡಳಿತವನ್ನು ನಡೆಸಲಾಗುವುದೂ ಇಲ್ಲ. ತನ್ನ ಇಚ್ಛೆ ಬಂದಂತೆ ಅಲ್ಲಿ ಮಾಡಲಾಗುವುದೂ ಇಲ್ಲ." ಎಂದಾಗಿದೆ. ಇಲ್ಲಿ 'ಏಕಸ್ವಾಮ್ಯ' ಎಂಬುದನ್ನು 'ತಾನೊಬ್ಬನೇ' ಎಂಬ ಅರ್ಥದಲ್ಲಿ ಪ್ರಯೋಗಿಸಿದೆ.

ನಲವತ್ತೆರಡು ಪುಟಗಳ ಈ ಪುಸ್ತಿಕೆಯ ಒಂದೆರಡು ಭಾಗಗಳನ್ನು ಇಲ್ಲಿ ಉದ್ಧರಿಸುವುದರ ಉದ್ದಿಶ್ಯ ಭಾಷಾಂತರ ಎಷ್ಟರಮಟ್ಟಿಗೆ ಸಫಲವಾಗಿದೆ ಎಂದು ತೋರಿಸಲಷ್ಟೆ. ಮೂಲವಿಲ್ಲದೆಯೇ ಇದನ್ನು ಓದಿದರೂ, ಓದಿಸಿಕೊಂಡು ಹೋಗುವ ಅರ್ಥ-ಭಾವಪ್ರವಾಹ ಪುಸ್ತಿಕೆ ಇದು. ನೈಜ ಅನುಭವಗಳ ಭಂಡಾರವಾದ ಸಹೋದರ ಲಾರೆನ್ಸರವರ ಪುಸ್ತಕವನ್ನು ಅನುವಾದಿಸುವುದು ಕಠಿಣವಾದ ಕೆಲಸ. ಅನುಭವವನ್ನು ಶಬ್ದಗಳಲ್ಲಿ ಅಭಿವ್ಯಕ್ತಿಸುವುದೇ ಕಷ್ಟ. ಇನ್ನು ಅನುಭಾವವನ್ನು (mystic experience) ಶಬ್ದಗಳಲ್ಲಿ ಅಭಿವ್ಯಕ್ತಿಸುವುದು, ಒಂದು ಭಾಷೆಯಿಂದ ಮತ್ತೊಂದು ಭಾಷೆಗೆ ಅನುವಾದಿಸುವುದು, ಹೆಚ್ಚು ಶ್ರಮದಾಯಕ. ಆದರೆ ಇದನ್ನು ಶ್ರೀಮತಿ ಸೇತೂಬಾಯಿಯವರು ಯಶಸ್ವಿಯಾಗಿ ನಿರ್ವಹಿಸಿದ್ದಾರೆ. ಅದಕ್ಕಾಗಿ ಓದುಗರು ಕೃತಜ್ಞರಾಗಿರಬೇಕು. ಇದರಿಂದ ಕನ್ನಡ ಶ್ರೀಮಂತವಾಗಿದೆ. ಶ್ರೀಮತಿ ಸೇತೂಬಾಯಿಯವರು ಶ್ರದ್ಧೆ ಮತ್ತು ಪರಿಶ್ರಮದಿಂದ ಇನ್ನೂ ಇಂತಹ ಹಲವಾರು ಕೃತಿಗಳನ್ನು ಕನ್ನಡಕ್ಕೆ ತರಬೇಂದು ಹಾರೈಸುತ್ತೇವೆ.

ಡಿ. ಎಲ್. ಪಾಟೀಲ

ಮಾನವಿಕ ಕರ್ಣಾಟಕ

ವಿಷಯ ಸೂಚಿಕೆ

ಸಂಪುಟ ೧೨

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೮೧-೮೨

ವಿಷಯ ಸೂಚಿ

ಲೇಖನಗಳು

೧	ಅಭಿಜ್ಞಾನ ಶಾಕುಂತಲ (ಚತುರ್ಥಾಂಕ)– ಭಾಷಾಂತರಗಳ ತೌಲನಿಕ ಅಧ್ಯಯನ	ಹರಿತಸ ಅನಂತಶರ್ಮ	೧೨–೩
೨	ಅರವಿಂದ ದರ್ಶನ	ವಿ. ಎನ್. ಶೇಷಗಿರಿರಾವ್	೧೨–೩
೩	ಇನಾಂ ಗ್ರಾಮಗಳ ವಿಷಯದಲ್ಲಿ ದಿವಾನರವರು ಮಾಡಿದ ಹುಕ್ಕುಂ ಮತ್ತು ಗ್ರಾಮಪಾಥೇಯ	ಲೇ. ಎಂ.ಎಸ್. ಪುಟ್ಟಣ್ಣ ಸಂಗ್ರಹ : ಎಚ್.ಎಸ್. ಸುಜಾತ	೧೨–೩
೪	ಕಲಂಕಾರಿ ಕಲಾವಿದ ಕೋಡೂರು ರಾಮಮೂರ್ತಿ	ಪಿ.ಆರ್. ತಿಪ್ಪೇಸ್ವಾಮಿ	೧೨–೪
೫	ಕಲಾವಿದ ಹರ್ತಿಕೋಟೆ ಸುಬ್ಬಣ್ಣ	,,	೧೨–೧
೬	ಚಿಂತನ–೧೧	ಟಿ.ವಿ. ವೆಂಕಟಾಚಲಶಾಸ್ತ್ರೀ	೧೨–೩
೭	ತೊದವರ ಮರಣ ಸಂಪ್ರದಾಯಗಳು	ಅಂಬಳಿಕೆ ಹಿರಿಯಣ್ಣ	೧೨–೪
೮	ದ್ವೈತ ವೇದಾಂತ	ಮೂಲ : ಎಸ್.ಎಸ್. ರಾಘವಾಚಾರ್ ಅನು : ಸಿ. ಸೇತೂಬಾಯಿ	೧೨–೨
೯	ಧರ್ಮಗಳಲ್ಲಿ ಯೋಗ	ಕೆ. ಕೇಶವಮೂರ್ತಿ	೧೨–೪
೧೦	ನಮಗೆ ಎಂತಹ ತಂತ್ರಜ್ಞಾನ ಬೇಕು ಅಥವಾ ತಂತ್ರಜ್ಞಾನದ ಆಯ್ಕೆ	ಎಂ.ವಿ. ಶ್ರೀನಿವಾಸಗೌಡ	೧೨–೨
೧೧	ನಾಮಾವಳಿಯಲ್ಲಿ 'ಗಂಧವಾರಣ' ಶಬ್ದ : ಒಂದು ಟಿಪ್ಪಣಿ	ಟಿ.ವಿ. ವೆಂಕಟಾಚಲಶಾಸ್ತ್ರೀ	೧೨–೪
೧೨	ಪ್ರಾಚೀನ ಪಾಶ್ಚಾತ್ಯ ತಾತ್ವಿಕ ಚಿಂತನೆ	ವಿ.ಎನ್. ಶೇಷಗಿರಿರಾವ್	೧೨–೧
೧೩	ಪ್ರಾಚೀನ ಪಾಶ್ಚಾತ್ಯ ತಾತ್ವಿಕ ಚಿಂತನೆ–ಒಂದು ಸ್ಥೂಲ ವಿವೇಚನೆ	,,	೧೨–೪
೧೪	ಭಾರತೀಯ ರೈಲು ವ್ಯವಸ್ಥೆ– ಒಂದು ನೋಟ	ಜಿ. ಎಚ್. ಸುರೇಶ್, ವೈ.ಎ. ದೇವಪಾಲ್	೧೨–೨

೧೫ ಭಾಷಾಂತರದಲ್ಲಿ ಪರ್ಯಾಯ ಪದಗಳು	ಎಚ್. ಎಸ್. ಹರಿಶಂಕರ್	೧೨–೧
೧೬ ವೈಜ್ಞಾನಿಕತೆ–ವೈಚಾರಿಕತೆಯ ಎರಡನೆಯ ಮುಖ	ಡಿ.ಎಲ್. ಪಾಟೀಲ	೧೨–೨
೧೭ ಶಾಸನಗಳ ಯಥಾರ್ಥ ಭಾಷಾಂತರ	ಮೂಲ : ಪ್ರೊ. ಜಿ.ಸಿ.ವಿ. ಸುಬ್ಬರಾವ್ ಅನು : ಎನ್.ಎಸ್. ಶಾರದಾ ಪ್ರಸಾದ್	೧೨–೨
೧೮ ಶಾಸನಾನುವಾದ–ಕೆಲವು ಸಮಸ್ಯೆಗಳು	ಎಚ್.ಎಂ. ನಾಗರಾಜರಾವ್	೧೨–೪
೧೯ ಶಿಕ್ಷಣ ಮತ್ತು ಜೀವನ	ಬಿ. ಕೃಷ್ಣ	೧೨–೧
೨೦ ಶ್ರವಣಬೆಳಗೊಳದ ನಿಶಿದಿ ಗಲ್ಲುಗಳು–ವೀರಗಲ್ಲುಗಳು	ಬಾ.ರಾ. ಗೋಪಾಲ್	೧೨–೨
೨೧ ಸಾಳುವ ಇಮ್ಮಡಿ ನರಸಿಂಹನ ಹಳೇಹಳ್ಳಿ ದಾನಶಾಸನ	ಎಚ್.ಎಂ. ನಾಗರಾಜರಾವ್	೧೨–೩

ಪುಸ್ತಕಲೋಕ

ಭಗವತ್ಸನ್ಮುಖದ ಅನುಷ್ಠಾನ (ಮೂಲ : ಬದರ್ ಲಾಡೆನ್ಸ್, ಅನು : ಸೇತೂಬಾಯಿ)	ಡಿ.ಎಲ್. ಪಾಟೀಲ	೧೨–೪
ಭಾರತೀಯ ಸಾಮಾಜಿಕ ಅಧ್ಯಯನ (ಲೇ : ಪ್ರೊ. ಬಿ.ಆರ್. ಕೃಷ್ಣ)	ಸೋಮೇಗೌಡ ಜಿಣಗನಹಳ್ಳಿ	೧೨–೨

ಲೇಖಕ ಸೂಚಿ

ಲೇಖಕರು

೧	ಅನಂತಶರ್ಮ, ಹರಿತಸ	ಅಭಿಜ್ಞಾನ ಶಾಕುಂತಲ (ಚತುರ್ಥಾಂಕ)- ಭಾಷಾಂತರಗಳ ತೌಲನಿಕ ಅಧ್ಯಯನ	೧೨-೩
೨	ಕೃಷ್ಣ, ಬಿ.	ಶಿಕ್ಷಣ ಮತ್ತು ಜೀವನ	೧೨-೧
೩	ಕೇಶವಮೂರ್ತಿ, ಕೆ.	ಧರ್ಮಗಳಲ್ಲಿ ಯೋಗ	೧೨-೪
೪	ಗೋಪಾಲ್, ಬಾ.ರಾ.	ಶ್ರವಣಬೆಳಗೊಳದ ನಿಶಿದಿಗಲ್ಲುಗಳು- ವೀರಗಲ್ಲುಗಳು	೧೨-೨
೫	ತಿಪ್ಪೇಸ್ವಾಮಿ, ಪಿ.ಆರ್.	ಕಲಾವಿದ ಹರ್ತಿಕೋಟೆ ಸುಬ್ಬಣ್ಣ	೧೨-೧
೬	,,	ಕಲಂಕಾರಿ ಕಲಾವಿದ ಕೋಡೂರು ರಾಮಮೂರ್ತಿ	೧೨-೪
೭	ದೇವಪಾಲ್, ವೈ.ಎ. (ಜಿ.ಎಚ್. ಸುರೇಶ್ ಅವರೊಂದಿಗೆ)	ಭಾರತೀಯ ರೈಲು ವ್ಯವಸ್ಥೆ-ಒಂದು ನೋಟ	೧೨-೨
೮	ನಾಗರಾಜರಾವ್, ಎಚ್.ಎಂ.	ಸಾಳುವ ಇಮ್ಮಡಿ ನರಸಿಂಹನ ಹಳೇಹಳ್ಳಿ ದಾನಶಾಸನ	೧೨-೩
೯	,,	ಶಾಸನಾನುವಾದ-ಕೆಲವು ಸಮಸ್ಯೆಗಳು	೧೨-೪
೧೦	ಪಾಟೀಲ, ಡಿ.ಎಲ್.	ವೈಜ್ಞಾನಿಕತೆ-ವೈಚಾರಿಕತೆಯ ಎರಡನೆಯ ಮುಖ	೧೨-೨
೧೧	ರಾಘವಾಚಾರ್, ಎಸ್.ಎಸ್.	ದ್ವೈತ ವೇದಾಂತ	೧೨-೨
೧೨	ವೆಂಕಟಾಚಲಶಾಸ್ತ್ರೀ, ಟಿ. ವಿ.	ಚಿಂತನ-೧೧	೧೨-೩
೧೩	,,	ನಾಮಾವಳಿಯಲ್ಲಿ 'ಗಂಧವಾರಣ' ಶಬ್ದ : ಒಂದು ಟಿಪ್ಪಣಿ	೧೨-೪
೧೪	ಶಾರದಾಪ್ರಸಾದ್, ಎಸ್.ಎಸ್.	ಶಾಸನಗಳ ಯಥಾರ್ಥ ಭಾಷಾಂತರ	೧೨-೨
೧೫	ಶೇಷಗಿರಿರಾವ್, ವಿ.ಎನ್.	ಪ್ರಾಚೀನ ಪಾಶ್ಚಾತ್ಯ ತಾತ್ತ್ವಿಕ ಚಿಂತನೆ	೧೨-೧
೧೬	,,	ಅರವಿಂದ ದರ್ಶನ	೧೨-೩
೧೭	ಶೇಷಗಿರಿರಾವ್, ವಿ.ಎನ್.	ಪ್ರಾಚೀನ ಪಾಶ್ಚಾತ್ಯ ತಾತ್ತ್ವಿಕ ಚಿಂತನೆ- ಒಂದು ಸ್ಥೂಲ ವಿವೇಚನೆ	೧೨-೪

೧೮	ಶ್ರೀನಿವಾಸಗೌಡ, ಎಂ.ವಿ.	ನಮಗೆ ಎಂತಹ ತಂತ್ರಜ್ಞಾನ ಬೇಕು ಅಥವಾ ತಂತ್ರಜ್ಞಾನದ ಆಯ್ಕೆ	೧೨-೨
೧೯	ಸುಜಾತ, ಎಚ್.ಎಸ್. (ಸಂಗ್ರಹಕಾರರು)	ಇನಾಂ ಗ್ರಾಮಗಳ ವಿಷಯದಲ್ಲಿ ದಿವಾನರವರು ಮಾಡಿದ ಹುಕುಂ ಮತ್ತು ಗ್ರಾಮ ಪಾಥೇಯ	೧೨-೩
೨೦	ಸುಬ್ಬರಾವ್, ಜಿ.ಸಿ.ವಿ.	ಶಾಸನಗಳ ಯಥಾರ್ಥ ಭಾಷಾಂತರ	೧೨-೩
೨೧	ಸುರೇಶ್, ಜಿ.ಎಚ್. (ವೈ.ಎ. ದೇವಪಾಲ್ ಅವರೊಂದಿಗೆ)	ಭಾರತೀಯ ರೈಲು ವ್ಯವಸ್ಥೆ– ಒಂದು ನೋಟ	೧೨-೨
೨೨	ಸೇತೂಬಾಯಿ, ಸಿ.	ದ್ವೈತ ವೇದಾಂತ	೧೨-೨
೨೩	ಹರಿಶಂಕರ್, ಎಚ್.ಎಸ್.	ಭಾಷಾಂತರದಲ್ಲಿ ಪರ್ಯಾಯ ಪದಗಳು	೧೨-೧
೨೪	ಹಿರಿಯಣ್ಣ, ಅಂಬಳಿಕೆ	ತೊದವರ ಮರಣ ಸಂಪ್ರದಾಯಗಳು	೧೨-೪

ರಿಜಿಸ್ಟ್ರೇಷನ್ ಆಫ್ ನ್ಯೂಸ್ ಪೇಪರ್ಸ್ (ಸೆಂಟ್ರಲ್) 1956ರ 8ನೇ ನಿಯಮದ 4ನೇ ಫಾರಂಗೆ ಸಂಬಂಧಿಸಿದಂತೆ "ಮಾನವಿಕ ಕರ್ಣಾಟಕ" ತ್ರೈಮಾಸಿಕ ಪತ್ರಿಕೆಯ ಸ್ವಾಮಿತ್ವ ಮತ್ತು ಇತರ ವಿಷಯಗಳ ಬಾಬ್ತು ವಿವರ :

1.	ಪ್ರಕಾಶನ ಸ್ಥಳ	:	ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು–6
2.	ನಿಯತಕಾಲಿಕತೆ	:	ತ್ರೈಮಾಸಿಕ
3.	ಮುದ್ರಕರು	:	ಟಿ. ಬಾಬು, ಶ್ರೀ ಲಕ್ಷ್ಮಿ ಮುದ್ರಣಾಲಯ 728/1, 2ನೇ ಕ್ರಾಸ್, ರವೆ ಬೀದಿ, ಮೈಸೂರು
	ರಾಷ್ಟ್ರೀಯತೆ	:	ಭಾರತೀಯ
	ವಿಳಾಸ	:	ಶ್ರೀ ಲಕ್ಷ್ಮೀ ಮುದ್ರಣಾಲಯ, 728/1, 2ನೇ ಕ್ರಾಸ್, ರವೆ ಬೀದಿ, ಮೈಸೂರು
4.	ಪ್ರಕಾಶಕರ ಹೆಸರು	:	ಕೆ.ಟಿ. ವೀರಪ್ಪ, ನಿರ್ದೇಶಕ, ಪ್ರಸಾರಾಂಗ ಮಾನಸಗಂಗೋತ್ರಿ, ಮೈಸೂರು–6
	ರಾಷ್ಟ್ರೀಯತೆ	:	ಭಾರತೀಯ
	ವಿಳಾಸ	:	ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು–6
5.	ಸಂಪಾದಕರ ಹೆಸರು	:	ಡಾ. ಬಾ. ರಾ. ಗೋಪಾಲ್ ಡಾ. ಸಿ. ಎಂ. ಮುನಿರಾಮಪ್ಪ
	ರಾಷ್ಟ್ರೀಯತೆ	:	ಭಾರತೀಯ
	ವಿಳಾಸ	:	ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು-6
6.	ಪತ್ರಿಕಾ ಸ್ವಾಮಿತ್ವ ಮತ್ತು ವಿಳಾಸ ಬಂಡವಾಳದಲ್ಲಿ ನೂರಕ್ಕೆ 1ಕ್ಕಿಂತ ಹೆಚ್ಚು ಹಣ ಹಾಕಿರುವವರ ವಿವರ	:	ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು–5

ಕೆ. ಟಿ. ವೀರಪ್ಪನಾದ ನಾನು ಮೇಲಿನ ವಿವರಗಳಲ್ಲಿಯ ಎಲ್ಲ ವಿಷಯಗಳೂ ನನಗೆ ತಿಳಿದ ಮಟ್ಟಿಗೆ ಸತ್ಯವೆಂದು ಈ ಮೂಲಕ ಘೋಷಿಸುತ್ತೇನೆ.

(ಸಹಿ) ಕೆ. ಟಿ. ವೀರಪ್ಪ

ನಿರ್ದೇಶಕ ಹಾಗೂ ಪ್ರಕಾಶಕ, ಪ್ರಸಾರಾಂಗ, ಮೈಸೂರು–6

ಮೈಸೂರು ವಿಶ್ವವಿದ್ಯಾನಿಲಯದ ತ್ರೈಮಾಸಿಕಗಳು

—o—

- ಮಾನವಿಕ ಕರ್ಣಾಟಕ
- ವಿಜ್ಞಾನ ಕರ್ಣಾಟಕ
- ಪ್ರಬುದ್ಧ ಕರ್ಣಾಟಕ

ವಾರ್ಷಿಕ ಚಂದಾ

(ಪ್ರತಿಯೊಂದಕ್ಕೂ ಅಂಚೆ ವೆಚ್ಚ ಸೇರಿ)

ವಿದ್ಯಾರ್ಥಿಗಳಿಗೆ	....	ನಾಲ್ಕು ರೂಪಾಯಿ
ಇತರರಿಗೆ	....	ಆರು ರೂಪಾಯಿ
ಸಂಸ್ಥೆಗಳಿಗೆ	....	ಎಂಟು ರೂಪಾಯಿ

(ಆಜೀವ ಸದಸ್ಯತ್ವ : ನೂರು ರೂಪಾಯಿಗಳು)
(ಪ್ರತಿಯೊಂದಕ್ಕೂ)

ಡೈರೆಕ್ಟರ್
'ಪ್ರಸಾರಾಂಗ'
ಮಾನಸಗಂಗೋತ್ರಿ, ಮೈಸೂರು–೫೭೦ ೦೦೬